Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–45 | ನವೆಂಬರ್ 04–10, 2024 | ಪುಟ 16 | ರೂ.10/–
Volume-18 | Issue-45 | November 04-10, 2024 | Pages:16 | Price: 10/-

ಕರ್ನಾಟಕ : ನೆತ್ತಿಯ ಮೇಲೆ ತೂಗುವ ಕತ್ತಿಗಳು

ರಾಜ್ಯೋತ್ಸವದ ವಿಶೇಷ ಬರಹಗಳು

- 'ಸುಸ್ಥಿತಿ'ಯಲ್ಲಿ ಕರ್ನಾಟಕದ ಆರ್ಥಿಕತೆ: ದುಃಸ್ಥಿತಿಯಲ್ಲಿ ರಾಜ್ಯದ ಜನತೆ
- ಕರ್ನಾಟಕದ ಸಮಗ್ರ ಬೆಳವಣಿಗೆಯ ಉತ್ಸವ





ಗಣರಾಜ್ಯ ವ್ಯವಸ್ಥೆ: ರಾಜ್ಯಗಳ ಹಕ್ಕುಗಳ ಶಿಥಿಲಾವಸ್ಥೆ

ಬೆಲೆಗಳು ಗಗನಕ್ಕೆ ಮೋದಿ ಸರ್ಕಾರ ಗಾಢ ನಿದ್ದೆಗೆ

ಹಿಂದಿನ ಲೇಖನದಲ್ಲಿ ಕಾರ್ಮಿಕ ವರ್ಗದ ಸಾಮಾಜಿಕ ಮೂಲ ಮತ್ತು ಅದರಿಂದ ಕಾರ್ಮಿಕರ ಕಾರ್ಯಕ್ಷಮತೆ, ಉತ್ಪಾದಕತೆಯ ಮೇಲೆ, ಒಟ್ಟಾರೆ ಕೈಗಾರಿಕಾ ಬೆಳವಣಿಗೆಯ ಮೇಲೆ ಬೀರಿದ ಹಾನಿಕರ ಪರಿಣಾಮಗಳ ಬಗ್ಗೆ ಒಂದಿಷ್ಟು ವಿವರಿಸಲಾಗಿದೆ. ಅದು ಕಾರ್ಮಿಕರ ಒಗ್ಗಟ್ಟು ಮತ್ತು ಚಳುವಳಿಯನ್ನು ಕುಂದಿಸಿರುವ ಬಗ್ಗೆ ವಿಶ್ಲೇಷಿಸಲಾಗಿದೆ. ಈ ಲೇಖನದಲ್ಲಿ ಬಂಡವಾಳದ ಉಗಮ ಮತ್ತು ಅದಕ್ಕಿರುವ ಜಾತಿಯ ತಳಹದಿಯನ್ನು ಸವಿವರವಾಗಿ ವಿವರಿಸಲಾಗಿದೆ. ಓದಿ.

ಭಾರತದಲ್ಲಿ ಬಂಡವಾಳದ ಉಗಮ ಮತ್ತು ಜಾತಿ ವ್ಯವಸ್ಥೆ

ಜಿ.ಎನ್.ನಾಗರಾಜ್

ಭಾಗ 4

ಭಾರತದಲ್ಲಿ ಯಾವುದೇ ಸಾಮಾಜಿಕ ಬೆಳವಣಿಗೆ ಜಾತಿ ವ್ಯವಸ್ಥೆಯ ಪರಿಣಾಮಗಳಿಂದ ದೂರವಿರಲು ಸಾಧ್ಯವೇ? ಅದು ಭಾರತದ ವಿಶೇಷ ವಿಶಿಷ್ಟ ತೆಯಲ್ಲವೇ! ಭಾರತದಲ್ಲಿ ಯಾರ ಪರಿಚಯವಾದರೂ, ಯಾರ ಹೆಸರು ಕೇಳಿದರೂ ಬಹು ಸಂಖ್ಯೆಯ ಜನ ಇವರು ಯಾವ ಜಾತಿ ಎಂದು ಪ್ರಕಟವಾಗಿಯೇ ಕೇಳುತ್ತಾರೆ, ಹಾಗೆ ಕೇಳಲಾಗದಿದ್ದರೆ ತಿಳಿದುಕೊಳ್ಳಲು ಚಡಪಡಿಸುತ್ತಾರೆ.

ನಮ್ಮ ರಾಜಕಾರಣಿಗಳಂತೂ ಬಹಿರಂಗವಾಗಿ ತಮ್ಮ ಜಾತಿಯನ್ನು ಡಂಗುರ ಹೊಡೆಯುತ್ತಾ ಅದನ್ನೇ ತಮ್ಮ ಯಶಸ್ಸಿನ ಅಡಿಪಾಯ ಮಾಡಿಕೊಂಡಿದ್ದಾರೆ.

ಆದರೆ ಸ್ವಾತಂತ್ರ್ಯ ನಂತರದ ದಶಕಗಳ ಕಾಲ ಹಲವರ ಜಾತಿ ತಿಳಿಯುತ್ತಿರಲಿಲ್ಲ. ಆಗ ಕೆಲವರಂತೂ ಆ ಬಗ್ಗೆ ದೊಡ್ಡ ಸಂಶೋಧನೆಯನ್ನೇ ಆರಂಭಿಸುತ್ತಿದ್ದರು. ಇಂತಹ ಹಲವು ಕುತೂಹಲಕಾರಿ ಸಂಶೋಧನಾ ವಿಧಾನಗಳೂ ಕಂಡು ಹಿಡಿಯಲ್ಪಟ್ಟಿವೆ. ಅದರಲ್ಲೂ ಸರ್ಕಾರಿ ಕೆಲಸ. ಕಾಲೇಜು, ವಿಶ್ವ ವಿದ್ಯಾಲಯಗಳಿಗೆ ಪ್ರವೇಶ ಇಂತಹ ಸಮಯದಲ್ಲಿ ಈ ಶೋಧ ತಾರಕಕ್ಕೇರುತ್ತದೆ. ಅದರಲ್ಲಿ ಅತಿ ಅಸಹ್ಯಕರವಾದುದೊಂದು, ನನ್ನ ಕಣ್ಣೆದುರೇ ನಡೆದದ್ದು ಹೀಗೆ: ಒಂದು ಉತ್ತಮ ಸರ್ಕಾರಿ ಹುದ್ದೆಗೆ ಸಂದರ್ಶನ ನಡೆಯುತ್ತಿದೆ. ಅದರಲ್ಲಿ ಒಬ್ಬ ಪಟ್ಟಿಯಲ್ಲಿ ಮೇಲಿದ್ದ ಒಬ್ಬ ಅಭ್ಯರ್ಥಿಯ ಜಾತಿ, ಅವರ ದಾಖಲಾತಿಗಳಿಂದ ಗೊತ್ತಾಗುವಂತೆ ಇರಲಿಲ್ಲ. ಆ ನೇಮಕಾತಿ ಸಮಿತಿಯ ಒಬ್ಬ ಸದಸ್ಯರಿಗೆ ಅವರ ಜಾತಿ ತಿಳಿದುಕೊಳ್ಳಲೇ ಬೇಕೆನಿಸಿತು. ಅದನ್ನು ತಿಳಿದು ಕೊಳ್ಳಲು ತಮ್ಮ ಸಹಾಯಕನೊಬ್ಬನಿಗೆ ತಿಳಿದುಕೊಳ್ಳಲು ಹೇಳಿದರು. ಆ ವ್ಯಕ್ತಿ ಅಭ್ಯರ್ಥಿಯ ಬಳಿ ಅವರ ಹಲವು ವಿವರಗಳನ್ನು ಕೇಳಿ ಅದನ್ನು ತಿಳಿದುಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದರು. ಒಂದು ಊಹೆಯನ್ನಷ್ಟೇ ಮಾಡಲು ಸಾಧ್ಯವಾಯಿತು. ಆದರೆ ಖಚಿತವಾಗಲಿಲ್ಲ. ಕೊನೆಗೆ ಅವರು ಅಭ್ಯರ್ಥಿಯ ಬೆನ್ನಿನ ಮೇಲೆ ಮೇಲೆ ಕೈ ಹಾಕಿ ತಡವಿದರು. ಅಹಾ! ಗೊತ್ತಾಗಿಯೇ ಹೋಯಿತು! ಅವರು ದಾರದವರು, ಆದರೆ ಕಲ್ಕತ್ತಾ ಯೂನಿವರ್ಸಿಟಿ ಅಲ್ಲ!! ಅವರ ಮುಖ ಅರಳಿತು. ಸರಿ ಓಡಿದರು, ಅವರ ಸಾಹೇಬರು ಮಾರ್ಕ್ಸ್ ಹಾಕುವ ಮೊದಲು ಅವರಿಗೆ ವಿಷಯ ತಿಳಿಸಬೇಕಾಗಿತ್ತಲ್ಲಾ!! ನಮ್ಮ ಸಾಮಾಜಿಕ ಬದುಕಿನಲ್ಲಿ ಇಂತಹ ಹಲವು ಅಸಹ್ಯಗಳು ನಮ್ಮ ಕಣ್ಣೆದುರೇ ನಡೆಯುತ್ತಿರುತ್ತವೆ.

ಹೀಗೆ ಸಾಮಾನ್ಯ ವ್ಯಕ್ತಿಗಳ ಜಾತಿಯ ಬಗೆಗೇ ಈ ಪರಿಯ ಕುತೂಹಲ ಇರುವಾಗ–

'ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ?
ಟಾಟಾ, ಬಿರ್ಲಾರ ಜೋಬಿಗೆ ಬಂತು,
ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ'

ಈ ಹಾಡು ಬಹಳ ಜನ ಕೇಳಿದ್ದೀರಲ್ಲ. ಹೀಗೆ ನೂರಾ ನಲವತ್ತು ಕೋಟಿ ಜನರ ಈ ದೇಶದ ಸ್ವಾತಂತ್ರ್ಯವನ್ನೇ ತಮ್ಮ ಜೋಬಿನಲ್ಲಿ ಬಂಧಿಸಿಟ್ಟು ಕೊಂಡಿರುವಂತಹ ಟಾಟಾ, ಬಿರ್ಲಾಗಳ ಜಾತಿಯ ಬಗ್ಗೆ, ಮಹಾ ಕಾರ್ಪೊರೇಟ್ ಪ್ರಭುಗಳು ಎಂಬ ಸ್ಥಾನ ಅವರಿಗೆ ದಕ್ಕಲು ವಹಿಸಿದ ಪಾತ್ರದ ಬಗ್ಗೆ ತಿಳಿದುಕೊಳ್ಳದಿದ್ದರೆ ಇಲ್ಲಿ ಬಂಡವಾಳದ ಉದ್ಭವದ ಚರಿತ್ರೆಯಲ್ಲಿ ಏನೋ ಕೊರತೆ ಎನಿಸುವುದಿಲ್ಲವೇ!



ನಮ್ಮ ದೇಶದಲ್ಲಿ ಎರಡು ಸಾವಿರ ವರ್ಷಗಳಿಗಿಂತ ಹಿಂದೆ ಹುಟ್ಟಿ ಇನ್ನೂ ಅಸ್ತಿತ್ವದಲ್ಲಿರುವ ಸಾಮಾಜಿಕ ರಚನೆ ಜಾತಿ ವ್ಯವಸ್ಥೆ. ಈ ಜಾತಿ ವ್ಯವಸ್ಥೆಯ ಬಸಿರಿನಿಂದಲೇ ಎರಡು ನೂರು ವರ್ಷಗಳಿಂದ ಈಚೆಗೆ ಕೈಗಾರಿಕಾ ಯುಗದ ಎರಡು ಮುಖ್ಯ ವರ್ಗಗಳಾದ ಬಂಡವಾಳಶಾಹಿ, ಕಾರ್ಮಿಕ ವರ್ಗ ಜೊತೆಗೆ ಮಧ್ಯಮ ವರ್ಗಗಳು ಕೂಡ ಹುಟ್ಟಿವೆ. ಟಾಟಾ, ಬಿರ್ಲಾಗಳೂ ಸೇರಿದಂತೆ ಬಂಡವಾಳಶಾಹಿಗಳ ಹುಟ್ಟೂ ಕೂಡಾ ಜಾತಿ ವ್ಯವಸ್ಥೆಯ ಗರ್ಭದಿಂದಲೇ ಆಗಿದೆ. ಇದು ಬಹಳ ಸಹಜ. ಪ್ರತಿಯೊಬ್ಬರೂ ಒಂದಲ್ಲ ಒಂದು ಜಾತಿಯ ತಾಯಿ ತಂದೆಯರಿಗೇ ಹುಟ್ಟಿರಬೇಕಲ್ಲವೇ! ಆದರೆ ಸಮಸ್ಯೆ ಇರುವುದು ಆ ಜಾತಿಯನ್ನು ಇಂದೂ ಕೂಡಾ ಅವರು ಬಿಟ್ಟಿಲ್ಲದಿರುವುದು. ರಾಜಕಾರಣಿಗಳ ವಿಷಯದಲ್ಲಿ ಹೇಳಿದಂತೆ ಅವರು ಅದನ್ನು ಬಹಿರಂಗವಾಗಿ ಘೋಷಿಸಿಕೊಳ್ಳದಿದ್ದರೂ ಅವರು ಪಡೆದ ಸಾಮಾಜಿಕ ಸ್ಥಾನ ಮಾನಗಳಿಗೆ, ಇಂದೂ ಕೂಡಾ ಪಡೆಯುತ್ತಿರುವ ಯಶಸ್ಸಿಗೆ ಕಾರಣವಾಗುತ್ತಿರುವುದು. ಅದಕ್ಕಿಂತ ಹೆಚ್ಚಾಗಿ ಇಡೀ ಸಮಾಜದ ಮೇಲೆ, ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಯ ಮೇಲೆ ಹಿಂದೂ, ಇಂದೂ ಮೇಲೆ ಹಾನಿಕರ ಪರಿಣಾಮ ಬೀರುತ್ತಿರುವುದು. ಹಿಂದಿನ ಲೇಖನದಲ್ಲಿ ಕಾರ್ಮಿಕ ವರ್ಗದ ಸಾಮಾಜಿಕ ಮೂಲ ಮತ್ತು ಅದರಿಂದ ಕಾರ್ಮಿಕರ ಕಾರ್ಯಕ್ಷಮತೆ, ಉತ್ಪಾದಕತೆಯ ಮೇಲೆ, ಒಟ್ಟಾರೆ ಕೈಗಾರಿಕಾ ಬೆಳವಣಿಗೆಯ ಮೇಲೆ ಬೀರಿದ ಹಾನಿಕರ ಪರಿಣಾಮಗಳ ಬಗ್ಗೆ ಒಂದಿಷ್ಟು ವಿವರಿಸಲಾಗಿದೆ. ಅದು ಕಾರ್ಮಿಕರ ಒಗ್ಗಟ್ಟು ಮತ್ತು ಚಳುವಳಿಯನ್ನು ಕುಂದಿಸಿರುವ ಬಗ್ಗೆ ವಿಶ್ಲೇಷಿಸಲಾಗಿದೆ.

ಟಾಟಾ–ಬಿರ್ಲಾ ರ ಹೆಸರು ಬಹಳ ಜನರಿಗೆ ಚಿರಪರಿಚಿತ. ಈ ಟಾಟಾ–ಬಿರ್ಲಾ ಯಾರು? ಯಾಕೆ ಈ ಹೆಸರುಗಳು ಯಾವಾಗಲೂ ಜೋಡಿಯಾಗಿಯೇ ಬಾಯಿಂದ ಬರುತ್ತವೆ? ಏಕೆಂದರೆ ಭಾರತದ ಮೊದಲ ಅತಿ ದೊಡ್ಡ ಎರಡು ಕಾರ್ಪೊರೇಟ್ ಪ್ರಭುಗಳು ಇವರು. ಅಷ್ಟೇ ಅಲ್ಲ, ಬಂಡವಾಳಶಾಹಿಗಳಾಗಿ ಈ ಇಬ್ಬರ ಉದ್ಭವದಲ್ಲಿಯೂ ಅಫೀಮು ವ್ಯಾಪಾರ, ಹತ್ತಿ ವ್ಯಾಪಾರ ಸಮಾನ ಅಂಶಗಳು. ಆದರೆ ಎಲ್ಲವೂ ಸಮಾನವಲ್ಲ.

ಟಾಟಾಗಳು ಪಾರ್ಸಿ ಸಮುದಾಯಕ್ಕೆ ಸೇರಿದವರೆಂದು ಇತ್ತೀಚೆಗೆ ರತನ್ ಟಾಟಾ ನಿಧನರಾದಾಗ ಎಲ್ಲ ಮಾಧ್ಯಮಗಳೂ ಜನರಿಗೆ ಬಿತ್ತರಿಸಿವೆ. ಹಾಗಾದರೆ ಬಿರ್ಲಾ ಯಾವ ಸಮುದಾಯ? ಅವರ ಜಾತಿ ಬನಿಯಾ, ವಾಣಿಜ್ಯ ಎನ್ನುವುದರ ಹಿಂದೀ ರೂಪ. ವೈಶ್ಯರು. ಅದರಲ್ಲಿ ಭಾರತದೆಲ್ಲೆಡೆ ವ್ಯಾಪಿಸಿರುವ ಮಾರ್ವಾರಿ ಅಥವಾ



ಮಾರ್ವಾಡಿಗಳು. ಅಂದರೆ ರಾಜಸ್ಥಾನದ ಮಾರವಾರ ಪ್ರದೇಶದ ಮೂಲದವರು.

ಇದು ಕೇವಲ ಟಾಟಾಗಳ, ಬಿರ್ಲಾಗಳ ಜಾತಿಯಾ ಮತಧರ್ಮದ ಪ್ರಶ್ನೆ ಮಾತ್ರವಲ್ಲ. ಭಾರತದ ಅತಿ ದೊಡ್ಡ ಕಾರ್ಪೊರೇಟ್ ಸಮೂಹಗಳನ್ನು ಎರಡು ಸಮುದಾಯಗಳ ಮೂಲದವರೇ ಎಂಬುದು. ಆದಿತ್ಯ ಬಿರ್ಲಾ, ಬಿಕೆ ಬಿರ್ಲಾ, ಎಂ.ಪಿ ಬಿರ್ಲಾ ಮೊದಲಾದ ಬಿರ್ಲಾ ಸಮೂಹಗಳಲ್ಲದೆ ನಮ್ಮ ದೇಶದಲ್ಲಿ ಅತಿ ಹೆಚ್ಚು ಬಳಕೆ ಮಾಡುವ ಉತ್ಪಾದನೆಗಳ ಮೂಲಕ ಜನರಿಗೆ ಹೆಚ್ಚು ತಿಳಿದಿರುವ ಹೆಸರುಗಳು–ಬಜಾಜ್, ಜಿಂದಾಲ್, ಗೋಯೆಂಕಾ, ದಾಲ್ಮಿಯಾ, ಖೈತಾನ್, ಸಿಂಘಾನಿಯಾ, ಮಿತ್ತಲ್, ಸುರಾನಾ, ಪೊದ್ದಾರ್ ಅಗರ್ವಾಲ್, ಬಂಗೂರ್, ಮುಂಧ್ರಾ, ಭಾರ್ತೀಯ, ಓಸ್ವಾಲ್, ಝುಂಝುನ್‌ವಾಲಾ, ಕಜಾರಿಯಾ, ಸಿಂಘಾಲ್, ಪಿರಾಮಲ್ ಮತ್ತೆ ಹಲವರು ಕೂಡಾ ಮಾರ್ವಾಡಿಗಳು.

ಭಾರತದ ಅತಿದೊಡ್ಡ ಹತ್ತು ಕಾರ್ಪೊರೇಟ್ ಸಮೂಹಗಳಲ್ಲಿ ಮೂರು, ಐವತ್ತರಲ್ಲಿ ಹದಿನಾಲ್ಕು, ನೂರರಲ್ಲಿ ಇಪ್ಪತ್ತಾರು ಕೇವಲ ಒಂದೇ ಸಣ್ಣ ಪ್ರದೇಶದ ಮಾರ್ವಾಡಿ ಸಮುದಾಯದವರು.

ಉಕ್ಕು, ಅಲ್ಯೂಮಿನಿಯಂನಂತಹ ಲೋಹ ಕೈಗಾರಿಕೆಗಳಲ್ಲಿ, ಸಿಮೆಂಟ್‌ನಲ್ಲಿ, ಜವಳಿ, ಸೆಣಬು, ಟೀ, ವಾಹನದ ಟೈರುಗಳು, ರಾಸಾಯನಿಕ ಕೈಗಾರಿಕೆಗಳು, ಮಾರ್ವಾಡಿ ಸಮುದಾಯದ ಕಾರ್ಪೊರೇಟ್ ಸಮೂಹಗಳು ಏಕಸ್ವಾಮ್ಯ ಹೊಂದಿವೆ. ವಾಹನಗಳು, ಫ್ಯಾನ್‌ನಂತಹ ಎಫ್‌ಎಮ್‌ಸಿಜಿ ಬಳಕೆ ವಸ್ತುಗಳು, ಸೆರಾಮಿಕ್

> **ನಮ್ಮ ದೇಶದಲ್ಲಿ ಎರಡು ಸಾವಿರ ವರ್ಷಗಳಿಗಿಂತ ಹಿಂದೆ ಹುಟ್ಟಿ ಇನ್ನೂ ಅಸ್ತಿತ್ವದಲ್ಲಿರುವ ಸಾಮಾಜಿಕ ರಚನೆ ಜಾತಿ ವ್ಯವಸ್ಥೆ. ಈ ಜಾತಿ ವ್ಯವಸ್ಥೆಯ ಬಸಿರಿನಿಂದಲೇ ಎರಡು ನೂರು ವರ್ಷಗಳಿಂದ ಈಚೆಗೆ ಕೈಗಾರಿಕಾ ಯುಗದ ಎರಡು ಮುಖ್ಯ ವರ್ಗಗಳಾದ ಬಂಡವಾಳಶಾಹಿ, ಕಾರ್ಮಿಕ ವರ್ಗ ಜೊತೆಗೆ ಮಧ್ಯಮ ವರ್ಗಗಳು ಕೂಡ ಹುಟ್ಟಿವೆ.**

ಟೈಲ್ಸ್, ಔಷಧಿ ತಯಾರಿಕೆಗಳಲ್ಲಿ ಗಣನೀಯ ಭಾಗ ಹೊಂದಿವೆ.

ಈ ಸಮುದಾಯದ ಕಾರ್ಪೊರೇಟ್‌ಗಳು ತಮ್ಮ ತಯಾರಿಕೆಯ ಮೂಲಕ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಏಕಸ್ವಾಮ್ಯ ಸಾಧಿಸಿರುವುದು ಅವುಗಳ ಬೆಲೆಯನ್ನು ವಿಪರೀತ ಏರಿಸಲು, ದೇಶದ ಜನರ ಗಳಿಕೆಯ ಭಾಗವನ್ನು ಸೆಳೆದುಕೊಳ್ಳಲು ಸಾಧನವಾಗಿವೆ. ಇದು ಒಂದೆಡೆಯಾದರೆ ಮತ್ತೊಂದು ಕಡೆ ಈ ಉತ್ಪಾದನೆಗಳನ್ನು ಬಳಕೆದಾರರಿಗೆ ಮಾರಲು ದೇಶಾದ್ಯಂತ ಹೆಚ್ಚಾಗಿ ಮಾರವಾಡಿಗಳಿಗೇ ಏಜೆನ್ಸಿಗಳು, ಚಿಲ್ಲರೆ ವ್ಯಾಪಾರದ ಅಂಗಡಿಗಳಿಗೆ ಅವಕಾಶ ನೀಡುವ ಮೂಲಕ ಲಕ್ಷಾಂತರ ಜನರ ಸಮಾನಾವಕಾಶದ ಹಕ್ಕನ್ನು ವಂಚಿಸುತ್ತದೆ.

ಈ ಸಮುದಾಯದವರ ವ್ಯಾಪಾರ, ವ್ಯವಹಾರಗಳಲ್ಲಿ, ಅವರ ನಷ್ಟ ಕುಸಿತಗಳಲ್ಲಿ ಸಮುದಾಯದ ಒಳಗೆ ಬೆಂಬಲ ನೀಡುವ ಹಲವು ವಿಧಾನಗಳ ಬಗ್ಗೆ ವಿವಿಧ ಬಾತ್ಮಿಗಳು ಹರಿದಾಡುತ್ತಿವೆ. ಇವೆಲ್ಲ ಜನರ ಬದುಕಿನ ಮೇಲೆ ಪಾರಸಿಗಳ ಕಾರ್ಪೊರೇಟ್ ಸಮೂಹಗಳು ಕೂಡಾ ಇದೇ ರೀತಿ ಏಕಸ್ವಾಮ್ಯವನ್ನು ಸ್ಥಾಪಿಸಿರುವ ಕುಟುಂಬಗಳು. ಅವುಗಳಲ್ಲಿ ಐದು ಬಿಲಿಯನೇರ್ ಸಮೂಹಗಳು ವ್ಯಾಪಕ ಹಿಡಿತವನ್ನು ಹೊಂದಿವೆ. ಟಾಟಾಗಳ ಜೊತೆಗೆ ಬಹು ಪರಿಚಿತವಾದ ಗೊದ್ರೇಜ್ ಸಮೂಹ, ಸೈರಸ್ ಮಿಸ್ತ್ರಿಯವರಿಂದ ಪರಿಚಿತವಾಗಿರುವ ಮಿಸ್ತ್ರಿಗಳು,ಹಡಗು ತಯಾರಿಕೆಯ ಟೈಕೂನ್‌ಗಳಾದ ವಾಡಿಯಾಗಳು, ಕೋವಿಡ್ ವ್ಯಾಕ್ಸಿನ್‌ನ ಸೀರಮ್ ಇನ್ಸ್ಟಿಟ್ಯೂಟ್ ಮೂಲಕ ಪ್ರಸಿದ್ಧವಾದ ಪೂನಾವಾಲಗಳು ಇವು ಆ ಐದು. ಪೆಸ್ಟೋನ್ಜಿ, ದಿನ್‌ಶಾ, ಮೆಹ್ತಾ, ನವರೋಜಿ, ಮೋದಿ, ನಾರಿಮನ್, ರುಸ್ತುಮ್ಜಿ, ಜೆಹಾಂಗೀರ್, ನಸರ್‌ವಾನ್ಜಿ ಮೊದಲಾದ ಸಮೂಹಗಳು ಪಾರಸಿ ಸಮುದಾಯಕ್ಕೆ ಸೇರಿದವರು.

ಇಲ್ಲಿ ಭಾರತದಲ್ಲಿ ಬಂಡವಾಳ ಉದ್ಭವವಾದ ಸಮಯದಲ್ಲಿ ವಾಣಿಜ್ಯ, ಕೈಗಾರಿಕಾ ಬಂಡವಾಳಗಾರರಾದ, ಸ್ವಾತಂತ್ರ್ಯ ಪೂರ್ವದ ಸಮೂಹಗಳನ್ನಷ್ಟೇ ಹೆಸರಿಸಲಾಗಿದೆ. ಸ್ವಾತಂತ್ರ್ಯಾನಂತರದ, ಅದರಲ್ಲೂ ಇತ್ತೀಚಿನ ಅಂಬಾನಿ, ಅದಾನಿಗಳ ಪ್ರಸಂಗವೇ ಬೇರೆ.

ಪಾರ್ಸಿಗಳ ಮತಧರ್ಮ, ಜಾತಿ ರಹಿತತೆ ಮತ್ತು ಬಂಡವಾಳ

ಪಾರಸಿಗಳು ಇರಾನಿ ಮೂಲದವರಾಗಿ ಜರತುಷ್ಟನ ಮತಧರ್ಮವನ್ನು ಅನುಸರಿಸುತ್ತಿದ್ದರು. ಭಾರತದ ಹೊರಗಿನ ಮತಧರ್ಮವಾಗಿ ಅವರೊಳಗೆ ಜಾತಿ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಅದಕ್ಕೆ ಅಂಟಿಕೊಂಡ ಮೇಲು ಕೀಳು ಭಾವನೆಗಳೂ ಇರಲಿಲ್ಲ. ಅವರು ಇಲ್ಲಿ ಬಂದು ಗುಜರಾತಿನ ದೊಡ್ಡ ಬಂದರು ಸೂರತ್ ಬಳಿ ನೆಲಸಿದಾಗ ಕೃಷಿಕರೂ ಆಗಿದ್ದರು. ಲೋಹದ ಕೆಲಸ, ಬಡಗಿ, ಕಟ್ಟಡ ನಿರ್ಮಾಣ ಮೊದಲಾದ ಕೆಲಸಗಳಲ್ಲಿ ಯಾವುದೇ ಭೇದವಿಲ್ಲದೆ ತೊಡಗಿಕೊಂಡಿದ್ದರು. ವ್ಯಾಪಾರಿಗಳೂ ಆಗಿದ್ದರು.

ಟಾಟಾಗಳಿಗೆ ಸಂಬಂಧಿಸಿ ಹೇಳಿದಂತೆ ಅವರು ಮುಖ್ಯವಾಗಿ ಹಡಗುಗಳ ಮೂಲಕ ಸಮುದ್ರ ವ್ಯಾಪಾರಿಗಳಾಗಿ ಒಂದು ಕಡೆ ಈಜಿಪ್ಟ್, ಆಫ್ರಿಕಾದ ಪೂರ್ವ ತೀರಗಳಿಂದ ಹಿಡಿದು ಲಂಕಾ, ಮಲಯಾ, ಜಾವಾ ಹಾಂಗ್‌ಕಾಂಗ್, ಚೀನಾಗಳವರೆಗೂ ವ್ಯಾಪಾರ ಸಂಬಂಧ ಹೊಂದಿದ್ದರು. ಭಾರತದ ಪಶ್ಚಿಮ ಕಡಲು ತೀರದ ಗೋವಾ, ಭಟ್ಕಳ, ಮಂಗಳೂರು ಕೊಚಿನ್‌ವರೆಗೆ ಅವರುಗಳ ವ್ಯಾಪಾರ ಇತ್ತು. ಅದಕ್ಕೆ ಬೇಕಾದ ಹಡಗುಗಳ ನಿರ್ಮಾಣ ಬಡಗಿ ಕೆಲಸದಲ್ಲಿ ಹಲವು ಕುಟುಂಬಗಳು ಪರಿಣತರಾಗಿದ್ದರು. ವ್ಯಾಪಾರಕ್ಕೆ ಅಂದು ಅವಶ್ಯವಾದ ನಾಣ್ಯ ತಯಾರಿಕೆಯಲ್ಲಿಯೂ ಹೆಸರು ಮಾಡಿದ್ದರು. ಪುಟ 4 ಕ್ಕೆ

ರಾಜ್ಯೋತ್ಸವದ ಸಂಭ್ರಮವು ಸವಾಲುಗಳನ್ನು ಎದುರಿಸುವ ಸ್ಫೂರ್ತಿ ನೀಡಲಿ

ಸಂಪಾದಕೀಯ

ಕರ್ನಾಟಕದ ಎಲ್ಲ ಜನತೆಗೂ, ವಿಶೇಷವಾಗಿ ನಮ್ಮ ಓದುಗ ಬಂಧುಗಳಿಗೂ 69ನೆಯ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.ಹಾಗೆಯೇ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣಗೊಂಡು 50 ವರ್ಷಗಳು ತುಂಬಿದ ಸುವರ್ಣ ಮಹೋತ್ಸವದ ಶುಭ ಹಾರೈಕೆಗಳು.

ಯಾವುದೇ ಸಮಾಜದ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಪ್ರಗತಿಗೆ ಒಂದು ಭಾಷೆಯನ್ನು ಮಾತನಾಡುವವರು ಒಂದು ಆಡಳಿತಾತ್ಮಕ ಘಟಕವಾಗಿ ಒಂದುಗೂಡಬೇಕು ಎಂಬ ಆಶಯಗೊಂದಿಗೆ ದೇಶದಲ್ಲೂ ಕರ್ನಾಟಕದಲ್ಲೂ ಭಾಷಾವಾರು ರಾಜ್ಯಗಳ ಏಕೀಕರಣ ಆಂದೋಲನವು ಸ್ವಾತಂಕ್ಕೂ ಮುಂಚೆಯೇ ರೂಪು ತಳೆಯಿತು.

ಭಾರತ ಸ್ವತಂತ್ರ್ಯಗೊಂಡ ಹೊಸ್ತಿಲಿನಲ್ಲಿ ಭಾರತದ ಸಾಂಸ್ಕೃತಿಕ ಭಾಷಿಕ ವೈವಿಧ್ಯತೆಯ ವಾಸ್ತವಿಕತೆಯನ್ನು ಆಧರಿಸಿ ಸುಗಮ ಆಡಳಿತಕ್ಕಾಗಿ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಕೇಳುತ್ತಿದ್ದ ಕೂಗು ತೀವ್ರಗೊಂಡಿತು.

ರಾಜ–ಮಹಾರಾಜರ ಸಂಸ್ಥಾನಗಳಲ್ಲಿ, ಬ್ರಿಟೀಷರ ಆಡಳಿತದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿದ್ದ ಭಾಷಿಕ ಜನ ಒಂದುಗೂಡಬೇಕು ಎಂಬ ಪ್ರಬಲ ಪ್ರಜಾಸತ್ತಾತ್ಮಕ ಆಗ್ರಹ ವ್ಯಾಪಕ ಜನಾಂದೋಲನವಾಯಿತು.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಪಕ್ಷವು ಭಾಷಾವಾರು ಪ್ರಾಂತಗಳ ರಚನೆಯನ್ನು ತಾತ್ವಿಕವಾಗಿ ಒಪ್ಪಿದ್ದರೂ, 'ಕರ್ನಾಟಕ' ಎಂಬ ಹೆಸರನ್ನು ಒಳಗೊಂಡ 'ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ' ಎಂಬ ಹೆಸರನ್ನು ಬಳಕೆ ಮಾಡಿದ್ದರೂ ಸಹ ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳ ರಚನೆಯ ಬೇಡಿಕೆಗೆ ಆರಂಭದಲ್ಲಿ ಅಂದಿನ ಪ್ರಧಾನಿ ನೆಹರು ನೇತ್ರತ್ವದ ಕೇಂದ್ರ ಕಾಂಗ್ರೆಸ್ ಸರಕಾರ ಒಪ್ಪಿರಲಿಲ್ಲ. ದೇಶ, ರಾಜ್ಯ ಎಂಬೆಲ್ಲಾ ರಾಜಕೀಯ ಘಟಕಗಳನ್ನು ತಮ್ಮ ಮಾರುಕಟ್ಟೆ ಹಿತಾಸಕ್ತಿಗಳ ಹಿನ್ನೆಲೆಯಲ್ಲಿಯೇ ನೋಡುವ ಭಾರತ ದೇಶದ ಆಳುವ ಬಂಡವಾಳಶಾಹಿ ವರ್ಗಗಳ ವರ್ಗಹಿತಾಸಕ್ತಿಗಳು ಅದಕ್ಕೆ ಕಾರಣವಾಗಿದ್ದವು.

ಕರ್ನಾಟಕಕ್ಕೆ ಸಂಬಂಧಿಸಿ ಹೇಳುವುದಾದರೆ ಭಾಷಾವಾರು ಪ್ರಾಂತ ರಚನೆ ಆಗಿಯೇ ಆಗುತ್ತದೆ ಎಂಬ ದೃಢ ವಿಶ್ವಾಸದೊಂದಿಗೆ ಭಾಷಾವಾರು ಪ್ರಾಂತ ರಚನೆಗಾಗಿ ತೀವ್ರವಾಗಿ ಹೋರಾಡಿದ ಏಕೈಕ ರಾಜಕೀಯ ಪಕ್ಷ ಅವಿಭಜಿತ 'ಭಾರತ ಕಮ್ಯೂನಿಸ್ಟ್ ಪಕ್ಷ' ಎಂಬುದನ್ನು ಇಲ್ಲಿ ನಾವು ಹೆಮ್ಮೆಯಿಂದ ನೆನಪಿಸಿಕೊಳ್ಳಬಹುದು. ಕನ್ನಡದ ಹಲವು ಹಿರಿಯ ಸಾಹಿತಿಗಳು, ಚಿಂತಕರು, ರಾಜಕೀಯ ಧುರೀಣರು, ಸಾಮಾಜಿಕ–ಸಾಹಿತ್ಯಿಕ–ಸಾಂಸ್ಕೃತಿಕ ಸಂಘಟನೆಗಳು ಒಟ್ಟಾರೆ ಪ್ರಜಾಸತ್ತಾತ್ಮಕ, ಪ್ರಗತಿಪರ ಶಕ್ತಿಗಳು ಕರ್ನಾಟಕದ ಏಕೀಕರಣ ಚಳುವಳಿಯ ಪ್ರೇರಕ ಶಕ್ತಿಗಳಾಗಿ, ಬೆನ್ನೆಲುಬಾಗಿ ದುಡಿದರು. ಇಂತಹ ಎಲ್ಲರ ಪರಿಶ್ರಮ–ಒತ್ತಾಸೆ–ತ್ಯಾಗ, ಹೋರಾಟಗಳ ಪರಿಣಾಮವಾಗಿ ನವೆಂಬರ್ 1, 1956 ರಂದು ಕರ್ನಾಟಕ ಏಕೀಕರಣದ ಕನಸು ನನಸಾಯಿತು. ಏಕೀಕರಣದ ನಂತರವೂ 'ವಿಶಾಲ ಮೈಸೂರು ರಾಜ್ಯ'ವೆಂದು ಕರೆಯಲ್ಪಡುತ್ತಿದ್ದ ರಾಜ್ಯವು ನವೆಂಬರ್ 1, 1973 ರಂದು ಅಧಿಕೃತವಾಗಿ ಕರ್ನಾಟಕ ಎಂಬ ಹೆಸರು ಪಡೆಯಿತು.

ಕರ್ನಾಟಕ ಏಕೀಕರಣಗೊಂಡು ಇನ್ನೇನು ಏಳು ದಶಕಗಳು ಸಮೀಪಿಸುತ್ತಿರುವ ಈ ಹೊತ್ತಿನಲ್ಲಿ ಏಕೀಕರಣದ ಮೂಲ ಆಶಯಕ್ಕೆ, ಭಾರತದ ಒಕ್ಕೂಟ ಸ್ವರೂಪಕ್ಕೆ ಧಕ್ಕೆ ತರುವಂತಹ ಅಪಾಯಕಾರಿ ಬೆಳವಣಿಗೆಗಳು ತೀವ್ರವಾಗುತ್ತಿರುವುದು ನಿಜಕ್ಕೂ ಆಘಾತಕಾರಿ ವಿಷಯ. ಸ್ವಾತಂತ್ರ್ಯ ಹೋರಾಟದಿಂದ ಸಂಪೂರ್ಣ ದೂರವಿದ್ದು ಬ್ರಿಟೀಷರೊಂದಿಗೆ ಶಾಮೀಲಾಗಿದ್ದ ಮತ್ತು ಕರ್ನಾಟಕ ಏಕೀಕರಣ ಸೇರಿದಂತೆ ಭಾಷಾವಾರು ರಾಜ್ಯಗಳ ರಚನೆಯನ್ನು ತೀವ್ರವಾಗಿ ವಿರೋಧಿಸಿದ ಹಿಂದುತ್ವವಾದಿ ಶಕ್ತಿಗಳು ಇಂದು ಕೇಂದ್ರದಲ್ಲಿ ಅಧಿಕಾರದ ಸೂತ್ರವನ್ನು ಹಿಡಿದಿದ್ದಾರೆ.

ಕಳೆದ ಸಮಾರು ಹತ್ತು ವರ್ಷಗಳ ಅವಧಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರಕಾರ ರಾಜ್ಯಗಳ ಹಕ್ಕುಗಳು ಮತ್ತು ಭಾಷೆ–ಸಂಸ್ಕೃತಿ–ಅಸ್ಮಿತೆಗಳ ಮೇಲೆ ಇನ್ನಿಲ್ಲದ ದಾಳಿಗಳನ್ನು ನಡೆಸಿದೆ. ರಾಜ್ಯಗಳ ಹಕ್ಕುಗಳು–ಅಧಿಕಾರಗಳನ್ನು ಕಬಳಿಸುತ್ತಾ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುತ್ತಿದೆ. ತೆರಿಗೆ ಸಂಗ್ರಹದಲ್ಲಿ ರಾಜ್ಯ ಸರಕಾರಗಳ ಕೈಕಟ್ಟಿಹಾಕುವಂತಹ ಜಿ.ಎಸ್.ಟಿ. ನೀತಿಯನ್ನು ಜಾರಿಗೆ ತಂದು ರಾಜ್ಯಗಳ ಸಂಪನ್ಮೂಲವನ್ನು ಕೇಂದ್ರ ಸರಕಾರವು ಕುಗ್ಗಿಸಿದೆ. ರಾಜ್ಯಗಳಿಗೆ ಅದರಲ್ಲೂ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ತೆರಿಗೆ ಪಾಲು ಹಂಚಿಕೆಯಲ್ಲಿ ಅಗಾಧವಾದ ಅನ್ಯಾಯವನ್ನು ಎಸಗಲಾಗುತ್ತಿದೆ. ಬರ–ಪ್ರವಾಹ ಮುಂತಾದ ನೈಸರ್ಗಿಕ ವಿಪತ್ತು ಪರಿಹಾರಗಳಲ್ಲೂ ಘೋರ ಅನ್ಯಾಯವನ್ನೇ ಎಸಗಲಾಗುತ್ತಿದೆ. ರಾಜ್ಯಪಾಲರು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳಂತಹ ಕೇಂದ್ರ ಸರಕಾರದ ಪ್ರತಿನಿಧಿಗಳನ್ನು ಬಳಸಿ, ಕರ್ನಾಟಕ ಮತ್ತು ಇತರ ರಾಜ್ಯ ಸರಕಾರಗಳಿಗೆ ನಿರಂತರವಾಗಿ ಕಿರುಕುಳಗಳನ್ನು ನೀಡುತ್ತಾ ವಿರೋಧ ಪಕ್ಷಗಳ ನೇತೃತ್ವದ ರಾಜ್ಯ ಸರಕಾರಗಳನ್ನು ಅಸ್ಥಿರಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಸಂಸ್ಕೃತ ಮತ್ತು ಹಿಂದಿ ಭಾಷೆಯನ್ನು ದೇಶದ ಮೇಲೆ ಹೇರುವ ಹುನ್ನಾರದ ಭಾಗವಾಗಿ ಕನ್ನಡ ಮತ್ತು ಕನ್ನಡದಂತಹ ಜನಭಾಷೆಗಳ ಕುತ್ತಿಗೆ ಹಿಸುಕುವ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ. ಸಂಸ್ಕೃತ–ಹಿಂದಿ ಭಾಷೆಗಳ ಪ್ರಸಾರ, ಪ್ರಚಾರಕ್ಕಾಗಿ ಅಗಾಧ ಹಣಕಾಸು ಸಂಪನ್ಮೂಲವನ್ನು ಹರಿಸುತ್ತಿರುವ ಕೇಂದ್ರ ಸರಕಾರವು ಕನ್ನಡದಂತಹ ಜನಭಾಷೆಗಳಿಗೆ ಅಗತ್ಯ ಅನುದಾನ ಒದಗಿಸದೇ ಸೊರಗಿಸುತ್ತಿದೆ. ರೈಲ್ವೆ–ಬ್ಯಾಂಕಿಂಗ್ ಮುಂತಾದ ಕ್ಷೇತ್ರಗಳಲ್ಲಿನ ಉದ್ಯೋಗಾವಕಾಶಗಳ ಸಂಬಂಧದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಕನ್ನಡ ಮತ್ತು ಹಲವು ಜನಭಾಷೆಗಳಿಗೆ ಉದ್ದೇಶಪೂರ್ವಕವಾದ ವಂಚನೆಗಳನ್ನು ಎಸಗಲಾಗುತ್ತಿದೆ. ಕೇಂದ್ರ ಸರಕಾರದ ಉದ್ದಿಮೆ, ಯೋಜನೆಗಳ ಮೂಲಕವೂ ಜನಸಾಮಾನ್ಯರಿಗೆ ಪರಿಚಿತವಲ್ಲದ ಭಾಷೆಯನ್ನು ಹೇರಲಾಗುತ್ತಿದೆ.

ಭಾರತದ ಸಂವಿಧಾನದಂತೆ ಶಿಕ್ಷಣವೆಂಬುದು ಸಮವರ್ತಿ ಪಟ್ಟಿಯಲ್ಲಿದ್ದರೂ, ಅದು ಪ್ರಧಾನವಾಗಿ ರಾಜ್ಯಗಳ ಅಧಿಕಾರ ವ್ಯಾಪ್ತಿಯ ವಿಷಯವಾಗಿದೆ. ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಸಂಘ ಪರಿವಾರದ ಹಿಂದುತ್ವವಾದಿ ಮತಾಂಧ ವಿಚಾರಗಳನ್ನು ಶಿಕ್ಷಣದಲ್ಲಿ ತುರುಕಲು ನಾನಾ ವಿಧಾನಗಳಲ್ಲಿ ರಾಜ್ಯಗಳ ಮೇಲೆ ಶಿಕ್ಷಣ ನೀತಿಗಳನ್ನು ಹೇರುತ್ತಿದೆ. 'ನೀಟ್' ಮುಂತಾದ ಪರೀಕ್ಷೆಗಳ ಮೂಲಕ ರಾಜ್ಯಗಳ ಶೈಕ್ಷಣಿಕ ಹಕ್ಕುಗಳನ್ನು ಕಸಿದುಕೊಂಡು ವೈದ್ಯಕೀಯ ಶಿಕ್ಷಣವು ಬಡ–ಮಧ್ಯಮವರ್ಗ ಮತ್ತು ಗ್ರಾಮೀಣ–ದಲಿತ ಮುಂತಾದ ಅವಕಾಶ ವಂಚಿತ ಸಮುದಾಯಗಳಿಗೆ ಗಗನ ಕುಸುಮವಾಗಿದೆ. ಸಿಇಟಿಯಂತಹ ಸಾಮಾಜಿಕ ನ್ಯಾಯ ಆಧಾರಿತ ಉತ್ತಮ ಪ್ರವೇಶ ಪರೀಕ್ಷಾ ಪದ್ಧತಿಯನ್ನು ರೂಪಿಸಿದ ಕರ್ನಾಟಕದಂತಹ ರಾಜ್ಯಗಳ ಶೈಕ್ಷಣಿಕ ಹಕ್ಕುಗಳಿಗೆ ಇಂದು ಕುತ್ತು ಬಂದಿದೆ.

ಕೃಷಿಯು ಪ್ರಧಾನವಾಗಿ ರಾಜ್ಯಗಳ ಅಧಿಕಾರ ವ್ಯಾಪ್ತಿಯ ವಿಷಯವಾದರೂ ಅತ್ಯಂತ ಅಪ್ರಜಾಸತ್ತಾತ್ಮಕವಾಗಿ ಕಾರ್ಪೋರೇಟ್ ಲೂಟಿಯ ಪರವಾದ ಮೂರು ಕೃಷಿ ಕಾಯ್ದೆಯನ್ನು ತಂದು, ಜನಚಳುವಳಿಗಳ ಒತ್ತಡದಿಂದ ಅದು ವಾಪಸ್ ಆಗಿದೆ ಎಂಬುದು ನಮಗೆಲ್ಲಾ ತಿಳಿದಿದೆ. ವಿದ್ಯುತ್ ನೀತಿ, ರಸಗೊಬ್ಬರ ನೀತಿ, ಕಾರ್ಮಿಕ ಕಾನೂನುಗಳು, ಸಹಕಾರ ಕ್ಷೇತ್ರದ ಕಾನೂನುಗಳು ಹೀಗೆ ನಾನಾ ವಿಷಯಗಳಲ್ಲಿ ಕಾರ್ಪೋರೇಟ್ ಶಕ್ತಿಗಳ ಪರವಾದ ಜಾಗತೀಕರಣ, ಉದಾರೀಕರಣ ಪ್ರೇರಿತ ನೀತಿಗಳನ್ನು ಒಪ್ಪಿಕೊಳ್ಳುವಂತೆ ರಾಜ್ಯ ಸರಕಾರಗಳ ಕೈ ತಿರುಚಲಾಗುತ್ತಿದೆ. ನಿಟ್ಟಿನಲ್ಲಿ ಅನುದಾನ ಕಡಿತದಂತಹ ಬೆದರಿಕೆಯ ತಂತ್ರಗಳನ್ನು ಅನುಸರಿಸಲಾಗುತ್ತಿದೆ. ಇದೀಗ ಒಂದು ದೇಶ–ಒಂದು ಚುನಾವಣೆಯಂತಹ ಒಕ್ಕೂಟ ವಿರೋಧಿ ನೀತಿಗಳ ಮೂಲಕ ರಾಜ್ಯಗಳ ಪ್ರಾದೇಶಿಕ ರಾಜಕೀಯ ಅಸ್ಮಿತೆಗಳನ್ನು ಅಳಿಸಿಹಾಕುವ ಹುನ್ನಾರವನ್ನು ನಡೆಸಿದೆ.

ಕರ್ನಾಟಕ ರಾಜ್ಯೋತ್ಸವದ ಸಂಭ್ರಮಾಚರಣೆಯು ಇಂತಹ ಎಲ್ಲ ವಿಚಾರ–ಸಮಸ್ಯೆ–ಸವಾಲುಗಳ ಕುರಿತು ಚಿಂತಿಸುವುದಕ್ಕೆ ಹಾಗೂ ಪರಿಹಾರಗಳಿಗಾಗಿ ಜನ ಚಳುವಳಿ ರೂಪಿಸುವುದಕ್ಕೆ ಕಾರಣವೂ ಮತ್ತು ಪ್ರೇರಣೆಯೂ ಆಗಲಿ. ●

ಶರಣ ಚಳವಳಿ: ಮುಕ್ತ ಸಂವಾದ ಇರಲಿ

ಈ ವಾರ

ಎಸ್.ವೈ.ಗುರುಶಾಂತ್

12ನೆಯ ರಾಜ್ಯ ಮಟ್ಟದ ಕದಳಿ ಮಹಿಳಾ ಸಮಾವೇಶದ ಗೋಷ್ಠಿ1 ರ 'ಒಳಗೆ ಸುಳಿವ ಆತ್ಮ' ಎಂಬ ವಿಷಯ ಮಂಡಿಸಿದ ಖ್ಯಾತ ಚಿಂತಕಿ, ಕವಯಿತ್ರಿ ಪ್ರೊ.ವಿನಯಾ ಒಕ್ಕುಂದ ಅವರು ವ್ಯಕ್ತ ಪಡಿಸಿದ ಅಭಿಪ್ರಾಯದ ಬಗ್ಗೆ ಕೆಲವರಿಂದ ತೀವ್ರತರವಾದ ಟೀಕೆ, ವಾದ ವಿವಾದಗಳು ನಡೆದಿವೆ. ವಿಚಿತ್ರವೆಂದರೆ ಅವರ ವಿಚಾರಗಳನ್ನು ನೇರವಾಗಿ ಕೇಳದ, ಏನು ಹೇಳಿದಿರಿ ಎಂದು ಕೇಳಿ ತಿಳಿಯದ, ಬರೆದ ಟಿಪ್ಪಣಿಯನ್ನಾದರೂ ಕೇಳಿ ಪಡೆಯದ ಓದದ ಅವರು ಪತ್ರಿಕೆಯ ಸುದ್ದಿಯನ್ನೇ ಆಧರಿಸಿ ಸಾಮಾಜಿಕ ಮಾಧ್ಯಮದಲ್ಲಿ ಅತ್ಯವಸರದಿಂದ ವಾದ ಹೂಡಿದ್ದು ಮತ್ತು ವ್ಯಕ್ತಿಗತವಾಗಿ ದೂಷಣೆ ಮಾಡಿದ್ದು. ಇದರಲ್ಲಿ, ಪ್ರಗತಿಪರ ವ್ಯಾಖ್ಯಾನದ ಆವರಣದಲ್ಲಿ ಇರುವವರು ಕೆಲವರಿದ್ದರು ಎನ್ನುವುದು ಖೇದಕರ ! ಅದರಲ್ಲೂ ಕೆಲವರು ಯುವಕರು ಎನ್ನುವುದು ಬೇಸರದ ಸಂಗತಿ.

ಹಾಗೆ ನೋಡಿದರೆ ಪ್ರಜಾವಾಣಿ ಯಂತಹ ಪತ್ರಿಕೆಯಲ್ಲಿ ಹೀಗೆ ಭಾಷಣದ ಒಂದು ತುಣಕನ್ನು ತನಗೆ ಬೇಕಾದಂತೆ ಅಥವಾ ಅರೆಬರೆ ಅರ್ಥವಾದಂತೆ ಪ್ರಕಟಿಸುವುದು ಖಂಡಿತಕ್ಕೂ ಶೋಭೆ ತರುವಂತಹುದಲ್ಲ. ಗಮನಿಸಬೇಕಾದ ಸಂಗತಿ ಎಂದರೆ ಒಳಗಿನ ವಿಷಯ ವರದಿ ಮಾಡುವಾಗ ಭಿನ್ನವಾಗಿದೆ ಮತ್ತು ವಿನಯ ಒಕ್ಕುಂದರವರು ಆಡಿದರೆಂಬ ಮಾತುಗಳು ಅಪಾರ್ಥಕ್ಕೆ ಎಳೆಸಿದಂತೆ ಇವೆ ಎನ್ನುವುದು ಸಹ ಮುಖ್ಯ. 'ಜಾತಿ ನಿರಸನ ಪ್ರಶ್ನೆಯನ್ನು ಅದ್ಭುತವಾಗಿ ನಿರ್ವಚನ ಮಾಡಿಕೊಟ್ಟಂತಹ ಬಸವಣ್ಣನಿಗೂ ಪುರುಷ ಅಹಂಕಾರವನ್ನು ಇಳಿಸಿಕೊಳ್ಳುವುದು ಸಾಧ್ಯವಾಗಿರಲಿಲ್ಲ. 'ಇಲ್ಲಿ ಹೊರ ಬರಲಾಗಲಿಲ್ಲ' ಎಂದಿಲ್ಲ. 'ಇಳಿಸಿಕೊಳ್ಳುವುದು ಸಾಧ್ಯವಾಗಿರಲಿಲ್ಲ' ಎನ್ನುವಲ್ಲಿ ಬಸವಣ್ಣನವರು ಪ್ರಜ್ಞಾಪೂರ್ವಕವಾಗಿ ಮೀರಲು ಅಂತರಂಗದೊಳಗೆ ಹೋರಾಟ ನಡೆಸಿದ್ದರು ಎನ್ನುವುದನ್ನು ಧ್ವನಿಸುತ್ತದೆ. ಅನೇಕರು ಅಭಿಪ್ರಾಯ ವ್ಯಕ್ತಪಡಿಸಿದಂತೆ ಮತ್ತು ಅವರ ಭಾಷಣದ ಇಡೀ ಟಿಪ್ಪಣಿ ಸ್ಪಷ್ಟ ಪಡಿಸಿದಂತೆ ಬಸವಣ್ಣನವರನ್ನು, ಶರಣರು ಮತ್ತು ಶರಣರ ಚಿಂತನೆಗಳು, ಚಳುವಳಿಯನ್ನು ಹೀಗಳೆದಿಲ್ಲ. ಬದಲಾಗಿ ಅತ್ಯಂತ ಗೌರವದಿಂದ, ವರ್ತಮಾನದ ಕಾಳಜಿಯಿಂದ ವಿಶ್ಲೇಷಿಸಿದ್ದಾರೆ. ಒಂದು ವೇಳೆ ಪತ್ರಿಕೆ ವರದಿಯ ಟೈಟಲ್ ಹೇಳುವಂತೆ 'ಬಸವಣ್ಣನಿಗೂ ಪುರುಷ ಅಹಂಕಾರದಿಂದ ಹೊರ ಬರಲಾಗಿರಲಿಲ್ಲ' ಎಂದು ಲೇಖಕಿ ಹೇಳಿದ್ದರೆ ಆ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬಹುದಿತ್ತು. ವಿಷಯ ತಿಳಿಯಬಹುದಿತ್ತು.

ಇಲ್ಲವೇ ಚರ್ಚೆಯನ್ನು ಬೆಳೆಸಬಹುದಿತ್ತು. ಹಾಗೆ ಮಾಡಿದ್ದರೆ ಅನೇಕ ಹೊಸ ಸಂಗತಿಗಳ ಮೇಲೆ ಬೆಳಕು ಚೆಲ್ಲಿ ಬೌದ್ಧಿಕವಾಗಿ ಬೆಳೆಯಬಹುದಿತ್ತು. ಹಾಗಾಗದಿದ್ದುದರಿಂದ ಟೀಕಿಸಿದವರು ಅವರ ವಾದವನ್ನು ಸಮರ್ಥಿಸುವ, ವಿತಂಡವಾದದಂತೆ ಕಾಣುವ ವಾದಗಳಿಗೇಕೆ ಉತ್ತರಿಸಬೇಕು ಎಂದು ಹಿಂಜರಿಯುವಿಕೆಯಿಂದ ಭೌದ್ಧಿಕವಾಗಿ ವಿಸ್ತಾರಗೊಳ್ಳುವ ಅವಕಾಶ ಒಂದು ಮಟ್ಟಿಗೆ ತಪ್ಪಿದಂತೆ ಅನ್ನಿಸದಿರದು.

ಹೌದು, ಯಾರನ್ನೇ ಆಗಲಿ ಪ್ರಶ್ನಾತೀತರು ಎಂದು ಯಾಕೆ ಭಾವಿಸಬೇಕು? ಚಾರಿತ್ರಿಕವಾದ ಅನೇಕ ಸಂಗತಿಗಳು ಮತ್ತೆ ಮತ್ತೆ ಸಂಶೋಧನೆಗೆ ವಿಚಾರ ಮಂಥನಕ್ಕೆ ಒಳಗಾಗುವುದು ಅತಿ ಅವಶ್ಯಕ. ಅದರಲ್ಲೂ ಇತಿಹಾಸದಲ್ಲೇ ಅತ್ಯಂತ ಮಹತ್ವದ ಒಂದು ವೈಚಾರಿಕ ಸಾಮಾಜಿಕ ಕ್ರಾಂತಿಯ ಚಿಂತನೆ ಮತ್ತು ಚಳುವಳಿ ಆಗಿರುವ ಶರಣರ ಕುರಿತು ವರ್ತಮಾನದಲ್ಲಿ ಕಲಿಯಬೇಕಾದ ಪಾಠ ಮತ್ತು ಪಡೆಯಬೇಕಾದ ಅನುಭವ ಮಾರ್ಗದರ್ಶನದ ಮಥನ ಸತತವಾಗಿ ನಡೆಯಲೇ ಬೇಕಾಗುತ್ತದೆ, ಅದು ಭವಿಷ್ಯದ ಬೆಳಕಾಗಬೇಕಿದೆ. ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ಜೇಡರ ದಾಸಿಮಯ್ಯ, ಸಂಕವ್ವಾ ಮುಂತಾದವರಿಂದ ಹಿಡಿದು ಪ್ರತಿ ಶರಣರು ತಮ್ಮನ್ನು ಸತತವಾಗಿ ನಿಕಷಕ್ಕೆ ಒಳಪಡಿಸಿಕೊಂಡಿದ್ದರು ಎನ್ನುವುದು ನಮ್ಮೆಲ್ಲರಿಗೂ ದಿಕ್ಸೂಚಿ.

ಇರಲಿ, ಈಗಲಾದರೂ ಈ ಸಂಗತಿಗಳ ಬಗ್ಗೆ ಆರೋಗ್ಯ ಪೂರ್ಣವಾದ ಚರ್ಚೆಗಳು ನಡೆಯಲಿ.. ಹಾಗೆಯೇ ಚಿಂತಕಿ ಪ್ರೊ.ವಿನಯಾ ಒಕ್ಕುಂದರವರು ತಮ್ಮ ಶೋಧನಾತ್ಮಕ ವಿಷಯಗಳನ್ನು ಬೌದ್ಧಿಕ ಲೋಕಕ್ಕೆ ಮತ್ತಷ್ಟು ತೆರೆದಿಡಲಿ. ಇದೇ ಹೊತ್ತಿನಲ್ಲಿ ಚಿಂತಕಿ ವಿನಯಾ ರವರಿಗೆ ಒಂದು ಸಲಹೆ ನೀಡಬಹುದಾದರೆ ಇಂತಹ ವಿಶಾಲವಾದ ಜನ ಸಮಾವೇಶದಲ್ಲಿ ವಿಷಯಗಳನ್ನು ಮಂಡಿಸುವಾಗ ಸಾಮಾನ್ಯ ಜನರಿಗೆ ಇವು ಅರ್ಥವಾಗುವ ರೀತಿಯಲ್ಲಿ, ಅಗತ್ಯ ಇರುವಷ್ಟು ಇರಬೇಕು, ಅಪಾರ್ಥಕ್ಕೆ ಎಡೆ ಮಾಡದಂತೆ ವಿಷಯಗಳನ್ನು ಮಂಡಿಸಬೇಕು ಎನ್ನುವುದು. ಗಹನವಾದ ಸೂಕ್ಷ್ಮ ಸಂಗತಿಗಳನ್ನು ಅಕಾಡೆಮಿಕ್ ವಲಯದಲ್ಲಿ ಮಂಡಿಸಿದರೆ ಉತ್ತಮ. ಚರ್ಚೆಯೂ ಬೆಳೆದೀತು.

ಹೇಳಬೇಕಾದ ಒಂದು ಮಾತೆಂದರೆ, ಇಲ್ಲಿ ಕೆಲವು ಮಾಧ್ಯಮಗಳು ಮತ್ತು ಸಂಘ ಪರಿವಾರದ ಆಸಕ್ತ ವಲಯಗಳು ಬೇಕೆಂದೇ ಇಂಥಹ ಗೊಂದಲಗಳನ್ನು ಸೃಷ್ಟಿಸುವ ಮತ್ತು ತಮ್ಮ ದುರುದ್ದೇಶಕ್ಕೆ ಬಳಸುವ ಪ್ರಯತ್ನಗಳನ್ನು ಕೂಡ ಮಾಡುತ್ತಲೇ ಇವೆ ಎನ್ನುವುದನ್ನು ಎಲ್ಲರೂ ಗಮನದಲ್ಲಿ ಇರಿಸಿಕೊಳ್ಳಬೇಕಿದೆ. ಈಗಾಗಲೇ ಅತ್ಯಂತ ವ್ಯವಸ್ಥಿತವಾಗಿ ಶರಣ ಚಳುವಳಿಯನ್ನು, ವಚನಗಳನ್ನು, ಶರಣರನ್ನೂ ವಿಧ್ವಂಸಗೊಳಿಸುವ ಬಹುದೊಡ್ಡ ಪ್ರಯತ್ನಗಳು ಕೋಮುವಾದಿಗಳಿಂದ ನಡೆಯುತ್ತಿರುವಾಗ ಎಲ್ಲ ಪ್ರಗತಿಪರಲ್ಲಿ ಜಾಗೃತಿ, ಎಚ್ಚರ ಮತ್ತು ಎದುರಿಸುವಲ್ಲಿ ಐಕ್ಯತೆ ಅತ್ಯಗತ್ಯ. ●

ಭಿನ್ನ ದನಿಗಳನ್ನು ಹತ್ತಿಕ್ಕಿ ಸಂಸದರ ಹಕ್ಕುಗಳ ಉಲ್ಲಂಘಿಸುವುದನ್ನು ನಿಲ್ಲಿಸಬೇಕು

ವೆನೆಜುವೆಲಾದ ಕ್ಯಾರಕಾಸ್‌ನಲ್ಲಿ ನಡೆಯುತ್ತಿರುವ "ಫ್ಯಾಸಿಸಂ ವಿರುದ್ಧ ಸಂಸದರ ವೇದಿಕೆ"(Parliamentarian's Forum Against Fascism)ಯಲ್ಲಿ ಪಾಲ್ಗೊಳ್ಳಲು ಸಂಸತ್ ಸದಸ್ಯ (ರಾಜ್ಯಸಭೆ) ಡಾ.ವಿ. ಶಿವದಾಸನ್ ಅವರಿಗೆ ರಾಜಕೀಯ ಅನುಮತಿ ನಿರಾಕರಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿದೆ. ಇದು ಆಳುವ ಪಕ್ಷದ ಅಭಿಪ್ರಾಯಗಳಿಗೆ ಹೊಂದಿಕೆಯಾಗದ ಯಾವುದೇ ದನಿಯನ್ನು ಹತ್ತಿಕ್ಕುವ ಪ್ರಯತ್ನವಾಗಿದೆ ಎಂದು ಅದು ಹೇಳಿದೆ.

ವೆನೆಜುವೆಲಾದ ನ್ಯಾಷನಲ್ ಅಸೆಂಬ್ಲಿ ತಾನು ಸಂಘಟಿಸುತ್ತಿರುವ ಈ ಸಂಸದರ ವೇದಿಕೆಯಲ್ಲಿ ಭಾಗವಹಿಸಲು ಸಿಪಿಐ(ಎಂ) ತನ್ನ ಸಂಸತ್ ಸದಸ್ಯರನ್ನು ನಾಮನಿರ್ದೇಶನ ಮಾಡಲು ಆಹ್ವಾನವನ್ನು ಪಡೆದಿದೆ. ಪಕ್ಷವು ಡಾ.ವಿ.ಶಿವದಾಸನ್ ರನ್ನು ತನ್ನ ಪ್ರತಿನಿಧಿಯಾಗಿ ಈ ವೇದಿಕೆಯಲ್ಲಿ ಭಾಗವಹಿಸಲು ನಾಮನಿರ್ದೇಶನ ಮಾಡಿದೆ. ಅಲ್ಲಿ ಅನೇಕ ದೇಶಗಳ ಸಂಸದರು ಉಪಸ್ಥಿತರಿರುತ್ತಾರೆ.

ಇದಕ್ಕೆ ಎಫ್‌ಸಿಆರ್‌ಎ ಅನುಮತಿಯನ್ನು ಪಡೆದರೂ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಶಿವದಾಸನ್‌ಗೆ ರಾಜಕೀಯ ಅನುಮತಿ ನಿರಾಕರಿಸಿದ್ದು, ಸಂಸತ್ ಸದಸ್ಯರಾಗಿ ಅವರ ಹಕ್ಕುಗಳನ್ನು ಉಲ್ಲಂಘಿಸಿರುವುದು ಅತ್ಯಂತ ಖಂಡನೀಯವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸರ್ಕಾರವು ರಾಜಕೀಯ ತಾರತಮ್ಯದ ನೀತಿಯನ್ನು ಅನುಸರಿಸುತ್ತಿದೆ, ಭಿನ್ನ ದನಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ತಡೆಯುತ್ತಿದೆ ಎನ್ನುತ್ತ, ಇದು ಎಲ್ಲಾ ವಿರೋಧ ಪಕ್ಷಗಳು ಮತ್ತು ಅವುಗಳ ಸಂಸತ್ ಸದಸ್ಯರಿಗೆ ಆತಂಕದ ವಿಷಯವಾಗಿದೆ ಎಂದು ಹೇಳಿದೆ.

26 ನವೆಂಬರ್ 2024 ರಂದು ಜಿಲ್ಲಾ ಮಟ್ಟದ ಪ್ರತಿಭಟನಾ ರ್‍ಯಾಲಿಗಳು ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧಾರ

ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಜಂಟಿ ರಾಷ್ಟ್ರೀಯ ಸಭೆಯು 14 ಅಕ್ಟೋಬರ್ 2024 ರಂದು ನವದೆಹಲಿಯ ಹರ್ಕಿಷನ್ ಸಿಂಗ್ ಸುರ್ಜಿತ್ ಭವನದಲ್ಲಿ ನಡೆಯಿತು. ಬಿಜೆಪಿ ನೇತೃತ್ವದ ಕಾರ್ಪೋರೇಟ್ ಕೋಮುವಾದಿ ಕೂಟದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಸಭೆ ನಿರ್ಧರಿಸಿತು.

ಲಾಕ್‌ಡೌನ್ ಸಮಯದಲ್ಲಿ 2020 ರಲ್ಲಿ ಕೇಂದ್ರ ಕಾರ್ಮಿಕ ಸಂಘಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡುವುದರ ಜೊತೆಗೆ ಐತಿಹಾಸಿಕ ರೈತ ಹೋರಾಟದ ಪ್ರಾರಂಭದ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಎಸ್‌ಕೆಎಂ 26 ನವೆಂಬರ್ 2024 ರಂದು ದೇಶಾದ್ಯಂತ ಜಂಟಿ ಪ್ರತಿಭಟನಾ ರ್‍ಯಾಲಿಗಳಲ್ಲಿ ಬೃಹತ್ ಪ್ರಮಾಣದಲ್ಲಿ ಜನಗಳನ್ನು ಅಣಿನೆರೆಸಲಾಗುವುದು ಎಂದು ಸಭೆಯ ನಂತರ ನೀಡಿದ ಹೇಳಿಕೆಯು ತಿಳಿಸಿದೆ.

ಕೃಷಿ ಕಾರ್ಮಿಕರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ಸಂಘಟನೆಗಳು ಮತ್ತು ವೇದಿಕೆಗಳು ಹೋರಾಟಕ್ಕೆ ಕೈಜೋಡಿಸುವಂತೆ ಮನವಿ ಮಾಡಲು ನಿರ್ಧರಿಸಲಾಯಿತು.

ಸುಮಾರು ಐವತ್ತು ಜನ ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದರು. ಕೇಂದ್ರೀಯ ಕಾರ್ಮಿಕ ಸಂಘಗಳಿಂದ? ಐಎನ್‌ಟಿಯುಸಿಯ ಅಶೋಕ್ ಸಿಂಗ್, ಎಐಟಿಯುಸಿಯ ಅಮರ್ಜೀತ್ ಕೌರ್, ಹೆಚ್‌ಎಂಎಸ್‌ನ ಹರ್ಭಜನ್ ಸಿಧು, ಸಿಐಟಿಯುನ ತಪನ್ ಸೇನ್, ಎಐಯುಟಿಯುಸಿಯ ಆರ್.ಕೆ.ಶರ್ಮಾ, ಎಐಸಿಸಿಟಿಯು ನ ರಾಜೀವ್ ದಿಮ್ರಿ ಎಸ್‌ಇಡಬ್ಲ್ಯುಎ ನ ಸೋನ್ಯಾ ಜಾರ್ಜ್, ಟಿಯುಸಿಸಿ ಯ ರಾಕೇಶ್ ಮಿಶ್ರಾ, ಯುಟಿಯುಸಿ ಯ ಶತ್ರುಜೀತ್ ಹಾಜರಿದ್ದರು.

ಭಾರತದಲ್ಲಿ ಬಂಡವಾಳದ ಉಗಮ......

ಪುಟ 2 ರಿಂದ

ಇದರಿಂದಾಗಿ ಸೂರತ್‌ನ ಹಡುಗು ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದರು. ಹದಿನೆಂಟನೇ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದವರೆಗೆ ಹಡಗು ನಿರ್ಮಾಣ, ವ್ಯಾಪಾರದಲ್ಲಿ ಪ್ರಮುಖ ಪಾತ್ರ. ಇತಿಹಾಸಕಾರ ಪ್ರೊ. ಇರ್ಫಾನ್ ಹಬೀಬ್ ರವರು ಹೇಳಿದಂತೆ ಬ್ರಿಟಿಷ್ ಪೂರ್ವ ಭಾರತದಲ್ಲಿ ಕೈಗಾರಿಕೆಯ ಸ್ವರೂಪ ಪಡೆದಿದ್ದ ಉತ್ಪಾದನಾ ವ್ಯವಸ್ಥೆ ಎಂದರೆ ಹಡಗು ನಿರ್ಮಾಣ ಮಾತ್ರ. ಈ ಕೈಗಾರಿಕೆಯಲ್ಲಿ ಬಡಗಿ ಕೆಲಸ, ಅದಕ್ಕೆ ಬೇಕಾದ ಮರ ಮುಟ್ಟು ಸರಬರಾಜು, ಬಂದರುಗಳ ನಿರ್ಮಾಣ, ಹಡಗು ನಿರ್ಮಾಣದ ತಾಂತ್ರಿಕ ಉಸ್ತುವಾರಿ, ಹಡಗನ್ನು ನಡೆಸುವ ನಿಪುಣತೆ ಎಲ್ಲದರಲ್ಲಿ ತೊಡಗಿಕೊಂಡಿದ್ದರು. ಪಾರಸೀಗಳು ಅಂದು ಇಪ್ಪತ್ತು ಹಡಗುಗಳ ಒಡೆತನ, ನಡೆಸುವುದು ಮತ್ತು ವ್ಯಾಪಾರಗಳ ನಿಯಂತ್ರಣ ಹೊಂದಿದ್ದರು. ಇದರಲ್ಲಿ ಪರಿಣತವಾದ ಒಂದು ಕುಟುಂಬವೇ ವಾಡಿಯಾಗಳು. ನಂತರದ ಕಾಲದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರು ಹಡಗು ನಿರ್ಮಾಣಕ್ಕೆ ತಡೆ ಹಾಕಿದರೂ ಸ್ವಾತಂತ್ರ್ಯಾನಂತರ ಅವರು ಹಡಗು ನಿರ್ಮಾಣ, ಸಾಗಾಣಿಕೆ ಹಾಗೂ ವ್ಯಾಪಾರದ ಒಂದು ಏಕಸ್ವಾಮ್ಯ ಕಾರ್ಪೋರೇಟ್ ಆಗಿದ್ದಾರೆ.

ಬ್ರಿಟಿಷರು ಮೊದಲು ಅರಬ್ಬೀ ತೀರದ ಏಳು ದ್ವೀಪಗಳನ್ನು ವಶಪಡಿಸಿಕೊಂಡು ಅದಕ್ಕೆ ಬಾಂಬೆ ಎಂಬ ನಗರದ ಸ್ವರೂಪ ನೀಡಿದಾಗ, ಅದರ ನಿರ್ಮಾಣದ ಹಲವು ಕೆಲಸಗಳ ಸಣ್ಣ ಕಂಟ್ರಾಕ್ಟ್‌ಗಳು ಪಾರಸೀಗಳಿಗೆ ದೊರಕಿತು. ಅಲ್ಲಿ ಹೊಸದಾಗಿ ಹಡಗು ನಿರ್ಮಾಣ ಆರಂಭಿಸಿದಾಗಲೂ ಪಾರಸಿಗಳ ಪಾತ್ರ ಮುಖ್ಯವಾಯಿತು. ಅದರಿಂದಾಗಿ ಬ್ರಿಟಿಷರು ಅವರಿಗೆ ಬಾಂಬೆಯಲ್ಲಿ ಗಣನೀಯ ಪ್ರಮಾಣದ ಭೂಮಿಯನ್ನು ಕೊಡ ಮಾಡಿದರು. ಅದರಿಂದಾಗಿ ಅವರಲ್ಲಿ ಕೆಲ ಕುಟುಂಬಗಳು ಇಂದೂ ರಿಯಲ್ ಎಸ್ಟೇಟ್‌ನಲ್ಲಿ ದೊಡ್ಡ ಕುಳಗಳು. ಮುಂಬಯಿಗೆ ಹೊರಗಿನಿಂದ ಮೊದಲು ಬಂದು ನೆಲಸಿದ ಭಾರತೀಯರಾಗಿ ಅಂದಿನ ಒಂದು ಪತ್ರಿಕೆ ಹೇಳಿದಂತೆ' ಬಾಂಬೆಯ ಜನರು ತಮಗೆ ಬೇಕಾದ ಎಲ್ಲ ವಸ್ತುಗಳನ್ನು, ಫರ್ನಿಚರ್‌ಗಳನ್ನು ಪಾರಸೀ ಅಂಗಡಿಗಳಿಂದಲೇ ಕೊಳ್ಳುತ್ತಾರೆ' ಎನ್ನುವಷ್ಟು ವ್ಯಾಪಿಸಿದ್ದರು. ಬ್ರಿಟಿಷರು ಅಲ್ಲಿ ನಾಣ್ಯ ತಯಾರಿಕೆ ಆರಂಭಿಸಿದಾಗ ಅದಕ್ಕಾಗಿ ಒಬ್ಬ ಪಾರಸೀ ಪರಿಣತನನ್ನೇ ಹುಡುಕಾಡಿ ಕರೆತಂದರು. ಹೀಗೆ ಮುಂಬಯಿ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದುದರಿಂದ ಬ್ರಿಟಿಷರು ಬಾಂಬೆಯ ಪಟೇಲರನ್ನಾಗಿ ಒಬ್ಬ ಪಾರಸಿಯನ್ನೇ ನೇಮಿಸಿದರು!!

ಈ ಎಲ್ಲ ರೀತಿಯ ಪರಿಣತಿಯ ಕಾರಣವಾಗಿ ಬ್ರಿಟಿಷರು ಪಾರಸೀ ಕುಟುಂಬಗಳಿಗೆ ಸೈನ್ಯಕ್ಕೆ ಅವಶ್ಯವಾದ ಗನ್ ಪೌಡರ್, ಫಿರಂಗಿಗಳನ್ನು ತಯಾರಿಸುವ ಕೈಗಾರಿಕೆ ಸ್ಥಾಪಿಸಲು ಅನುಮತಿ ನೀಡಿದರು.

ಮತ್ತೊಂದು ಮುಖ್ಯ ಅಂಶವೆಂದರೆ ಕಡಲ ವ್ಯಾಪಾರ ಮತ್ತು ಸಂಚಾರದಲ್ಲಿ ತೊಡಗಿದ ಇವರ ಹಲವು ಕುಟುಂಬಗಳು ಲಂಕಾ, ಮಲಕ್ಕಾ, ಸಿಂಗಾಪುರ, ಹಾಂಗ್‌ಕಾಂಗ್‌ಗಳಲ್ಲಿ ನೆಲಸಿದ್ದವು. ಮುಂದೆ ಈ ದೇಶಗಳಲ್ಲಿ ಈ ಕುಟುಂಬಗಳಲ್ಲಿ ಕೆಲವರು ಲಂಕಾದಲ್ಲಿ ಅರ್ಥ ಮಂತ್ರಿ ಸ್ಥಾನ, ಮಲಕ್ಕಾದಲ್ಲಿ ಆಡಳಿತಗಾರರಿಂದ ಖಿಲ್ಲತ್ತುಗಳನ್ನು ಪಡೆದಿದ್ದರು.

ಹಾಗೆಯೇ ಒಬ್ಬರು ದಕ್ಷಿಣ ಆಫ್ರಿಕಾದಲ್ಲಿ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ನೆಲ್ಸನ್ ಮಂಡೇಲಾರ ಸಹಾಯಕರಾಗಿದ್ದರು. ಮುಂದೆ ಅಲ್ಲಿಯ ಲೋಕಸಭೆಯ ಸ್ಪೀಕರ್ ಸ್ಥಾನಕ್ಕೇರಿದ ಪ್ರಾಮುಖ್ಯತೆ ಪಡೆದವರಾಗಿದ್ದರು.

ಕೆಲ ಪಾರ್ಸಿಗಳು ಹಾಂಗ್ ಕಾಂಗ್‌ನಲ್ಲಿ ಆ ಕಾಲದಲ್ಲಿಯೇ ಬ್ಯಾಂಕಿಂಗ್, ಕೈಗಾರಿಕೆಗಳ ಸ್ಥಾಪನೆಯಲ್ಲಿ ತೊಡಗಿದ್ದರು. ಹಾಂಗ್ ಕಾಂಗ್ ವಿಶ್ವವಿದ್ಯಾಲಯ ಸ್ಥಾಪನೆಗೆ ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಒಂದೂವರೆ ಲಕ್ಷ ಹಾಂಗ್ ಕಾಂಗ್ ಡಾಲರ್ ದಾನ ನೀಡುವಷ್ಟು ಶ್ರೀಮಂತರಾಗಿದ್ದರು. ಕರಾಚಿಯಲ್ಲಿ ಒಬ್ಬ ಪಾರಸಿ ಸ್ವಾತಂತ್ರ್ಯಾನಂತರ ಹನ್ನೆರಡು ವರ್ಷಗಳ ಕಾಲ ಮೇಯರ್ ಆಗಿದ್ದವರು, ಇಬ್ಬರು ಅಲ್ಲಿಯ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಸ್ಥಾನಕ್ಕೇರಿದ್ದರು.

ಈ ವಿವರಗಳನ್ನು ಇಲ್ಲಿ ನೀಡಿರುವ ಉದ್ದೇಶ ಪಾರಸೀಗಳು ವಿದೇಶಗಳಲ್ಲಿ ವಹಿಸುತ್ತಿದ್ದ ಪ್ರಮುಖ ಪಾತ್ರ ಕೂಡಾ ಬ್ರಿಟಿಷರು ಅವರನ್ನು ತಮ್ಮ ಭಾರತೀಯ ಸಹಚರರಾಗಿ ಪರಿಗಣಿಸಲು ಮತ್ತೊಂದು ಕಾರಣವಾಯಿತು ಎಂಬುದನ್ನು ಗುರುತಿಸಲು. ಅದರ ಜೊತೆಗೆ ಟಾಟಾಗಳು ಮತ್ತು ಇತರ ಏಕಸ್ವಾಮ್ಯ ಬಿಲಿಯನೇರ್ ಸಮೂಹಗಳ ಇಂದಿನ ಬೆಳವಣಿಗೆಯಲ್ಲಿ ಪಾರಸೀಗಳ ಈ ಎಲ್ಲ ಸಂಬಂಧಗಳೂ ವಹಿಸಿರಬಹುದಾದ ಪಾತ್ರವನ್ನು ಕೂಡಾ ಗಮನಿಸಬೇಕು. ಇಂತಹ ಧಾರ್ಮಿಕ ಸಮುದಾಯಗಳ ಒಳ ಸಂಬಂಧಗಳು ಬಂಡವಾಳದ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಹೀಗಿದೆ.

ಪಾರ್ಸಿಗಳು ಭಾರತದ ಮುಖ್ಯ ಧರ್ಮಗಳಾದ ಹಿಂದೂ, ಮುಸ್ಲಿಮ್ ಜಾತಿಗಳಿಗೆ ಸೇರಿದವರಲ್ಲ. ಅದರಿಂದಾಗಿ ಒಂದು ಕಡೆ ಎರಡೂ ಧರ್ಮದವರೊಡನೆ ಸಂಬಂಧ, ಅದೇ ಸಮಯದಲ್ಲಿ ಆ ಸಮುದಾಯಗಳೊಡನೆ ಭಾವನಾತ್ಮಕ ಸಂಬಂಧಗಳಿಲ್ಲ. ಹೀಗಾಗಿ ಎರಡೂ ಧರ್ಮದ ನಡುವಣ ವೈಮನಸ್ಸುಗಳೂ ಇವರಿಗೆ ಸಂಬಂಧವಿಲ್ಲದ್ದು. ಭಾರತವನ್ನು ಹಿಂದೆ ಆಳಿದವರಲ್ಲ, ಈಗ ಆಳುತ್ತಿರುವವರೂ ಅಲ್ಲ. ಅದೇ ಸಮಯದಲ್ಲಿ ಇಲ್ಲಿಯ ಭಾಷೆ, ಸಂಸ್ಕೃತಿಗಳ ಜೊತೆ ಒಡನಾಟ, ಜ್ಞಾನ ಇದ್ದವರು.

ಬ್ರಿಟಿಷರು ಮೊದಲು ಕಡಲು ವ್ಯಾಪಾರದಲ್ಲಿ ತೊಡಗಿದಾಗ ಅವರಿಗೆ ಎದುರಾಗಿದ್ದೇ ಅರಬ್ಬೀ ಮುಸ್ಲಿಂ ವ್ಯಾಪಾರಿಗಳಲ್ಲವೇ! ಹಾಗೆಯೇ ದೇಶವನ್ನು, ಅದರ ಹಲವು ಭಾಗಗಳನ್ನು ಆಳುತ್ತಿದ್ದವರು ಕೂಡಾ ಮುಸ್ಲಿಮರೇ. ಕೆಲವು ಪ್ರದೇಶಗಳನ್ನು ರಾಜಪುತ್ರರು, ಪೇಶ್ವಾ ಮೊದಲಾದ ಮರಾಠ ಹಿಂದೂ ರಾಜರೂ ಆಳುತ್ತಿದ್ದರಲ್ಲದೆ, ಅವರು ಮೊಘಲರು ಮೊದಲಾದ ಮುಸ್ಲಿಮರ ಆಡಳಿತದಲ್ಲಿ ಮಂತ್ರಿ, ಸೇನಾಧಿಕಾರಿಗಳಾಗಿದ್ದರು.

ಇಂತಹ ರಾಜಕೀಯ ಸಂದರ್ಭದಲ್ಲಿ ಈ ಎರಡೂ ಧರ್ಮ ಮತ್ತು ಆಡಳಿತದ ಭಾಗವಾಗಿಲ್ಲದ ಪಾರಸೀಗಳು ಬ್ರಿಟಿಷರಿಗೆ ಬಹಳ ಪ್ರಿಯವಾದರು. ಚೀನಾದ ಮೇಲೆ ಬ್ರಿಟಿಷರು ನಡೆಸಿದ ಓಪಿಯಮ್ ವಾರ್‌ಗಳಲ್ಲಿ ಪಾರಸೀಗಳ ಹಡಗುಗಳನ್ನು ವ್ಯಾಪಕವಾಗಿ ಬಳಸಿಕೊಂಡರು.

ಒಟ್ಟಾರೆಯಾಗಿ ಬ್ರಿಟಿಷರು ಪಾರಸೀಯರನ್ನು ತಮ್ಮ ಹತ್ತಿರದ ಅಧೀನ ಸಹಚರರನ್ನಾಗಿ ಬಳಸಿಕೊಂಡರು. ಈ ಕಾಂಪ್ರೊಡೋರ್ ದಲ್ಲಾಳಿ ಪಾತ್ರ, ಬಂಡವಾಳ ಶೇಖರಣೆಗೆ ಭಾರತದ ಬೇರೆ ಕುಟುಂಬಗಳಿಗೆ ದೊರಕದ ಅವಕಾಶವನ್ನು ಪಾರಸೀ ಕುಟುಂಬಗಳಿಗೆ ಒದಗಿಸಿತು.

(ಮುಂದುವರೆಯುತ್ತದೆ) ❑

ಆರ್ಥಿಕ ದುಸ್ಥಿತಿಯಿಂದ ಕನ್ನಡ ವಿಶ್ವ ವಿದ್ಯಾಲಯ, ಹಂಪಿಗೆ ಅಗತ್ಯ ನೆರವು ಒದಗಿಸಲು ಒತ್ತಾಯ

ರಾಜ್ಯದ ಹೆಮ್ಮೆಯ ವಿಶ್ವ ವಿದ್ಯಾಲಯವಾದ ಹಂಪಿ ಕನ್ನಡ ವಿಶ್ವ ವಿದ್ಯಾಲಯವು ಆರ್ಥಿಕ ದುಸ್ಥಿತಿಯಿಂದ ಬಳಲುತ್ತಿರುವುದು ಕಂಡು ಬಂದಿದೆ. ಇದು ದೇಶದಲ್ಲೆ ಒಂದು ಅಪರೂಪದ ಸಂಶೋಧನಾ ವಿಶ್ವ ವಿದ್ಯಾಲಯವೆಂಬುದು ಈಗಾಗಲೆ ತಮಗೆ ತಿಳಿದ ವಿಚಾರವಿದೆ. ಆರ್ಥಿಕ ದುಸ್ಥಿತಿಯು ಅದರ ಅಭಿವೃದ್ಧಿಗೆ ಮತ್ತಷ್ಟು ಅದರ ಸಾಧನೆಗೆ ತೊಡಕಾಗಬಾರದಾಗಿದೆ.

ಆರ್ಥಿಕ ಸಂಕಷ್ಟದಿಂದಾಗಿ, ಬೋಧಕ ನೌಕರರು ಮತ್ತು ಬೋಧಕೇತರ ನೌಕರರಿಗೆ ಮತ್ತು ಭದ್ರತೆ ಮತ್ತು ಶುಚಿತ್ವದ ಹೊರಗುತ್ತಿಗೆ ಕಾರ್ಮಿಕರಿಗೆ ಕಳೆದ ಒಂದು ವರ್ಷದ ವೇತನ ಪಾವತಿ ಮಾಡದಿರುವುದು ಕಂಡು ಬಂದಿದೆ. ಅದೇ ರೀತಿ, ಕಮಲಾಪುರ ಪುರ ಸಭೆಗೆ ನೀಡ ಬೇಕಾದ ತೆರಿಗೆ ಪಾವತಿಸಲಾಗದೆ ವಿಶ್ವ ವಿದ್ಯಾಲಯದ ಕುಡಿಯುವ ನೀರಿನ ಸಂಕಷ್ಟ ಎದುರಿಸುತ್ತಿರುವುದು ಮತ್ತು ವಿದ್ಯುತ್ ಬಿಲ್ ಪಾವತಿಸಲಾಗದೆ ಕತ್ತಲೆಯಲ್ಲಿರುವ ದುಸ್ಥಿತಿ ಕಂಡು ಬಂದಿದೆ.

ಇತ್ತೀಚೆಗೆ, ಆರ್ಥಿಕ ಸಂಕಷ್ಟದ ಕಾರಣದಿಂದಾಗಿಯೆ ಕಳೆದ 20 ವರ್ಷಗಳಿಂದ ದಿನಗೂಲಿಯಲ್ಲಿ ತೊಡಗಿದ ಹೊರಗುತ್ತಿಗೆಯ 47 ಜನ ಕೆಲಸಗಾರರನ್ನು ಉದ್ಯೋಗದಿಂದ ಹೊರ ದೂಡುವ ಕೆಲಸಕ್ಕೆ ಆಡಳಿತ ಮಂಡಳಿ ಮುಂದಾಗಿದೆ. ಹೆಮ್ಮೆಯ ಕನ್ನಡ ವಿಶ್ವ ವಿದ್ಯಾಲಯಕ್ಕೆ ಇಂತಹ ದುಸ್ಥಿತಿ ಒದಗಿ ಬಂದಿರುವುದು ದುರದೃಷ್ಟಕರ ಎಂದಿದೆ.

ಸಂಸ್ಕೃತ ವಿಶ್ವ ವಿದ್ಯಾಲಯಕ್ಕೆ 100 ಕೋಟಿ ರೂ ಬಂಡವಾಳ ಹೂಡಲು ಆಸಕ್ತಿ ತೋರುವ ರಾಜ್ಯ ಸರಕಾರ ಹಂಪಿಯ ಕನ್ನಡ ವಿಶ್ವ ವಿದ್ಯಾಲಯವನ್ನು ಇಂತಹ ದುಸ್ಥಿತಿಗೆ ತಳ್ಳಿ, ನಿರ್ವಹಣೆಗೆ ಅಗತ್ಯ ಮತ್ತು ಮತ್ತಷ್ಟು ಅಭಿವೃದ್ಧಿ ಸಾಧನೆಗೆ ಅವಶ್ಯ ಅನುದಾನ ಒದಗಿಸದಿರುವುದು ಖೇದಕರ ಎಂದಿದೆ.

ಈ ಕೂಡಲೆ ಕನ್ನಡ ವಿಶ್ವ ವಿದ್ಯಾಲಯದ ರಕ್ಷಣೆಗೆ ಮತ್ತು ಮುನ್ನಡೆಗೆ ಅಗತ್ಯ ಅನುದಾನ ಒದಗಿಸುವಂತೆ ಮತ್ತು ತಕ್ಷಣಕ್ಕೆ ಕನಿಷ್ಟ 10 ಕೋಟಿ ರೂ. ಬಿಡುಗಡೆ ಮಾಡುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬಲವಾಗಿ ಒತ್ತಾಯಿಸಿದೆ. ❑





‘ಸುಸ್ಥಿತಿ’ಯಲ್ಲಿ ಕರ್ನಾಟಕದ ಆರ್ಥಿಕತೆ: ದುಸ್ಥಿತಿಯಲ್ಲಿ ಜನರ ಬದುಕು

ಪ್ರೊ. ಟಿ.ಆರ್.ಚಂದ್ರಶೇಖರ

ರಾಜ್ಯೋತ್ಸವದ ವಿಶೇಷ

ಕರ್ನಾಟಕದ ಆರ್ಥಿಕತೆಯು ಸಮೃದ್ಧವಾಗಿದೆ. ಅದರ ಬೆಳವಣಿಗೆ ದರವು 2023–24ರಲ್ಲಿ ಶೇ. 10.2ರಷ್ಟಿದೆ (ಮೂಲ: ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ). ಇದು ದೇಶದ ಆರ್ಥಿಕ ಬೆಳವಣಿಗೆ ದರವಾದ ಶೇ. 8.2ಕ್ಕಿಂತ ಅಧಿಕವಾಗಿದೆ. ಕೆಳಗಿನ ಕೋಷ್ಟಕದಲ್ಲಿ ನಮ್ಮ ನೆರೆಯ ರಾಜ್ಯಗಳ ಆರ್ಥಿಕ ಬೆಳವಣಿಗೆ ದರ ಮತ್ತು ನಿವ್ವಳ ರಾಜ್ಯ ಆಂತರಿಕ ಉತ್ಪನ್ನದ(ಎನ್ಎಸ್‌ಡಿಪಿ) ವಿವರಗಳನ್ನು ನೀಡಲಾಗಿದೆ.

ಕೋಷ್ಟಕ 1. ಕರ್ನಾಟಕದ ನಿವ್ವಳ ರಾಜ್ಯ ಆಂತರಿಕ ಉತ್ಪನ್ನ 2019–20 ಮತ್ತು 2022–23

(ಚಾಲ್ತಿ ಬೆಲೆಗಳಲ್ಲಿ: ಲಕ್ಷ ಕೋಟಿ ರೂಪಾಯಿಗಳು)

ಕ್ರ. ಸಂ.	ರಾಜ್ಯಗಳು	2019–20	2022–23	ತಲಾ ವರಮಾನ (ರೂ.ಗಳಲ್ಲಿ)2021–22
1	ಆಂಧ್ರಪ್ರದೇಶ	8.28	11.67	ರೂ. 192587
2	ಗುಜರಾತ್	14.37	19.46	ರೂ. 241030
3	ಕರ್ನಾಟಕ	14.68	20.55	ರೂ. 265625
4	ತಮಿಳುನಾಡು	15.64	21.15	ರೂ. 242253
5	ತೆಲಂಗಾಣ	8.63	11,84	ರೂ. 270839
6	ಭಾರತ	177.46	234.39	ರೂ. 148524

ಮೂಲ: ಭಾರತ ಸರ್ಕಾರ 2024–ಆರ್ಥಿಕ ಸಮೀಕ್ಷೆ 2023–24

ಕೋಷ್ಟಕದಲ್ಲಿ ತಮಿಳುನಾಡು ಬಿಟ್ಟರೆ ವರಮಾನವು ಅಧಿಕವಾಗಿರುವ ರಾಜ್ಯವೆಂದರೆ ಕರ್ನಾಟಕ. ತಲಾ ನಿವ್ವಳ ರಾಜ್ಯ ಆಂತರಿಕ ಉತ್ಪನ್ನದಲ್ಲಿ ಕರ್ನಾಟಕವು ಗುಜರಾತ್ ಮತ್ತು ತಮಿಳುನಾಡು ರಾಜ್ಯಗಳಿಗಿಂತ ಉತ್ತಮ ಸ್ಥಾನದಲ್ಲಿದೆ. ಇದೇ ರೀತಿಯಲ್ಲಿ ಅಭಿವೃದ್ಧಿಯ ಮತ್ತೊಂದು ಮಾಪನವಾದ ಮಾನವ ಅಭಿವೃದ್ಧಿಯಲ್ಲಿಯೂ ರಾಜ್ಯವು ಉತ್ತಮ ಸ್ಥಾನದಲ್ಲಿದೆ. ಕರ್ನಾಟಕ ಮಾನವ ಅಭಿವೃದ್ಧಿ ವರದಿ 2022ರ ಪ್ರಕಾರ ದೇಶದ ಪ್ರಮುಖ ರಾಜ್ಯಗಳಲ್ಲಿ 2019ರಲ್ಲಿ ರಾಜ್ಯ 11 ನೆಯ ಸ್ಥಾನದಲ್ಲಿದೆ. ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ 0.644. ಆದರೆ ದೇಶದ ಮಾನವ ಅಭಿವೃದ್ಧಿ ಸೂಚ್ಯಂಕ 0.629,

ಜನಸಂಖ್ಯೆಯ ಬೆಳವಣಿಗೆಯನ್ನು ಸಮರ್ಥವಾಗಿ ನಿಯಂತ್ರಿಸಿರುವ ರಾಜ್ಯ ಕರ್ನಾಟಕ. ಕರ್ನಾಟಕದ ಒಟ್ಟು ಫಲವತ್ತತೆ ಪ್ರಮಾಣ(ಟಿಎಫ್‌ಆರ್) 1.8ಕ್ಕಿಳಿದಿದೆ. ಇದು ಯಾವುದನ್ನು ಪುನರ್‌ಭರ್ತಿ ದರ ಎನ್ನುತ್ತೇವೆಯೋ ಅದಕ್ಕಿಂತ ಕೆಳಮಟ್ಟದಲ್ಲಿದೆ. ಇಂದು ಕರ್ನಾಟಕದಲ್ಲಿ ಜನಸಂಖ್ಯೆಯು ಸಮಸ್ಯೆಯಾಗಿ ಉಳಿದಿಲ್ಲ. ಇದು ಕರ್ನಾಟಕ ಆರ್ಥಿಕತೆಯ ಸಮೃದ್ಧಿಯ–ಸುಸ್ಥಿತಿಯ ಚಿತ್ರ. ಇದಕ್ಕೆ ಎದುರಾಗಿ ಜನರ ಬದುಕಿನ ದುಸ್ಥಿತಿಯ ಚಿತ್ರವಿದೆ.

ಜನರ ಬದುಕು ಸಮೃದ್ಧವಾಗಿಲ್ಲ

ಆರ್ಥಿಕತೆಯು ಸಮೃದ್ಧವಾಗಿದೆ. ಆದರೆ ಈ ಸಮೃದ್ಧತೆಯನ್ನು ಸಮಾಜದಲ್ಲಿನ ಎಲ್ಲರಿಗೂ ಮತ್ತು ಎಲ್ಲ ಲಿಂಗಗಳಿಗೂ ಹಾಗೂ ಎಲ್ಲ ಪ್ರದೇಶಗಳಿಗೂ ಸಮಾನವಾಗಿ ಹಂಚುವುದು ಸಾಧ್ಯವಾಗಿಲ್ಲ. ಆರ್ಥಿಕ ಅಭಿವೃದ್ಧಿಯಲ್ಲಿ ವರಮಾನದ ಏರಿಕೆಯು ಎಷ್ಟು ಮುಖ್ಯವೋ ಅದರ ಹಂಚಿಕೆಯೂ ಅಷ್ಟೇ ಮುಖ್ಯ. ಆದರೆ ಆರ್ಥಿಕ ಸಮೃದ್ಧತೆಯ ಹಂಚಿಕೆಯು ನಡೆಯುತ್ತಿಲ್ಲ. ಇದಕ್ಕೆ ಪ್ರಮುಖ ಸೂಚಿಯೆಂದರೆ ಆರ್ಥಿಕತೆಯ ಮೂರು ವಲಯಗಳ ನಡುವಣ ವರಮಾನದ ಹಂಚಿಕೆ.

ಕೋಷ್ಟಕ 2. ಕೃಷಿ–ಕೃಷಿಯೇತರ ವಲಯಗಳ ವರಮಾನದಲ್ಲಿನ ಅಸಮಾನತೆ (ಚಾಲ್ತಿ ಬೆಲೆಗಳು: ಕೋಟಿ ರೂಪಾಯಿಗಳು)

ವರ್ಷ	ವಿವರ	ಕೃಷಿ ವಲಯ	ಕೃಷಿಯೇತರ ವಲಯ	ಒಟ್ಟು
2013–14	ನಿವ್ವಳ ರಾಜ್ಯ ಆಂತರಿಕ ಉತ್ಪನ್ನ (ಎನ್ಎಸ್‌ಡಿಪಿ)	ರೂ. 78272 (ಶೇ. 14.79)	ರೂ.450918 (ಶೇ.85.21)	ರೂ.529190 (100.00)
2022–23	ನಿವ್ವಳ ರಾಜ್ಯ ಆಂತರಿಕ ಉತ್ಪನ್ನ (ಎನ್ಎಸ್‌ಡಿಪಿ)	ರೂ.292365 (ಶೇ.15.82)	ರೂ. 1556029 (ಶೇ.84.18)	ರೂ.1848394 (100.00)

ಮೂಲ ಕನಾಟಕ ಆರ್ಥಿಕ ಸಮೀಕ್ಷೆ 2013–14(ಪುಟ: 16) ಮತ್ತು 2022–23 (ಪುಟ 21)

ಕರ್ನಾಟಕದಲ್ಲಿ ಒಟ್ಟು ದುಡಿಮೆಗಾರರಲ್ಲಿ ಕೃಷಿ ಮತ್ತು ತತ್ಸಬಂಧಿ ವಲಯ ಮತ್ತು ಇತರೆ ವಲಯಗಳ ನಡುವೆ ಅಂದಾಜು ಅನುಕ್ರಮವಾಗಿ ಶೇ.45 ಮತ್ತು ಶೇ.55ರಂತೆ ಹಂಚಿಕೆಯಾಗಿದೆ. ಅಂದರೆ ಒಟ್ಟು ದುಡಿಮೆಗಾರರಲಿ ಶೇ.45ರಷ್ಟು ಜನರು ರಾಜ್ಯದ ನಿವ್ವಳ ವರಮಾನದಲ್ಲಿ ಪಡೆಯುತ್ತಿರುವ ಪ್ರಮಾಣ ಎರಡೂ ಕಾಲಘಟ್ಟಗಳಲ್ಲಿ ಶೇ.15 ರಷ್ಟಿದೆ. ಆದರೆ ಕೈಗಾರಿಕೆ ಮತ್ತು ಸೇವಾ ವಲಯದ ಶೇ.55ರಷ್ಟು ದುಡಿಮೆಗಾರರು ವರಮಾನದಲ್ಲಿನ ಶೇ.85ರಷ್ಟನ್ನು ಅನುಭವಿಸುತ್ತಿದ್ದಾರೆ. ಇದು ಅಸಮಾನ್ಯ ಅಸಮಾನತೆಯಾಗಿದೆ.

ಈ ಬಗೆಯ ಅಸಮಾನತೆಯಿಂದಾಗಿ ಇಂದು ಗ್ರಾಮೀಣ ಪ್ರದೇಶದ ಭೂರಹಿತ ದಿನಗೂಲಿ ದುಡಿಮೆಗಾರರು ಉದ್ಯೋಗವನ್ನು–ಬದುಕನ್ನು ಅರಸಿಕೊಂಡು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಬೆಂಗಳೂರು ರಾಜ್ಯದೊಳಗಿನ ಮತ್ತು ಹೊರರಾಜ್ಯಗಳಲ್ಲಿನ ವಲಸೆ ಕಾರ್ಮಿಕರಿಂದ ತುಂಬಿ ತುಳುಕುತ್ತಿದೆ. ಯಾವುದನ್ನು ‘ಕ್ಯಾರಿಯಿಂಗ್ ಕೆಪಾಸಿಟಿ’ ಎನ್ನುತ್ತೇವೆಯೋ ಅದನ್ನು ಮೀರಿ ಬೆಂಗಳೂರು ಬೆಳೆಯುತ್ತಿದೆ. ರಾಜ್ಯದ 2021–22ರ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ ಬೆಂಗಳೂರು ನಗರ ಜಿಲ್ಲೆಯ ಪಾಲು ಶೇ.35.58 (ರೂ.69.84 ಲಕ್ಷ ಕೋಟಿ). ಉಳಿದ 30 ಜಿಲ್ಲೆಗಳ ಪಾಲು ಶೇ.64.42 (ರೂ.189.29 ಲಕ್ಷ ಕೋಟಿ). ಈ ಕಾರಣದಿಂದಲೇ ಬೆಂಗಳೂರು ನಗರ ಜಿಲ್ಲೆಯ ತಲಾ ವರಮಾನ 2021–22ರಲ್ಲಿ ರೂ.6,21,131. ಉಳಿದ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯದ್ದು ರೂ.4,43,057 ರಷ್ಟಿದ್ದರೆ, ಯಾದಗಿರಿ ಜಿಲ್ಲೆಯದ್ದು ರೂ.1,24,998 ರಷ್ಟಿದೆ. ಅಂದರೆ ಯಾದಗಿರಿ ಜಿಲ್ಲೆಯ ತಲಾ ವರಮಾನವು ಬೆಂಗಳೂರು ನಗರ ಜಿಲ್ಲೆಯ ತಲಾ ವರಮಾನಕ್ಕಿಂತ ಶೇ.20ರಷ್ಟಿದೆ. ಅಂದರೆ ಯಾದಗಿರಿ ಜಿಲ್ಲೆಯ ತಲಾ ವರಮಾನವು ಬೆಂಗಳೂರು ನಗರ ಜಿಲ್ಲೆಯ ತಲಾ ವರಮಾನದ ಒಂದನೆಯ ಐದರಷ್ಟದೆ (1/5). ಇಲ್ಲಿನ ಅಸಮಾನತೆಯು ಅಸಾಧಾರಣವಾದುದಾಗಿದೆ.

ಮಹಿಳೆಯರ ಸ್ಥಿತಿಗತಿ

ಜನರ ಬದುಕಿನ ಸುಸ್ಥಿತಿಯ ಮುಖ್ಯ ಸೂಚಿಯೆಂದರೆ ಮಹಿಳೆಯರ ಸಾಮಾಜಿಕ–ಆರೋಗ್ಯ ಸ್ಥಿತಿಗತಿ. ಈ ವಿಷಯದಲ್ಲಿ ಕರ್ನಾಟಕವು ಸಾಧಾರಣ ಸ್ಥಿತಿಯಲ್ಲಿದೆಯಾದರೂ ಅದು ಸಮಾಧಾನಕರವಾಗಿಲ್ಲ. ಎನ್‌ಎಫ್‌ಎಚ್‌ಎಸ್ 2019–2021 ವರದಿಯ ಪ್ರಕಾರ ರಾಜ್ಯದಲ್ಲಿನ 15 ರಿಂದ 49 ವರ್ಷ ವಯೋಮಾನದ ಒಟ್ಟು ಮಹಿಳೆಯರಲ್ಲಿ ಅನಿಮಿಯ(ರಕ್ತಹೀನತೆ) ಎದುಸಿರುತ್ತಿರುವ ಮಹಿಳೆಯರ ಪ್ರಮಾಣ 2015–16ರಲ್ಲಿ ಶೇ.44.8ರಷ್ಟಿದ್ದುದು 2019–2021ರಲ್ಲಿ ಇದು ಶೇ.47.8ಕ್ಕೇರಿದೆ. ಇದೇ ರೀತಿಯಲ್ಲಿ 6 ತಿಂಗಳಿಂದ 59 ತಿಂಗಳು ವಯೋಮಾನದ ಒಟ್ಟು ಮಕ್ಕಳಲ್ಲಿ ಅನಿಮಿಯ ಎದುರಿಸುತ್ತಿರುವ ಮಕ್ಕಳ ಪ್ರಮಾಣ 2015–16ರಲ್ಲಿ ಶೇ.60.9 ರಷ್ಟಿದ್ದುದು 2019–2021ರಲ್ಲಿ ಇದು ಶೇ.65.5ಕ್ಕೇರಿದೆ. ರಾಜ್ಯದಲ್ಲಿ 10 ವರ್ಷಗಳಿಗಿಂತ ಹೆಚ್ಚು ಶಾಲೆ ಕಲಿತ ವಯಸ್ಕ ಮಹಿಳೆಯರ ಪ್ರಮಾಣ ಶೇ.50. ಬಾಲ್ಯ ವಿವಾಹದ ಸಮಸ್ಯೆಯನ್ನು ನಮಗೆ ನಿವಾರಣೆ ಮಾಡುವುದು ಸಾಧ್ಯವಾಗಿಲ್ಲ. ರಾಜ್ಯದಲ್ಲಿನ 20–24 ವರ್ಷ ವಯೋಮಾನದ ಮಹಿಳೆಯರಲ್ಲಿ 18 ವರ್ಷ ಶಾಸನಾತ್ಮಕ ವಯಸ್ಸಿಗಿಂತ ಮೊದಲೇ ವಿವಾಹವಾದ ಮಹಿಳೆಯರ ಪ್ರಮಾಣ ಶೇ.21. ಕರ್ನಾಟಕ ಆರ್ಥಿಕತೆಯು ಸಮೃದ್ಧವಾಗಿದೆ. ಆದರೆ ಅಲ್ಲಿನ ಸರಿಸುಮಾರು 300 ಲಕ್ಷ ಮಹಿಳೆಯರ ಬದುಕು ಸುಸ್ಥಿತಿಯಲ್ಲಿಲ್ಲ.

ಕರ್ನಾಟಕದ ಶಿಕ್ಷಣ ಕ್ಷೇತ್ರ

ಉದ್ಯೋಗಕ್ಕೆ ಅರ್ಹರಾದ ಪದವೀಧರರನ್ನು ಉತ್ಪಾದಿಸುವ ಸಾಮರ್ಥ್ಯ ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಗಿಲ್ಲ. ರಾಜ್ಯದಲ್ಲಿ 2023ನೆಯ ಸಾಲಿನಲ್ಲಿ ಪದವಿಪೂರ್ವ ಶಿಕ್ಷಣದಲ್ಲಿ ರಾಜ್ಯ ಸರಾಸರಿ ಫಲಿತಾಂಶ ಶೆ.78.97. ಆದರೆ ದಕ್ಷಿಣ ಕನ್ನಡ ಜಿಲ್ಲೆಯದ್ದು ಶೇ.95.33. ಆದರೆ ಯಾದಗಿರಿ ಜಿಲ್ಲೆಯಲ್ಲಿ ಇದು ಶೇ.62.98 ಮತ್ತು ರಾಯಚೂರು ಜಿಲ್ಲೆಯಲ್ಲಿ ಇದು ಶೇ.66.21. ಯಾವುದನ್ನು ಡೆವಲಪ್‌ಮೆಂಟ್ ಗ್ಯಾಪ್ ಎನ್ನುತ್ತೇವೆಯೋ ಅದು ಇಲ್ಲಿ ರಾಕ್ಷಸ ಸ್ವರೂಪದಲ್ಲಿದೆ. ನಮ್ಮ ಶಿಕ್ಷಣ ವ್ಯವಸ್ಥೆಯ ನಿರ್ವಹಣೆಯು ಎಷ್ಟು ಹದಗೆಟ್ಟಿದೆಯೆಂದರೆ, ರಾಜ್ಯದ ಅತ್ಯಂತ ಹಿಂದುಳಿದ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಎಂಟು ವಿಶ್ವವಿದ್ಯಾಲಯಗಳಿವೆ. ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಎರಡೆರಡು ವಿಶ್ವವಿದ್ಯಾಲಯಗಳಿವೆ. ಈ ವಿಭಾಗದಲ್ಲಿನ ಯಾದಗಿರಿ ಜಿಲ್ಲೆಯಲ್ಲಿನ ವಯಸ್ಕ ಮಹಿಳೆಯರ ಸಾಕ್ಷರತಾ ಪ್ರಮಾಣ 2019–2021ರಲ್ಲಿ ಶೇ.48. ರಾಯಚೂರು ಜಿಲ್ಲೆಯಲ್ಲಿ ಇದು ಶೇ.54. ಆದರೆ ಕಲ್ಯಾಣ ಕರ್ನಾಟಕದ ವಿಭಾಗದ ಉನ್ನತ ಶಿಕ್ಷಣದ ಮೂಲಸೌಲಭ್ಯವು ಅತ್ಯಂತ ಸಮೃದ್ಧವಾಗಿದೆ. ಪ್ರಾಥಮಿಕವೆನ್ನುವ ಪ್ರಾಥಮಿಕ ಶಿಕ್ಷಣ ಸ್ಥಿತಿಗತಿಯು ಹೀನಾಯವಾಗಿದೆ. ಮರದ ಬೇರನ್ನು ಬಲಪಡಿಸದೆ ಅದರಿಂದ ಫಲವನ್ನು ಅಪೇಕ್ಷಿಸುವುದು ದಡ್ಡತನ.

ಆರ್ಥಿಕ ಸಮೃದ್ಧತೆ ಮತ್ತು ಪರಿಸರ ದುಸ್ಥಿತಿ

ನಮ್ಮ ಸರ್ಕಾರದ ಆರ್ಥಿಕ ನೀತಿಯು ಪರಿಸರ–ಸ್ನೇಹಿಯಾಗಿಲ್ಲ. ಕುಡಿಯುವ ನೀರು ಶುದ್ಧವಾಗಿ ಉಳಿದಿಲ್ಲ, ಸೇವಿಸುವ ಗಾಳಿ ಶುದ್ಧವಾಗಿಲ್ಲ. ಕೃಷಿಯ ಆಧಾರವಾದ ಭೂಮಿಯು ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ನೀರಾವರಿಯು ವರವಾಗುವುದಕ್ಕೆ ಬದಲಾಗಿ ಶಾಪವಾಗಿ ಪರಿಣಮಿಸಿದೆ. ಅಚ್ಚುಕಟ್ಟು ಪ್ರದೇಶದಲ್ಲಿ ಭೂಮಿಯ ಸಾರ ನಷ್ಟವಾಗುತ್ತಿದೆ. ಸುಸ್ಥಿರ ಅಭಿವೃದ್ಧಿಯೆನ್ನುವುದು ಮಾತಿಗೆ ಮಾತ್ರ ಸೀಮಿತವಾಗಿದೆ. ಅಕ್ರಮ ಗಣಿಗಾರಿಕೆಯಿಂದ ರಾಜ್ಯದಲ್ಲಿ ಪರಿಸರಕ್ಕೆ ಸಂಬಂಧಿಸಿದಂತೆ ಏನೆಲ್ಲ ಅನಾಹುತವಾಗಿದೆ ಎಂಬುದು ಜಗಜ್ಜಾಹೀರಾಗಿದೆ. ಇಷ್ಟಾದರೂ ನಮ್ಮ ಸರ್ಕಾರ ಗದಗ ಜಿಲ್ಲೆಯ ಕಪ್ಪತ್ತಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಯೋಚಿಸುತ್ತಿದೆ. ಖನಿಜ–ಕಲ್ಲು ಗಣಿಗಾರಿಕೆಯು ರಾಜ್ಯದ ವರಮಾನದ ಮುಖ್ಯ ಮೂಲವೇನಲ್ಲ. ಉದಾ: ರಾಜ್ಯದ 2023–24ರ ಜಿಎಸ್‌ಡಿಪಿಯಲ್ಲಿ ಜಾನುವಾರು ವಲಯದ ಕಾಣಿಕೆ ಶೇ.3.65, ಅರಣ್ಯಗಾರಿಕೆ ಕಾಣಿಕೆ ಶೇ.0.72 ಮತ್ತು ಮೀನುಗಾರಿಕೆ ಕಾಣಿಕೆ ಶೇ.0.48. ಒಟ್ಟು ಇವುಗಳ ಕಾಣಿಕೆ ಶೇ.4.85. ಆದರೆ ಖನಿಜ ಮತ್ತು ಕಲ್ಲು ಗಣಿಗಾರಿಕೆ ಕಾಣಿಕೆ ಶೇ.0.66. ಜಾನುವಾರು ಆರ್ಥಿಕತೆ, ಅರಣ್ಯಗಾರಿಕೆ ಮತ್ತು ಮೀನುಗಾರಿಕೆಗಳು ಪರಿಸರ–ಸ್ನೇಹಿ ಚಟುವಟಿಕೆಗಳು, ಇವು ಉದ್ಯೋಗ–ಸಾಂದ್ರ ಚಟುವಟಿಕೆಗಳು ಮತ್ತು ಅಂತರ–ತಲೆಮಾರು ಸಮಾನತೆಯನ್ನು ಕಾಯ್ದಿಡುವ ಚಟುವಟಿಕೆಗಳು. ಪರಿಸರ–ನಾಶದ, ಉದ್ಯೋಗ ಕೊಲ್ಲುವ, ಕೃಷಿಗೆ ಶಾಪವಾಗಿರುವ ಗಣಿಗಾರಿಕೆಗೆ ಸರ್ಕಾರ ಯಾಕೆ ಇಷ್ಟೊಂದು ಮಹತ್ವ ನೀಡುತ್ತದೆ ಎಂಬುದು ಅರ್ಥವಾಗುತ್ತಿಲ್ಲ. ಗಣಿಗಾರಿಕೆಯು ಖಾಸಗಿ ಉದ್ದಿಮೆದಾರರಿಗೆ ಸಮೃದ್ಧವಾಗಿ ವರಮಾನ ನೀಡಬಹುದು. ರಾಜ್ಯಕ್ಕೆ, ರಾಜ್ಯದ ಜನರಿಗೆ, ಜನರ ಜೀವನೋಪಾಯಕ್ಕೆ ಇದು ಶಾಪವಾಗಿದೆ.

ಒಟ್ಟಾರೆ ಇಂದು ಆರ್ಥಿಕ ಬೆಳವಣಿಗೆ ಎನ್ನುವುದು ಉಳ್ಳವರ ಶೇ.10 ರಿಂದ ಶೇ.15ರಷ್ಟು ಜನರ ಹಿತಾಸಕ್ತಿಗಳನ್ನು ಕಾಯ್ದಿಡುವ ಕೆಲಸ ಮಾಡುತ್ತಿದೆ ವಿನಾ ಉಳಿದ ಶೇ.90ರಷ್ಟು ಜನರ ಬದುಕನ್ನು ಭದ್ರಪಡಿಸುತ್ತಿಲ್ಲ. ನಮ್ಮ ಆರ್ಥಿಕ ನೀತಿಯನ್ನು ಮರುಪರಿಶೀಲಿಸುವ ಅಗತ್ಯವಿದೆ. ಸರ್ಕಾರವು ಅಭಿವೃದ್ಧಿಯನ್ನು “ಕಟ್ಟಡ–ಕಾಮಗಾರಿ–ಕಾಂಟ್ರಾಕ್ಟ್–ಕಮೀಷನ್” ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದನ್ನು ಬಿಟ್ಟು ಜನರನ್ನು, ಅಂದರೆ ದುಸ್ಥಿತಿಯ ಅಂಚಿನಲ್ಲಿ ಬದುಕನ್ನು ದೂಡುತ್ತಿರುವ ದಲಿತರ–ಆದಿವಾಸಿಗಳ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ–ನಿರ್ವಹಿಸುವ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಬೇಕು. ಅಭಿವೃದ್ಧಿಯ ಮೂಲ ದ್ರವ್ಯ ಜನರೇ ವಿನಾ ಬಂಡವಾಳಿಗರಲ್ಲ.

ಮಾಧ್ಯಮ ಪರಿಸ್ಥಿತಿ

ಮಾಧ್ಯಮಗಳ ಬಳಕೆಯಲ್ಲಿ ಹೆಚ್ಚಳ, ವಿನ್ಯಾಸ ಬದಲಾವಣೆ

ಭಾಗ 2

ವಸಂತರಾಜ ಎನ್.ಕೆ.

ಸಿಪಿಐ(ಎಂ) ಪಕ್ಷದ ಸಮ್ಮೇಳನಗಳ ಸಂದರ್ಭದಲ್ಲಿ ಇದಕ್ಕೆ ನಮ್ಮ ದೇಶದ ರಾಜ್ಯದ ಕಳೆದ 3 ವರ್ಷಗಳ ಒಟ್ಟಾರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ, ಪರಿಸ್ಥಿತಿಯ ಸಿಂಹಾವಲೋಕನ ಅಗತ್ಯವಾಗುತ್ತದೆ. ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳ, ಪರಿಸ್ಥಿತಿಯ ಪರಿಶೀಲನೆ ಇದರ ಭಾಗವಾಗಿದೆ. ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿ, ಸಮಾಜದಲ್ಲಿ ಅದು ವಹಿಸುತ್ತಿರುವ ಪಾತ್ರ, ಮಾಧ್ಯಮದ ಜತೆ ಜನತೆಯ ವ್ಯವಹಾರ-ಇವೆಲ್ಲವನ್ನು ಪರಿಶೀಲಿಸಬೇಕಾಗುತ್ತದೆ. ಮಾಧ್ಯಮ ಪರಿಸ್ಥಿತಿಯ ಅವಲೋಕನದ ಈ ಲೇಖನ ಮಾಲೆಯ ಮೂರು ಲೇಖನಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಮೊದಲ ಭಾಗದಲ್ಲಿ ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದೆ. ಈ ಎರಡನೆಯ ಭಾಗದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಹೊಸ ವೆಬ್ ಮಾಧ್ಯಮಗಳು ಕೊಡುತ್ತಿರುವ ಸೇವೆಗಳಿಗೆ ಹೇಗೆ ಸ್ಪಂದಿಸುತ್ತಿದ್ದಾರೆ, ಆ ಮೂಲಕ ಹಳೆಯ ಮಾಧ್ಯಮ ಕ್ಷೇತ್ರಗಳ ಮೇಲೆ ಯಾವ ಪರಿಣಾಮವಾಗುತ್ತಿದೆ ಎಂಬುದನ್ನು ನಿರೂಪಿಸಲಾಗಿದೆ.

ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಬಳಸಬಹುದಾದ, ಬಹು ಮಾಧ್ಯಮಗಳನ್ನು (ಪಠ್ಯ, ಚಿತ್ರ, ಅಡಿಯೊ, ವಿಡಿಯೊ) ತಲುಪಿಸಬಲ್ಲ, ಪರಸ್ಪರ ಸ್ಪಂದನೆ ಇರುವ, ವೇಗದ, ವೈಯಕ್ತಿಕ/ಸಾಮೂಹಿಕ ಮಾಧ್ಯಮವಾಗಿ ವೆಬ್ (ಅಥವಾ ಡಿಜಿಟಲ್) ಬೆಳೆದಿದೆ. ವೆಬ್ (ಅಥವಾ ಡಿಜಿಟಲ್)-ಪತ್ರಿಕೆ ಟಿವಿ, ರೇಡಿಯೋ ಮತ್ತು ಫಿಲಂ ಥಿಯೇಟರ್ ಸ್ಥಾನ ಆಕ್ರಮಿಸಬಲ್ಲ, ಅವುಗಳ ಪಾತ್ರಕ್ಕೆ ಸವಾಲು ಹಾಕಬಲ್ಲ, ಅವುಗಳಿಗೆ ಇನ್ನೂ ಉತ್ತಮವಾದ ಬದಲಿಯಾಗಬಲ್ಲ-ಮಾಧ್ಯಮವಾಗಿ ಬೆಳೆದಿದೆ. ಪ್ರಿಂಟ್ ಪತ್ರಿಕೆಗೆ ಬದಲಿಯಾಗಿ ವೆಬ್ ಪತ್ರಿಕೆಗಳು ಬೆಳೆದಿವೆ. ರೇಡಿಯೊ ಗೆ ಬದಲಿಯಾಗಿ ಪಾಡ್ ಕಾಸ್ಟ್, ಅಡಿಯೋ/ಸಂಗೀತದ ಸ್ಟ್ರೀಮಿಂಗ್ ಸೇವೆಗಳು ಬೆಳೆದಿವೆ. ಟಿವಿ ಗೆ ಬದಲಿಯಾಗಿ ವೆಬ್ ಆಧಾರಿತ ಯೂಟ್ಯೂಬ್, ವಿಮಿಯೊ ನಂತಹ ಒಟಿಟಿ ಎಂದು ಕರೆಯಲಾಗುವ (ಒವರ್ ದ ಟಾಪ್-ಇಂಟರ್-ನೆಟ್ ಅಥವಾ ವೆಬ್ ವೇದಿಕೆಯ ಮೇಲೆ ಕೊಡುವ ಎಂಬರ್ಥದಲ್ಲಿ) ವಿಡಿಯೊ ಸೇವೆಗಳು ಬೆಳೆದಿವೆ. ಫಿಲಂ ಥೀಯೆಟರ್ ಗೆ ಬದಲಿಯಾಗಿ ಅಮೆಜಾನ್ ಪ್ರೈಂ ವಿಡಿಯೊ, ನೆಟ್‌ಫ್ಲಿಕ್ಸ್ ನಂತಹ ಚಂದಾ ಆಧಾರಿತ ಒಟಿಟಿ ಸೇವೆಗಳು ಆರಂಭವಾಗಿವೆ. ಕೊವಿಡ್ ಅವಧಿಯ ನಂತರ ಹಲವು (ಕನ್ನಡ ಸೇರಿದಂತೆ) ಫಿಲಂಗಳು ಒಟಿಟಿ ಯಲ್ಲೇ ಬಿಡುಗಡೆಯಾಗುತ್ತಿವೆ.

ವೆಬ್-ಆಧಾರಿತ, ಚಂದಾ ಆಧಾರಿತ ಸೇವೆಗಳ ವಿಸ್ತರಣೆ, ವಿವಿಧ ಸೇವೆಗಳ ಸಂಗಮ

ಹಿಂದಿನ ಅವಧಿಯಲ್ಲಿ ವೆಬ್-ಆಧಾರಿತ ಸೇವೆಗಳು ಬಹುಪಾಲು ಜಾಹೀರಾತು ಆಧಾರಿತವಾಗಿದ್ದು ನೋಡುಗ/ಕೇಳುಗ/ಓದುಗರಿಗೆ ಉಚಿತವಾಗಿದ್ದವು. ಆದರೆ ಈಗ ಚಂದಾ ಆಧಾರಿತ ಸೇವೆಗಳು (ವಿಶೇಷವಾಗಿ ವಿಡಿಯೋಗಳಲ್ಲಿ) ಆರಂಭವಾಗಿ ವಿಸ್ತರಣೆಯಾಗುತ್ತಿದೆ. ಮಾತ್ರವಲ್ಲ, ಸಾಂಪ್ರದಾಯಿಕ ಮಾಧ್ಯಮಗಳಾದ ಪತ್ರಿಕೆ, ಟಿವಿ, ರೇಡಿಯೊ, ಫಿಲಂಗಳು ತಮ್ಮ ವೆಬ್ ಆವೃತ್ತಿಯನ್ನು ಆರಂಭಿಸಿ ಅದನ್ನು ಮೊದಲು ಉಚಿತವಾಗಿ, ಕ್ರಮೇಣ ಚಂದಾ-ಆಧಾರಿತವಾಗಿ ನಡೆಸುವುದು ಅಗತ್ಯವಾಗಿ ಬಿಟ್ಟಿದೆ. ಹೀಗೆ ಮಾಧ್ಯಮಗಳಲ್ಲಿ ಪತ್ರಿಕೆ, ಟಿವಿ, ರೇಡಿಯೋ, ಡಿಜಿಟಲ್/ವೆಬ್ (ಮತ್ತು ಫಿಲಂ ಸಹ) ಎಂದು ಮಾಧ್ಯಮ ವೇದಿಕೆ, ಆ ಸೇವೆ ಕೊಡುವ ಕಂಪನಿ, ಅದಕ್ಕೆ ಕೊಡಬೇಕಾದ ಚಂದಾ-ಇವುಗಳ ಮೇಲೆ ಆಧಾರಿತವಾಗಿ ಪ್ರತ್ಯೇಕಿಸುವುದು ಗೋಜಲಾಗುತ್ತಿದೆ. ಉದಾಹರಣೆಗೆ ಮೊಬೈಲ್ ಸೇವೆ ಕೊಡುವ ಕಂಪನಿಗಳು ವೆಬ್, ಕೆಲವು ಒಟಿಟಿ ಅಡಿಯೊ/ವಿಡಿಯೊ ಸೇವೆಗಳನ್ನು ಬಂಡಲ್ ಮಾಡಿ ಒಂದು ಚಂದಾ ವಿಧಿಸುತ್ತವೆ. ಅದೇ ರೀತಿ ಕೇಬಲ್ ಅಥವಾ ಸ್ಯಾಟಲೈಟ್ ಟಿವಿ ಸೇವೆಯ ಕಂಪನಿಗಳು ಸಹ ಟಿವಿ ಚಾನೆಲುಗಳಲ್ಲದೆ ವೆಬ್, ಒಟಿಟಿ ಅಡಿಯೊ/ವಿಡಿಯೊ ಸೇವೆಗಳನ್ನು ಬಂಡಲ್ ಮಾಡಿ ಕೊಡುತ್ತಿವೆ. ಅವುಗಳಲ್ಲಿ ಅಡಿಯೊ/ವಿಡಿಯೊ ಕರೆ ಸಹ ಮಾಡಬಹುದು. ಟಿವಿ, ಕಂಪ್ಯೂಟರ್, ಲ್ಯಾಪ್ ಟಾಪ್, ಪ್ಯಾಡ್, ಮೊಬೈಲ್ ಉಪಕರಣಗಳು ಸಹ ಎಲ್ಲ ಸೇವೆ, ಮಾಧ್ಯಮಗಳನ್ನು ಕೊಡಬಲ್ಲದ್ದಾಗಿ ವಿಕಾಸ ಹೊಂದಿವೆ. ಪ್ರಜಾವಾಣಿ ಇ-ಪತ್ರಿಕೆಯನ್ನು ಇವ್ಯಾವುದರಲ್ಲಿ ಓದಬಹುದು, ವಿವಿಧ ಭಾರತಿ ಬೆಂಗಳೂರು ಕೇಂದ್ರದ ಕಾರ್ಯಕ್ರಮವನ್ನು ಯಾವುದರಲ್ಲೂ ಕೇಳಬಹುದು. ಟಿವಿ ಚಾನೆಲ್ ಮತ್ತು ಅಮೆಜಾನ್ ಪ್ರೈಂ ವಿಡಿಯೊ ಫಿಲಂ/ಸೀರಿಯಲನ್ನು ಸಹ ಯಾವುದರಲ್ಲೂ ನೋಡಬಹುದು.

ವಿವಿಧ ವೆಬ್-ಆಧಾರಿತ ಸೇವೆಗಳ ವಿಸ್ತರಣೆ, ಚಂದಾ ಆಧಾರಿತ ಸೇವೆಗಳ ಆರಂಭ/ವಿಸ್ತರಣೆ, ವಿವಿಧ ಸೇವೆಗಳ ಸಂಗಮ-ಈ ಅವಧಿಯಲ್ಲಿ ಗಣನೀಯವಾಗಿ ವಿಸ್ತಾರವಾಗಿದೆ.

ಮಾಧ್ಯಮಗಳ ಬಳಕೆಯಲ್ಲಿ ಹೆಚ್ಚಳ, ವಿನ್ಯಾಸ ಬದಲಾವಣೆ

ಇವೈ-ಫಿಕ್ಕಿ (EY-FICCI) ಸಮೀಕ್ಷೆ 2024 ವರದಿಯ ಪ್ರಕಾರ ಈ ಅವಧಿಯಲ್ಲಿ ಹೊಸ ಮಾಧ್ಯಮ ವೆಬ್ ಸೇರಿದಂತೆ ವಿವಿಧ ಮಾಧ್ಯಮಗಳ ಬಳಕೆಯಲ್ಲಿ ಈ ಕೆಳಗಿನ ಹೆಚ್ಚಳ, ವಿನ್ಯಾಸ ಬದಲಾವಣೆ ಕಂಡು ಬಂದಿದೆ:

ಯೂಟ್ಯೂಬ್/ವಿಡಿಯೊ

* ಯೂಟ್ಯೂಬ್ ಬಳಕೆದಾರರ ಸಂಖ್ಯೆ 46.7 ಕೋಟಿ ಮುಟ್ಟಿದೆ.
* ಅಖಿಲ ಭಾರತ ಸರಾಸರಿಯಲ್ಲಿ ಯೂಟ್ಯೂಬ್ ವೀಕ್ಷಣೆ ಈಗ ಟಿವಿ ವೀಕ್ಷಣೆಯ ಶೇ 61ರ ಮಟ್ಟಕ್ಕೆ ತಲುಪಿದೆ. ಅನಿರೀಕ್ಷಿತವಾಗಿ ಹೆಚ್ಚಿನ ಹಿಂದಿ ರಾಜ್ಯಗಳಲ್ಲಿ ಯೂಟ್ಯೂಬ್ ವೀಕ್ಷಣೆ ಈಗ ಟಿವಿ ವೀಕ್ಷಣೆಗಿಂತ ಹೆಚ್ಚಿದೆ. ದಕ್ಷಿಣದ ರಾಜ್ಯಗಳಲ್ಲಿ ಅದು ಕಡಿಮೆಯಿದೆ. ಕರ್ನಾಟಕದಲ್ಲಿ ಈ ಪ್ರಮಾಣ ಶೇ. 40ರಷ್ಟಿದೆ.
* ಯೂಟ್ಯೂಬ್ ಶಾರ್ಟ್ಸ್ ಸರಾಸರಿ ದಿನದ ನೋಡುಗರ ಸಂಖ್ಯೆ ಕಳೆದ ವರ್ಷದಿಂದ ಶೇ. 120ರಷ್ಟು ಹೆಚ್ಚಾಗಿದೆ.
* ಮೊಬೈಲ್ ವಿಡಿಯೊ ವೀಕ್ಷಕರ ಸಂಖ್ಯೆ 2023ರಲ್ಲಿ ಶೇ. 7 ಹೆಚ್ಚಿದ್ದು 56.3 ಕೋಟಿ ಮುಟ್ಟಿದೆ.
* ವಿಡಿಯೋ ಹರಿವಿನ ವೇದಿಕೆಗಳಲ್ಲಿ 2023ರಲ್ಲಿ 3000 ಗಂಟೆಗಳಷ್ಟು ಹೊಸ ವಿಡಿಯೊಗಳನ್ನು ತಯಾರಿಸಲಾಯಿತು. ಇವುಗಳಲ್ಲಿ ಭಾರತೀಯ ಭಾಷೆಗಳ ಪ್ರಮಾಣ 2012ರಲ್ಲಿ ಶೇ. 47ರಿಂದ 2023ರಲ್ಲಿ ಶೇ. 52 ಕ್ಕೇರಿದೆ.
* ಸುಮಾರು 2 ಲಕ್ಷ ಜನ ಕಂಟೆಂಟ್ ಸೃಷ್ಟಿಯನ್ನು (ಹೆಚ್ಚಾಗಿ ಯೂಟ್ಯೂಬ್ ಮೇಲೆ) ತಮ್ಮ ಪೂರ್ಣಕಾಲದ ಉದ್ಯೋಗ ಮಾಡಿಕೊಂಡಿದ್ದು ಅವರು ಅದರಿಂದ ಬರುವ ಆದಾಯದ ಮೇಲೆ ಜೀವಿಸುತ್ತಿದ್ದಾರೆ. 10 ಲಕ್ಷ ಫಾಲೋವರ್ಸ್ ಇರುವವರು ಸುಮಾರು ಪ್ರತಿ ತಿಂಗಳು 20 ಸಾವಿರದಿಂದ 2.5 ಲಕ್ಷ ರೂ. ವರೆಗೆ ಸಂಪಾದಿಸುತ್ತಾರೆ.

ಟಿ.ವಿ

* ಟಿವಿ ವೀಕ್ಷಣೆ 2022ರಿಂದ ಶೇ. 2ರಷ್ಟು ಹೆಚ್ಚಿದೆ. ಈ ಹೆಚ್ಚಳ ಹೆಚ್ಚಿನ ಆದಾಯವಿರುವವರಲ್ಲಿ ಶೇ. 1 ರಷ್ಟು ಇದ್ದರೆ ಕಡಿಮೆ ಆದಾಯದವರಲ್ಲಿ ಶೇ. 4 ಇದೆ. ಆದರೆ 15-21 ವಯಸ್ಸಿನ ಯುವಜನರಲ್ಲಿ ಶೇ. 15ರಷ್ಟು ಕುಸಿದಿದೆ.
* ಟಿವಿ ವೀಕ್ಷಣೆ ಹೆಚ್ಚಳದಲ್ಲಿ ಭಾಷೆಗೆ ಅನುಸಾರವಾಗಿ ಬಹಳ ಭಿನ್ನತೆಗಳಿವೆ. ಕನ್ನಡ ಟಿವಿಯ ವೀಕ್ಷಣೆ ಶೇ. 3ರಷ್ಟು ಹೆಚ್ಚಿದೆ. ಗುಜರಾತಿ, ಹಿಂದಿ ಟಿವಿ ವೀಕ್ಷಣೆ ಶೇ. 9ರಷ್ಟು ಹೆಚ್ಚಿದ್ದರೆ ಒಡಿಯಾ, ಮಲಯಾಳಂ, ಬಂಗಾಳಿ ಮತ್ತು ಇಂಗ್ಲಿಷ್ (ಅತ್ಯಂತ ಹೆಚ್ಚಿನ ಶೇ.11) ಇಳಿಕೆ ಕಂಡಿದೆ
* ಸುದ್ದಿ ಟಿವಿ ಬೇರೆಯಾಗಿ ನೋಡಿದರೆ 2023ರ ವೀಕ್ಷಣೆ 2022ಕ್ಕಿಂತ ಶೇ. 11ರಷ್ಟು ಹೆಚ್ಚಿದೆ. ಆದರೆ ಅದು 2020ರ ಮಟ್ಟಕ್ಕಿಂತ ಇನ್ನೂ ಶೇ.30 ಕಡಿಮೆಯಿದೆ.



ಆನ್ ಲೈನ್ ಸುದ್ದಿ

* ಆನ್‌ಲೈನ್ ಸುದ್ದಿ ಬಳಕೆದಾರರ ಸಂಖ್ಯೆ 2023ರಲ್ಲಿ 45.6 ಕೋಟಿ (ಅಂದರೆ ಶೇ. 32) ಜನರನ್ನು ಮುಟ್ಟಿದೆ. ಇವರು ಸರಾಸರಿ ಪ್ರತಿ ತಿಂಗಳು 137 ಮಿನಿಟುಗಳಷ್ಟು ಸುದ್ದಿ (ಬಹುತೇಕ ಚುಟುಕು ವಿಡಿಯೊ ಮತ್ತು ಚುಟುಕು ಪಠ್ಯ) ನೋಡಿದರು.
* ಆನ್‌ಲೈನ್ ಸುದ್ದಿ ಬಳಕೆದಾರರರಲ್ಲಿ ಶೇ. 42 ಭಾರತೀಯ ಭಾಷೆಗಳಲ್ಲಿ ಮಾತ್ರ, ಶೇ. 19 ಇಂಗ್ಲಿಷ್ ನಲ್ಲಿ ಮಾತ್ರ ಮತ್ತು ಶೇ.39 ಎರಡೂ ಭಾಷೆಗಳ ಸುದ್ದಿ ನೋಡಿದರು. ಅಂದರೆ ಶೇ. 81 ಭಾರತೀಯ ಬಾಷೆ ಸುದ್ದಿ ನೋಡಿದರು.
* ಆನ್‌ಲೈನ್ ಸುದ್ದಿ ಬಳಕೆದಾರರು ಕನಿಷ್ಠ 2 ಸುದ್ದಿ ವೇದಿಕೆಗಳನ್ನು ಬಳಸಿದರು ಮತ್ತು ಅವರಲ್ಲಿ ಶೇ. 38 ಜನ ಸುದ್ದಿ ವೀಕ್ಷಣೆಯನ್ನು ದಿನಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಮಾಡಿದರು. ಶೇ. 80 ಸುದ್ದಿ ವೇದಿಕೆಯ ವೆಬ್ ಸೈಟ್ ಬಳಸಿದರೆ, ಶೇ. 14 ಮಾತ್ರ ವೇದಿಕೆಯ ಆಪ್ ಬಳಸಿದರು.
* ಆರು ಪ್ರಮುಖ ಆನ್‌ಲೈನ್ ಸುದ್ದಿ ವೇದಿಕೆ (ಟೈಮ್ಸ್, ನೆಟ್‌ವರ್ಕ್ 18, ಝೀ, ಹಿಂದುಸ್ತಾನ್ ಟೈಮ್ಸ್, ಇಂಡಿಯಾ ಟುಡೆ, ಡೈಲಿ ಹಂಟ್) ಸರಾಸರಿ ಮಾಸಿಕ ಸಕ್ರಿಯ ಬಳಕೆದಾರರ ಸಂಖ್ಯೆ 2023ರಲ್ಲಿ 10 ಕೋಟಿ ದಾಟಿದೆ. ಇವರಲ್ಲಿ ಶೇ. 79 ಸಾಮಾಜಿಕ ಮಾಧ್ಯಮಗಳ ಮೂಲಕ ಸುದ್ದಿ ವೇದಿಕೆಗಳಿಗೆ ಬರುತ್ತಾರೆ
* ಆನ್‌ಲೈನ್ ಸುದ್ದಿ ಬಳಕೆದಾರರಲ್ಲಿ ಶೇ. 61 ಜನ ತಮಗೆ ಕಳೆದ ತಿಂಗಳಲ್ಲಿ ಒಂದು ಬಾರಿ ಸುಳ್ಳು ಅಥವಾ ದಾರಿ ತಪ್ಪಿಸುವ ಸುದ್ದಿ ಕೊಡಲಾಗಿದೆ ಎಂದಿದ್ದಾರೆ. ಈ ರೀತಿಯ ಫೇಕ್ ಸುದ್ದಿಯನ್ನು ಗುರುತಿಸಲು ಆಗುತ್ತಿಲ್ಲ ಎಂದು ಶೇ. 33 ಜನ ಹೇಳಿದ್ದಾರೆ.
* ಭಾರತೀಯ ಭಾಷೆಗಳ ಆನ್‌ಲೈನ್ ಸುದ್ದಿ ಬಳಕೆದಾರರಲ್ಲಿ ಶೇ. 73 ಅತಿ-ಸ್ಥಳೀಯ (ಹೈಪರ್ ಲೋಕಲ್) ಸುದ್ದಿಗಳಲ್ಲಿ ಆಸಕ್ತಿ ಹೊಂದಿದ್ದಾರೆ.

ಸಾಮಾನ್ಯ/ಇತರೇ

* ತಮ್ಮ ಫೋನ್‌ನಲ್ಲಿ ಭಾರತೀಯರು 2023ರಲ್ಲಿ ಸರಾಸರಿ ದಿನಕ್ಕೆ 4.8 ಗಂಟೆ (2020ಕ್ಕೆ ಹೋಲಿಸಿದರೆ ಶೇ. 9 ಹೆಚ್ಚು) ಸಮಯ ಕಳೆಯುತ್ತಾರೆ. ಫೋನ್‌ನಲ್ಲಿ ಕಳೆಯುವ ಸಮಯದಲ್ಲಿ ಅರ್ಧದಷ್ಟು ಸಾಮಾಜಿಕ ಮಾಧ್ಯಮದಲ್ಲಿ ಕಳೆದರೆ, ಶೇ. 28 ಮನೋರಂಜನೆ ಮತ್ತು ಸುದ್ದಿ ಮೇಲೆ ಕಳೆಯುತ್ತಾರೆ
* ಸಾಮಾಜಿಕ ಮಾಧ್ಯಮ ಬಳಕೆದಾರರ ಸಂಖ್ಯೆ 48.2 ಕೋಟಿ (ಭಾರತದ ಜನಸಂಖ್ಯೆಯ ಶೇ. 32) ಆಗಿದ್ದು, ಅವರು ಸರಾಸರಿ ದಿನಕ್ಕೆ 2 ಗಂಟೆ ಸಾಮಾಜಿಕ ಮಾಧ್ಯಮಗಳಲ್ಲಿ ಕಳೆಯುತ್ತಾರೆ
* ಸರಾಸರಿ ಮೊಬೈಲ್ ಡೇಟಾ ಬಳಕೆ 2023ರಲ್ಲಿ ತಿಂಗಳಿಗೆ 31 ಜಿಬಿ ಮುಟ್ಟಿದೆ, ಇದು 2022ಕ್ಕೆ ಹೋಲಿಸಿದರೆ ಶೇ, 24ರಷ್ಟು ಹೆಚ್ಚು.
* ಮೊಬೈಲ್ ಅಡಿಯೋ (ಪಾಡ್ ಕಾಸ್ಟ್, ಸಂಗೀತ ಇತ್ಯಾದಿ) ಹರಿವಿನ ಕೇಳುಗರ ಸಂಖ್ಯೆ 2023ರಲ್ಲಿ 18.5 ಕೋಟಿ ಮುಟ್ಟಿದೆ. ಅವರಲ್ಲಿ 70 ಲಕ್ಷ ಅಡಿಯೋ ಹರಿವಿನ ಸೇವೆಗೆ ಚಂದಾದಾರರಾಗಿದ್ದಾರೆ. ಇಂತಹ ಚಂದಾದಾರರ ಸಂಖ್ಯೆ 2023ರಲ್ಲಿ ಶೇ. 55ರಷ್ಟು ಹೆಚ್ಚಿತು.

ವೆಬ್ ಪತ್ರಿಕೆಗಳು

ಇಂಗ್ಲೀಷ್ ವೆಬ್ ಪತ್ರಿಕೆಗಳು ಈ ಅವಧಿಯಲ್ಲಿ ಗಮನಾರ್ಹವಾಗಿ ಬೆಳೆದಿದ್ದು, ಇಂಗ್ಲಿಷ್ ಮಾಧ್ಯಮದಲ್ಲಿ ಪರಿಣಾಮ ಬೀರಲು ಆರಂಭಿಸಿದೆ. ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು, ವಿವಿಧ ಮೂಲಗಳಿಂದ ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು (Inshorts, Firstpost, Yahoo, Google ಇತ್ಯಾದಿ) ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ಸುದ್ದಿತಾಣಗಳು (Scroll, Wire, Quint, Citizen, Newsclick, Newslaundry ಇತ್ಯಾದಿ) ತಮ್ಮ ಓದುಗರನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿವೆ. ಹೆಚ್ಚಿನವು ಹಿಂದಿ ಮತ್ತು/ಅಥವಾ ಇತರ ಭಾಷೆಯಲ್ಲೂ ಪ್ರಕಟಣೆ ನಡೆಸಿ ಬಹುಭಾಷಾ ಪತ್ರಿಕೆಗಳಾಗುತ್ತಿವೆ. ಬೆಂಗಳೂರು ಕೇಂದ್ರವಾಗಿ ಕೆಲಸ ಮಾಡುತ್ತಿರುವ ನ್ಯೂಸ್ ಮಿನಿಟ್ ಈ ಅವಧಿಯಲ್ಲಿ ಇದಕ್ಕೆ ಹೊಸ ಸೇರ್ಪಡೆ. ಹೆಚ್ಚಿನ ಈ ಪತ್ರಿಕೆಗಳು ದಾನ, ಫಂಡಿಂಗ್ ಗಳಿಂದ ನಡೆಯುತ್ತಿದ್ದು ಚಂದಾ-ಆಧಾರಿತವಾಗಿ ಬದಲಾಗಲು ತಯಾರಿ ನಡೆಸುತ್ತಿವೆ. ಕೆಲವು

ಪುಟ 14 ಕ್ಕೆ

ಬೆಲೆಗಳು ಗಗನಕ್ಕೆ: ಮೋದಿ ಸರಕಾರ ಗಾಢ ನಿದ್ದೆಗೆ



ಪ್ರಕಾಶ್ ಕಾರತ್

ಈ ವರ್ಷದ ಸೆಪ್ಟೆಂಬರ್ ತಿಂಗಳ ಸರಾಸರಿ ಬೆಲೆಯೇರಿಕೆ ಕಳೆದ ಒಂಬತ್ತು ತಿಂಗಳಲ್ಲೇ ಅಧಿಕವಾದ ಶೇಕಡ 5.5 ಆಗಿತ್ತು. ಇನ್ನೂ ಮಹತ್ವದ ವಿಚಾರವೆಂದರೆ, ಆಹಾರ ವಸ್ತುಗಳ ಬೆಲೆಗಳ ಹೆಚ್ಚಳ ಶೇಕಡ 9.2ನ್ನು ದಾಟಿತ್ತು. ಬಹುತೇಕ ಭಾರತೀಯರು ತಮ್ಮ ಆದಾಯದ ಸುಮಾರು ಅರ್ಧದಷ್ಟು ಹಣವನ್ನು ಆಹಾರಕ್ಕೆ ವೆಚ್ಚ ಮಾಡುತ್ತಾರೆ. ಆದ್ದರಿಂದ ಆಹಾರ ಹಣದುಬ್ಬರವು ಜನರನ್ನು ಹೆಚ್ಚಾಗಿ ಕಾಡಿಸುತ್ತದೆ. ಆಹಾರ ಪದಾರ್ಥಗಳ ಪೈಕಿ ವಿಶೇಷವಾಗಿ ತರಕಾರಿ ಬೆಲೆಗಳು ಕಳೆದ ವರ್ಷಕ್ಕೆ ಹೋಲಿಸಿದರೆ ಅಪಾರವಾಗಿ ಏರಿಕೆಯಾಗಿದೆ. ಟೊಮಾಟೋ ಬೆಲೆ ಶೇ. 42.4, ಈರುಳ್ಳಿ ಬೆಲೆ ಶೇ. 66.2 ಮತ್ತು ಆಲೂಗಡ್ಡೆ ಬೆಲೆ ಶೇ. 65.3ರಷ್ಟು ಏರಿಕೆ ದಾಖಲಿಸಿವೆ. ಈ ಮೂರು, ದೇಶದಾದ್ಯಂತ ಅತಿ ಹೆಚ್ಚು ಬಳಕೆಯಾಗುವ ತರಕಾರಿಗಳಾಗಿವೆ.

ಸರಕಾರ ಮತ್ತು ಎಲ್ಲದಕ್ಕೂ ನೆಪ ಹುಡುಕುವ (ಅಪಾಲಿಜಿಸ್ಟಿಕ್) ಅದರ ಅರ್ಥಶಾಸ್ತ್ರಜ್ಞರು ಹವಾಮಾನ ವೈಪರೀತ್ಯಗಳು ಇದಕ್ಕೆ ಕಾರಣವೆಂದು ಹೇಳಿ ಮಾಮೂಲಿನಂತೆ ಕೈ ತೊಳೆದುಕೊಳ್ಳುತ್ತಿವೆಯಾದರೂ ವಾಸ್ತವ ಬೇರೆಯದೇ ಆಗಿದೆ. ಪ್ರತಿ ವರ್ಷ ಕೆಲವು ತರಕಾರಿಗಳ ಬೆಲೆ ಸಹಿಸಲಸಾಧ್ಯವಾದ ಏರಿಕೆ ಕಂಡು ಅದರ ಪರಿಣಾಮವಾಗಿ ಈಗಾಗಲೇ ಸಂಕಷ್ಟದಲ್ಲಿರುವ ಜನರ ಕೋಟ್ಯಂತರ ರೂಪಾಯಿ ಹಣವು ದೊಡ್ಡ ವರ್ತಕರು ಮತ್ತು ಸಗಟು ವ್ಯಾಪಾರಸ್ಥರಿಗೆ ಹರಿದು ಹೋಗುತ್ತದೆ ಎನ್ನುವುದೇ ಆ ವಾಸ್ತವ ಸಂಗತಿಯಾಗಿದೆ. ದಿನಬಳಕೆಯ ಇತರ ಹಲವು ವಸ್ತುಗಳು ಕೂಡ ಬಹಳ ದುಬಾರಿಯಾಗಿವೆ. ಅವುಗಳಲ್ಲಿ ಖಾದ್ಯ ತೈಲ (ಅಡುಗೆ ಎಣ್ಣೆ) ಒಂದಾಗಿದೆ. ಕಳೆದ ಮೂರು ತಿಂಗಳಲ್ಲಿ ಕಚ್ಚಾ ತಾಳೆ ಎಣ್ಣೆ (ಪಾಮೆಣ್ಣೆ) ದರಗಳು ಶೇಕಡ 45ಕ್ಕಿಂತ ಅಧಿಕವಾಗಿ ಹೆಚ್ಚಾಗಿದ್ದು ಇದಕ್ಕೆ ಭಾಗಶಃ ಕಾರಣವೆಂದು ಹೇಳಲಾಗಿದೆ. ಕಚ್ಚಾ ಪಾಮೆಣ್ಣೆಯನ್ನು ಸಂಸ್ಕರಿತ ಆಹಾರ ಪದಾರ್ಥಗಳಿಗೆ ಮಾತ್ರವಲ್ಲದೆ ಸಾಬೂನು ಮತ್ತು ಸೌಂದರ್ಯ ವರ್ಧಕ (ಕಾಸ್ಮೆಟಿಕ್ಸ್) ಮುಂತಾದವುಗಳ ತಯಾರಿಕೆಯಲ್ಲೂ ಬಳಸಲಾಗುತ್ತದೆ. ಈ ಹೊರೆಯನ್ನು ಕೂಡ ಕಂಪನಿಗಳು ಅಸಹಾಯಕ ಗ್ರಾಹಕರ ಹೆಗಲಿಗೆ ವರ್ಗಾಯಿಸುತ್ತವೆ.

ದೊಡ್ಡ ಕಂಪನಿಗಳ ಲಾಭಕ್ಕೆ ನಾಚಿಕೆಯಿಲ್ಲದೆ ತನ್ನ ನಿಷ್ಠೆಯನ್ನು ತೋರಿಸುತ್ತಿರುವ ಸರಕಾರ, ಕೆಲವು ಅಗತ್ಯ ಔಷಧಿಗಳ ಬೆಲೆಗಳ ಮಿತಿಯನ್ನು ಆಘಾತಕಾರಿ ಎನ್ನುವಂಥ ಶೇಕಡ 50ರಷ್ಟು ಏರಿಕೆ ಮಾಡಿದೆ. ಔಷಧಿ ಬೆಲೆ ನಿಯಂತ್ರಣ ಆದೇಶದ ಮೂಲಕ ಹೀಗೆ ಮಾಡಲಾಗಿದೆ. ಅಸ್ತಮಾ, ಕ್ಷಯ (ಟಿಬಿ), ತಲಸ್ಸೇಮಿಯಾ (ರಕ್ತ ಕಣಗಳ ಕೊರತೆ) ಮುಂತಾದ ರೋಗಗಳ ಚಿಕಿತ್ಸೆಗೆ ಬಳಸುವ ಔಷಧಿಗಳು ಹಾಗೂ ಬ್ಯಾಕ್ಟೀರಿಯಾ ಸೋಂಕುಗಳ ಚಿಕಿತ್ಸೆಗೆ ಅಗತ್ಯವಾದ ಪ್ರಮುಖ ಪ್ರತಿಜನಕಗಳ (ಆ್ಯಂಟಿಬಯಾಟಿಕ್) ಬೆಲೆಗಳ ಮೇಲೆ ಇದರಿಂದ ಪರಿಣಾಮ ಉಂಟಾಗುತ್ತದೆ.

ಸುಲಿಗೆ ತೆರಿಗೆಗಳು

ಈ ನಡುವೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಸರಕಾರ ವಿಧಿಸುವ ಜನರನ್ನು ಸುಲಿಯುವ ಪರೋಕ್ಷ ತೆರಿಗೆ ಹಾವಳಿ ಎಗ್ಗಿಲ್ಲದೆ ಮುಂದುವರಿದಿದೆ. ಈ ವರ್ಷ ಏಪ್ರಿಲ್‌ನಿಂದ ಅಂತಾರಾಷ್ಟ್ರೀಯ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಬೆಲೆಗಳು ಶೇ.18ರಷ್ಟು ಕುಸಿತ ಕಂಡರೂ ಮೋದಿ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಅದೇ ಮಟ್ಟದಲ್ಲಿಯೇ ಮುಂದುವರಿಸಿದೆ.

2022–23ನೇ ಸಾಲಿನಲ್ಲಿ ಕೇಂದ್ರ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಧಿಸುವ ವಿವಿಧ ತೆರಿಗೆಗಳು, ಸೆಸ್‌ಗಳು, ರಾಯಲ್ಟಿಗಳು, ಸುಂಕಗಳಿಂದಾಗಿ ಒಟ್ಟು 3.5 ಲಕ್ಷ ಕೋಟಿ ರೂಪಾಯಿಯಷ್ಟುಆದಾಯವನ್ನುಗಳಿಸಿದೆ. ಮೋದಿ ಸರಕಾರ 2014ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೆ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯೊಂದರಿಂದಲೇ ಆಘಾತಕಾರಿಯಾದ 26.74 ಲಕ್ಷ ರೂಪಾಯಿಯಷ್ಟು ಆದಾಯ ಗಳಿಸಿದೆ. ಈ ಅಸಮರ್ಥನೀಯ ಹೊರೆಯು ಬೆಲೆಗಳ ಮೇಲೆ ಹಲವು ರೀತಿಯ ಪರಿಣಾಮ ಬೀರುತ್ತದೆ. ಸಾಗಾಟ ದರ ಜಾಸ್ತಿಯಾಗಿ ಆಹಾರ ಧಾನ್ಯಗಳು ಮತ್ತು ತರಕಾರಿಗಳಂಥ ಅಗತ್ಯ ವಸ್ತುಗಳ ಬೆಲೆಗಳನ್ನು ಬಾಧಿಸುತ್ತದೆ.

ಆರ್‌ಬಿಐ ಬುದ್ಧಿಗೇಡಿ ಕ್ರಮ

ಹಣದುಬ್ಬರವನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಡೆಸುತ್ತಿರುವ ಪ್ರಯತ್ನಗಳಿಗೆ ಭಾರಿ ಪ್ರಚಾರ ನೀಡಲಾಗುತ್ತಿದೆ. ಆದರೆ ಅದು ಬರೀ ಬುದ್ಧಿಗೇಡಿತನದಂತೆ ಕಾಣಿಸುತ್ತದೆ. 2016ರ ಮೇ ನಂತರದ 101 ತಿಂಗಳಲ್ಲಿ ಗ್ರಾಹಕರ ಬೆಲೆ ಸೂಚ್ಯಂಕ (ಸಿಪಿಐ) ಆರ್‌ಬಿಐನ ಶೇಕಡ 4 ಹಣದುಬ್ಬರ ಟಾರ್ಗೆಟ್‌ಅನ್ನು ಅವಧಿಯ ಶೇ.72ರಷ್ಟು ಮೀರಿದೆ ಹಾಗೂ ಶೇ.28ರಷ್ಟು ಪ್ರಕರಣಗಳಲ್ಲಿ ಶೇ.6 ಗರಿಷ್ಠ ಮಿತಿಯನ್ನು (ಅಪ್ಪರ್ ಥ್ರೆಶ್‌ಹೋಲ್ಡ್) ದಾಟಿದೆ ಎಂಬುದನ್ನು ಅರ್ಥಶಾಸ್ತ್ರಜ್ಞರ ಇತ್ತೀಚಿನ ವಿಶ್ಲೇಷಣೆಯೊಂದು ತೋರಿಸಿದೆ.

ನಿಯಂತ್ರಣದ ಗೀಳು

ಆರ್‌ಬಿಐನ ಹಣದುಬ್ಬರ ನಿಯಂತ್ರಣದ ಈ ಗೀಳು, ಜನರ ಹಿತಾಸಕ್ತಿಗಿಂತ ಬಹುತೇಕವಾಗಿ ಕಾರ್ಪೊರೇಟ್ ಕಲ್ಯಾಣದಿಂದ ಪ್ರೇರೇಪಿತವಾಗಿದೆ. ಅದು ಬ್ಯಾಂಕ್ ಸಾಲದ ದರಗಳು ಮತ್ತು ಇತರ ಆರ್ಥಿಕ ನೀತಿ ಕುತಂತ್ರಗಳಿಗೆ ಸಂಬಂಧವಿರುವುದೇ ಇದಕ್ಕೆ ಕಾರಣ.

ಬೆಲೆಯೇರಿಕೆ ನಿಯಂತ್ರಣ ಮಾಡುವುದಾಗಿ ಪದೇ ಪದೇ ಆಶ್ವಾಸನೆ ನೀಡುತ್ತಿದ್ದರೂ ಈ ವಿಚಾರದಲ್ಲಿ ಸರಕಾರದ ನೀತಿ ಸಂಪೂರ್ಣ ವಿಫಲವಾಗಿದೆ; ಅದು ಯಾವುದೇ ಸುಸಂಬದ್ಧ ಹೆಜ್ಜೆಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದರ ಪರಿಣಾಮ ಇದಾಗಿದೆ. ಸಂಪನ್ಮೂಲ ಕ್ರೋಡೀಕರಣಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವಂಥ ಅತಿರೇಕದ ಧೋರಣೆಗಳನ್ನು ಕೈಬಿಡುವುದರ ಜತೆಯಲ್ಲಿ ಸರಕಾರವು ಮುಕ್ತ ಮಾರುಕಟ್ಟೆಯಲ್ಲಿ ಬೆಲೆಗಳ ಹಾವಳಿಯನ್ನು ಎದುರಿಸಲು ಅಗತ್ಯವಾದ ಕ್ರಮವಾಗಿ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಬಲಪಡಿಸಬೇಕಿತ್ತು. ಕಳ್ಳ ದಾಸ್ತಾನುದಾರರು ಮತ್ತು ಕಾಳಸಂತೆಕೋರರನ್ನು ಹದ್ದುಬಸ್ತಿನಲ್ಲಿಡಲು, ಅದರಲ್ಲೂ ವಿಶೇಷವಾಗಿ ಈರುಳ್ಳಿಯಂಥ ಅಗತ್ಯ ತರಕಾರಿ ಹಾಗೂ ಕಾಳುಗಳಂಥ ಆಹಾರ ಧಾನ್ಯಗಳ ಕಾಳಸಂತೆಕೋರರಿಗೆ ಮೂಗುದಾರ ಹಾಕಲು ಸರಕಾರ ಹಾಲಿ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ವಿಶಾಲ ದೃಷ್ಟಿಯಲ್ಲಿ ನೋಡುವುದಾದರೆ, ಅಗತ್ಯ ಔಷಧಿಗಳ ಸಾರ್ವಜನಿಕ ಕ್ಷೇತ್ರದ ಉತ್ಪಾದನೆಗೆ ಅದು ಉತ್ತೇಜನ ನೀಡಬೇಕು ಹಾಗೂ ತ್ವರಿತಗೊಳಿಸಬೇಕು. ದರಗಳಲ್ಲಿ ತೀವ್ರ ಏರಿಕೆ ಕಂಡಿರುವ ಆರೋಗ್ಯ ಮತ್ತು ಶಿಕ್ಷಣದ ಖಾಸಗೀಕರಣವನ್ನು ನಿಲ್ಲಿಸಬೇಕು. ಖಾದ್ಯ ತೈಲ ಮತ್ತು ಕಾಳುಗಳಂಥ ನಾನಾ ಅಗತ್ಯ ಆಹಾರ ಸಾಮಗ್ರಿಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವತ್ತ ಸರಕಾರ ಮುನ್ನಡೆಯುವುದು ಕೂಡ ಅಗತ್ಯ. ಕೇವಲ ಜುಮ್ಲಾ (ಬೊಗಳೆ ಮಾತುಗಳು) ಮತ್ತು ಚುನಾವಣೆ ವೇಳೆ ಆಕರ್ಷಕ ಆಶ್ವಾಸನೆಗಳನ್ನು ನೀಡುವುದರಿಂದ ಮಾತ್ರ ಬೆಲೆಗಳನ್ನು ಹತೋಟಿಯಲ್ಲಿ ಇಡಲಾಗದು–ಹೆಚ್ಚು ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ.

ಅನು: ವಿಶ್ವ

"ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ನ ಕಾಲ ಈಗ ಮುಗಿದಿದೆ, ಅವನ್ನು ಮುಚ್ಚಬೇಕು"

–80ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾರತದ ನಾಗರಿಕ ಸಮಾಜ ಗುಂಪುಗಳ ಕರೆ

ಕಳೆದ 80 ವರ್ಷಗಳಿಂದ ಕಸಿದುಕೊಳ್ಳುವ ಮತ್ತು ಶೋಷಿಸುವ ವಸಾಹತುಶಾಹಿ ತರ್ಕದಲ್ಲಿ ಹುಟ್ಟಿದ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಹರಡಿರುವ ಅಭಿವೃದ್ಧಿ ಮಾದರಿಯ ಬದಲು, ಸುಸ್ಥಿರತೆ ಮತ್ತು ಸಮಾನತೆಗೆ ಆದ್ಯತೆ ನೀಡುವ ಹೊಸ ಪ್ರಜಾಸತ್ತಾತ್ಮಕ ಮತ್ತು ವಿಕೇಂದ್ರೀಕೃತ ಹಣಕಾಸು ವ್ಯವಸ್ಥೆಯನ್ನು ರಚಿಸಲು ಸುಮಾರು 200 ವ್ಯಕ್ತಿಗಳು ಮತ್ತು ನಾಗರಿಕ ಸಮಾಜದ ಗುಂಪುಗಳು ಕರೆ ನೀಡಿವೆ.

ಬ್ರೆಟ್ಟನ್‌ವುಡ್ ಸಂಸ್ಥೆಗಳೆಂದು ಕರೆಯಲ್ಪಡುವ ಈ ಎರಡು ಸಂಸ್ಥೆಗಳ 80ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಇವರುಗಳು ಒಂದು ಜಂಟಿ ಹೇಳಿಕೆಯಲ್ಲಿ ಈ ಕರೆಯನ್ನು ನೀಡಿದ್ದಾರೆ.

ಹಲವಾರು ಸಾಮಾಜಿಕ ಚಳುವಳಿಗಳು, ಅಭಿಯಾನಗಳು ಮತ್ತು ತಳಮಟ್ಟದಲ್ಲಿ ಕೆಲಸ ಮಾಡುವ ಸಂಸ್ಥೆಗಳನ್ನು ಪ್ರತಿನಿಧಿಸುವ, 198 ಮಂದಿ ಅನುಮೋದಿಸಿರುವ ಈ ಹೇಳಿಕೆಯು ಈ ಎರಡು ಬ್ರೆಟನ್‌ವುಡ್ಸ್ ಸಂಸ್ಥೆಗಳನ್ನು ಮುಚ್ಚಬೇಕು ಮತ್ತು ಅವುಗಳ ಸ್ಥಾನದಲ್ಲಿ ಎಲ್ಲ ಸಮುದಾಯಗಳು ಮತ್ತು ದೇಶಗಳ ಆಕಾಂಕ್ಷೆಗಳನ್ನು ಬಿಂಬಿಸುವ ಪ್ರಜಾಸತ್ತಾತ್ಮಕ ಮತ್ತು ಸಾರ್ವಜನಿಕ ಮನೋಭಾವದ ಸಂಸ್ಥೆಗಳನ್ನು ರಚಿಸಬೇಕು ಎಂದು ಹೇಳಿದೆ.

"ಬ್ರೆಟ್ಟನ್‌ವುಡ್ ಸಂಸ್ಥೆಗಳಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್ ತಮ್ಮ ಅಸ್ತಿತ್ವ ಮತ್ತು ಕಾರ್ಯನಿರ್ವಹಣೆಯ 80 ವರ್ಷಗಳನ್ನು ಪೂರೈಸಿವೆ. ವಸಾಹತುಶಾಹಿ ವಿಸ್ತರಣೆ, ಸಂಪನ್ಮೂಲಗಳನ್ನು ಕಸಿದುಕೊಳ್ಳುವುದು, ಸಂಪತ್ತಿನ ಕೇಂದ್ರೀಕರಣ, ಹವಾಮಾನ ಬದಲಾವಣೆ ಮತ್ತು ಆಳವಾಗುತ್ತಿರುವ ಅಸಮಾನತೆಯ ಪರಿಣಾಮಗಳ ಭಾರವನ್ನು ಸಹಿಸಬೇಕಾಗಿ ಬಂದಿರುವ ಜಾಗತಿಕ ದಕ್ಷಿಣದ ಜನರಾಗಿ ನಾವು ಈ ಸಂಸ್ಥೆಗಳನ್ನು ಮುಚ್ಚಿ ಬಿಡಬೇಕು ಮತ್ತು ಜನರನ್ನೂ, ನಮ್ಮ ಪ್ರಥ್ವಿಯನ್ನೂ ರಕ್ಷಿಸುವ ಒಂದು ಹೊಸ ಜಾಗತಿಕ ಪ್ರಜಾಸತ್ತಾತ್ಮಕ ಮತ್ತು ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಗೆ ದಾರಿ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇವೆ" ಎಂದು ಈ ಹೇಳಿಕೆ ಆಗ್ರಹಿಸಿದೆ.

1944ರಲ್ಲಿ ಎರಡನೇ ಮಹಾಯುದ್ಧದ ಕೊನೆಯಲ್ಲಿ ಯುದ್ಧ–ಹಾನಿಗೊಳಗಾದ ಅರ್ಥವ್ಯವಸ್ಥೆಗಳನ್ನು ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಹಕಾರದ ಮೂಲಕ ಹೊಸದಾಗಿ ವಸಾಹತುಶಾಹಿಯಿಂದ ವಿಮೋಚನೆಗೊಂಡ ದೇಶಗಳನ್ನು ಮರುನಿರ್ಮಾಣ ಮಾಡಲು ಎಂದು ಹೇಳಿಕೊಂಡು ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಅನ್ನು ರಚಿಸಲಾಯಿತು. ಆದರೆ ವಾಸ್ತವವಾಗಿ, ಅವು ಕಸಿದುಕೊಳ್ಳುವುದು ಮತ್ತು ಶೋಷಿಸುವ ವಸಾಹತುಶಾಹಿ ತರ್ಕದಲ್ಲಿ ಬೇರೂರಿರುವ ಅಭಿವೃದ್ಧಿ ಮತ್ತು ಹಣಕಾಸೀಕರಣದ ಮಾದರಿಯನ್ನು ಜಾಗತೀಕರಿಸಿವೆ. ಮತ್ತು ಜಾಗತಿಕ ದಕ್ಷಿಣದಿಂದ ಜಾಗತಿಕ ಉತ್ತರಕ್ಕೆ ಸಂಪತ್ತನ್ನು ನಿರಂತರವಾಗಿ ಹೊರಗೆಳೆವ ಮತ್ತು ವರ್ಗಾವಣೆಯ ವಾಹಕಗಳಾಗಿವೆ.

ವಿಶ್ವಬ್ಯಾಂಕ್ ಮತ್ತು ಐಎಂಎಫ್ ವಿಧಿಸಿರುವ ಸಂರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮ (ಎಸ್‌ಎಪಿ)ಗಳು ಮತ್ತು 'ಮಿತವ್ಯಯ'ದ ಕ್ರಮಗಳು ನೀರು, ವಿದ್ಯುತ್, ಶಿಕ್ಷಣ, ಆರೋಗ್ಯ ಮತ್ತು ಸಾರಿಗೆ ಸೇರಿದಂತೆ ಅಗತ್ಯ ಸಾರ್ವಜನಿಕ ಸೇವೆಗಳ ಖಾಸಗೀಕರಣ, ಸಾಮಾಜಿಕ ರಕ್ಷಣೆ ಮತ್ತು ಕಲ್ಯಾಣ ಕಾರ್ಯಕ್ರಮಗಳ ಮೇಲಿನ ವೆಚ್ಚದಲ್ಲಿ ತೀವ್ರ ಕಡಿತ, ಶ್ರಮಮಾರುಕಟ್ಟೆಯ ಮೇಲಿನ ನಿಯಂತ್ರಣಗಳನ್ನು ತೆಗೆಯುವುದು, ತೀವ್ರವಾದ ವೇತನ ಕಡಿತ ಮತ್ತು ಕಾಂಟ್ರಾಕ್ಟೀಕರಣ ಮತ್ತು ಹಸಿವು ಹಾಗೂ ಆಹಾರ ಮತ್ತು ಪೌಷ್ಟಿಕಾಂಶದ ಅಭದ್ರತೆಗೆ ಕಾರಣವಾಗುವ ಆಹಾರ ಮತ್ತು ಕೃಷಿ ಪುಟ 15 ಕ್ಕೆ



ಕನ್ನಡ ರಾಜ್ಯೋತ್ಸವವಲ್ಲ–ಕರ್ನಾಟಕ ರಾಜ್ಯೋತ್ಸವ ಕರ್ನಾಟಕದ ಸಮಗ್ರ ಬೆಳವಣಿಗೆಯ ಉತ್ಸವ

ಜಿ.ಎನ್. ನಾಗರಾಜ್

ರಾಜ್ಯೋತ್ಸವದ ವಿಶೇಷ

ಸಾವಿರಾರು ವರ್ಷಗಳ ರಾಜ ಚಕ್ರವರ್ತಿಗಳ ಆಡಳಿತದಲ್ಲಿ ಎಂದೂ ಭಾಷಾವಾರು ಆಡಳಿತ ಅಥವಾ ಪ್ರಾಂತ್ಯ, ರಾಜ್ಯಗಳ ಪ್ರಶ್ನೆಯೇ ಎದ್ದಿರಲಿಲ್ಲ.

ಭಾಷಾವಾರು ಪ್ರದೇಶಗಳು ಒಂದೇ ಆಡಳಿತಕ್ಕೆ ಒಳಪಡಬೇಕು ಎಂಬುದು ಮೊದಲ ಬಾರಿಗೆ ವಿಶ್ವದಲ್ಲಿ ಎದ್ದಿದ್ದು ಸರಕು (ಕಮಾಡಿಟಿ) ಆಧಾರಿತ ಮಾರುಕಟ್ಟೆ ಪ್ರಧಾನ ಆರ್ಥಿಕ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವವೆಂಬ ರಾಜಕೀಯ ಆಡಳಿತ ವಿಧಾನದ ಯುಗದಲ್ಲಿ. ಈ ಎರಡರ ಅತಿ ಮುಖ್ಯ ಅವಶ್ಯಕತೆಯಾಗಿ. ಬಂಡವಾಳಶಾಹಿ ಯುಗದ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿಸಿಕೊಳ್ಳಲು ಜಾಹೀರಾತು ಮಾಡಿ ಜನರನ್ನು ಆಕರ್ಷಿಸಬೇಕಾದರೆ ಭಾಷೆ ಮುಖ್ಯ ಅಗತ್ಯವಾದ್ದರಿಂದ, ಆಯಾ ಭಾಷೆಯ ಬಂಡವಾಳಶಾಹಿಗಳು ತಂತಮ್ಮ ಭಾಷಾ ಪ್ರದೇಶಗಳಲ್ಲಿ ಮಾರುಕಟ್ಟೆ ಸೃಷ್ಟಿಸಿಕೊಂಡರು. ಒಂದೇ ಭಾಷೆ ಮಾತನಾಡುವ ಪ್ರದೇಶಗಳು ಬೇರೆ ಬೇರೆ ಆಡಳಿತದಲ್ಲಿದ್ದರೆ ಆಗ ಆ ಆಡಳಿತಗಳ ಗಡಿ ದಾಟಬೇಕಾದಾಗೆಲ್ಲ ಅಡ್ಡಿಗಳು, ಸುಂಕ ತೆರಬೇಕಾದ ಸ್ಥಿತಿ ಇತ್ತು. ಹಿಂದೆ ಮೈಸೂರು ಸಂಸ್ಥಾನದಲ್ಲಿನ ಸರಕುಗಳು ತುಂಗಭದ್ರ ನದಿಯ ಗಡಿ ದಾಟಿ ರಾಣಿಬೆನ್ನೂರು, ಧಾರವಾಡ, ಬೆಳಗಾಂ ಕಡೆ ಸಾಗಬೇಕಾದರೆ ಹಾಗೇಯೆ ಹುಬ್ಬಳ್ಳಿ, ರಾಯಚೂರು ಹತ್ತಿ ಮತ್ತಿತರ ವಸ್ತುಗಳು ಮೈಸೂರು ಸಂಸ್ಥಾನದ ಗಡಿ ದಾಟಿ ದಾವಣಗೆರೆ ಹತ್ತಿ ಗಿರಣಿಗಳಿಗೆ, ಬೆಂಗಳೂರಿಗೆ ಬರಬೇಕಾದರೆ ಗಡಿಯ ತಪಾಸಣೆ, ಸುಂಕಗಳು. ಹೀಗೆ ಅಂದಿನ ರಾಜ್ಯದ, ದೇಶದ ಎಲ್ಲ ಪ್ರದೇಶಗಳಿಗೂ ಅನ್ವಯಿಸಬಹುದು. ಹಾಗೆಯೇ ತಮ್ಮ ಭಾಷೆಯ ಮಾರುಕಟ್ಟೆಯನ್ನು ಬೇರೆ ಭಾಷೆಯ ಬಂಡವಾಳಿಗರು ಆಕ್ರಮಿಸಿಕೊಳ್ಳುವುದರ ವಿರುದ್ಧ ಆ ರಾಜ್ಯಗಳ ಉತ್ಪನ್ನಗಳ ಪ್ರವೇಶದ ವಿರುದ್ಧ ಅಡ್ಡಿ ಉಂಟು ಮಾಡುವ ಹಾಗೂ ತೆರಿಗೆ ಹಾಕಿ ಅವುಗಳ ಬೆಲೆ ಏರಿಸುವ ಮೂಲಕ ರಕ್ಷಿಸಿಕೊಳ್ಳಲು ಕೂಡಾ ಭಾಷಾವಾರು ಪ್ರದೇಶಗಳು ಅವಶ್ಯವಾದವು.

ಪ್ರಜಾಪ್ರಭುತ್ವದಲ್ಲಿ ವಿಚಾರ, ಮಾಹಿತಿಗಳನ್ನು ಜನರ ನಡುವೆ ಪಸರಿಸಲು ಆಯಾ ಭಾಷೆಯ ಪತ್ರಿಕೆ, ಪುಸ್ತಕಗಳು ಹಾಗೂ ಜನರನ್ನು ಸೆಳೆದು ಆಡಳಿತ ಪಕ್ಷವಾಗಲು ಕೂಡಾ ಭಾಷೆ ಮುಖ್ಯ.

ಹೀಗೆ, ಯುರೋಪಿನಲ್ಲಿ ಭಾಷಾವಾರು ದೇಶಗಳು–ಇಂಗ್ಲಿಷ್ ಭಾಷೆಯ ಇಂಗ್ಲೆಂಡ್, ಫ್ರೆಂಚ್ ಭಾಷೆಯ ಫ್ರಾನ್ಸ್, ಜರ್ಮನ್ ಭಾಷೆಯ ಜರ್ಮನಿ ಇತ್ಯಾದಿ ಅಸ್ತಿತ್ವಕ್ಕೆ ಬಂದವು.

ಭಾರತದಲ್ಲಿಯೂ ಬ್ರಿಟಿಷರ ಆಡಳಿತದ ಒಳಗೆ ಬಂಡವಾಳಶಾಹಿಯ ಬೆಳವಣಿಗೆ ಇಂತಹುದೇ ಪ್ರಕ್ರಿಯೆಗೆ ನಾಂದಿ ಹಾಡಿತು. ದೇಶದ ಮೊತ್ತ ಮೊದಲ ಬಂಡವಾಳಶಾಹಿ ಬೆಳವಣಿಗೆಯ ಕೇಂದ್ರ ಕಲಕತ್ತಾ ಮತ್ತು ಅದರ ಹಿನ್ನಾಡಾಗಿದ್ದ ಈಗಿನ ಬಾಂಗ್ಲಾದೇಶದ ಪ್ರದೇಶವನ್ನು ವಿಭಜನೆ ಮಾಡಲು ಹೊರಟಿದ್ದರಿಂದ. ಆಗ ವಸಾಹತುಶಾಹಿ ಆಡಳಿತದಲ್ಲಿ ಎಲ್ಲ ಭಾಷಾ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿಲ್ಲದ್ದರಿಂದ, ಬ್ರಿಟಿಷ್ ಬಂಡವಾಳಶಾಹಿಯ ವಿರುದ್ಧ ದೇಶೀಯ ಬಂಡವಾಳಶಾಹಿಯ ಬೆಳವಣಿಗೆಯ ಅಗತ್ಯವಾದ "ಇಲ್ಲಿನ ಉತ್ಪಾದನೆಗಳನ್ನು ಕೊಳ್ಳಿ, ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ" ಎಂಬ ಸ್ವದೇಶಿ ಹಾಗೂ ಸ್ವರಾಜ್ ಎಂಬ ಘೋಷಣೆಗಳ ಮೇಲೆ. ಯುರೋಪಿನ ಸರಕು ಮಾರುಕಟ್ಟೆ ಮತ್ತು ಪ್ರಜಾಪ್ರಭುತ್ವ ಎಂಬ ಘೋಷಣೆಗಳಿಗೂ ಈ ಘೋಷಣೆಗಳಿಗೂ ಇರುವ ಸಾಮ್ಯತೆಯನ್ನು ಗಮನಿಸಿ.

ಆದರೆ ನಮ್ಮ ದೇಶದ ರಾಷ್ಟ್ರೀಯತೆಗೆ ಎರಡು ಪದರುಗಳು. ಒಂದು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಒಗ್ಗಟ್ಟಿನ ಆಯಾಮ. ಮತ್ತೊಂದು ಸ್ವಾತಂತ್ರ್ಯ ಚಳುವಳಿಯ ವಿಚಾರಗಳನ್ನು ಜನರಿಗೆ ತಲುಪಿಸಲು ಅದರೊಟ್ಟಿಗೆ ಆರಂಭವಾದ ಭಾಷಾವಾರು ಪ್ರಾಂತ್ಯಗಳ ವಿಚಾರಗಳು.

ಕರ್ನಾಟಕ ಏಕೀಕರಣದ ಬಗ್ಗೆ ಈ ಕೆಲವು ಅಂಶಗಳನ್ನು ಗಮನಿಸೋಣ.

ಭಾಷಾವಾರು ರಾಜ್ಯ ರಚನೆ ಎಂಬುದು ಕರ್ನಾಟಕದ, ಕನ್ನಡದ ಹೋರಾಟವಲ್ಲ ಇಡೀ ದೇಶದ ಎಲ್ಲ ಭಾಷೆಗಳ ಜನರ ಹೋರಾಟ.

* ಇತಿಹಾಸದಲ್ಲಿ ಹಿಂದೆಂದೂ ಇಲ್ಲದಂತೆ ಇಡೀ ದೇಶದ ಭೂಪಟವನ್ನು ಬದಲಾಯಿಸಿಬಿಟ್ಟ ಹೋರಾಟ. ಈ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ದೇಶದ ಎಲ್ಲ ಪ್ರಾಂತ್ಯಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿತು. ಕರ್ನಾಟಕ ಏಕೀಕರಣ, ಐಕ್ಯ ಕೇರಳ, ವಿಶಾಲಾಂಧ್ರ, ಸಂಯುಕ್ತ ಮಹಾರಾಷ್ಟ್ರ, ಪಂಜಾಬಿ ಸುಬಾ, ಕಾಶ್ಮೀರಿಯತ್ ಹೋರಾಟಗಳಲ್ಲಿ.
* 20ನೆಯ ಶತಮಾನಕ್ಕೆ ಮೊದಲು ದೇಶದ ಬಹುತೇಕ ಯಾವ ಭಾಷಾ ಜನಸಮುದಾಯವೂ ಒಂದು ಆಡಳಿತದಲ್ಲಿ ಇರಲಿಲ್ಲ. ಆರು ನೂರಕ್ಕಿಂತ ಹೆಚ್ಚು ಸಾಮ್ರಾಜ್ಯ, ಪಾಳೆಯಪಟ್ಟುಗಳಲ್ಲಿ ಹರಿದು ಹಂಚಿ ಹೋಗಿತ್ತು.
* 1905ರ ವಂಗ ಭಂಗ ಚಳುವಳಿ ಅಲ್ಲಿ ಮತ್ತು ಇಡೀ ದೇಶದಲ್ಲಿ ಒಂದು ಭಾಷೆ ಮಾತನಾಡುವ ಜನರ ಐಕ್ಯತೆಯ ಭಾವನೆ ಬಿತ್ತಿತು. ಕರ್ನಾಟಕ ಏಕೀಕರಣ ಚಳುವಳಿ ಆಗಲೇ ಆರಂಭ. ಮುಂಬಯಿ, ಪೂನಾಗಳ ಸ್ವದೇಶಿ ಚಳುವಳಿಯ ಪ್ರಭಾವದಿಂದ. ಆಲೂರು ವೆಂಕಟರಾಯರ ಆಗಿನ ಮುಂದಾಳು. ಅವರು ಏಕೀಕರಣದ ಪ್ರಶ್ನೆ ಮಾತ್ರವಲ್ಲ, ಕರ್ನಾಟಕದಲ್ಲಿ ಅಂದು ಪೂರ್ಣವಾಗಿ ಬ್ರಿಟಿಷ್ ಉತ್ಪಾದನೆಯಾಗಿದ್ದ ಕಡ್ಡಿಪೆಟ್ಟಿಗೆ ಮೊದಲಾದ ಕೈಗಾರಿಕೆಗಳನ್ನೂ ಆರಂಭಿಸಲು ಪ್ರಯತ್ನಿಸಿದರು.
* ಮತ್ತೊಂದು ಮುಖ್ಯ ಅಂಶವೆಂದರೆ ಕನ್ನಡ ಪ್ರಕಾಶಕರ ಸಮಾವೇಶದಲ್ಲಿ ಮೊತ್ತ ಮೊದಲು ಕರ್ನಾಟಕ ಏಕೀಕರಣದ ಘೋಷಣೆ ಎದ್ದಿದ್ದು. (ಪುಸ್ತಕಗಳಿಗೆ ವಿಸ್ತಾರ ಮಾರುಕಟ್ಟೆಯ ಪ್ರಶ್ನೆ)
* 1920ರ ಅಸಹಕಾರ ಚಳುವಳಿಯ ನಂತರ ಜನರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸೆಳೆಯಲು ದೇಶ ಭಾಷೆಗಳ ಉಪಯೋಗ ಅಗತ್ಯವಾಯಿತು. 1920ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾ ಆಧಾರದ ಮೇಲೆ ಕಾಂಗ್ರೆಸ್ ಸಮಿತಿಗಳನ್ನು ರಚಿಸಿತು. ಭಾಷಾವಾರು ಪ್ರಾಂತ ರಚನೆಗೆ ನಾಂದಿ ಹಾಡಿತು. 1924ರ ಬೆಳಗಾಂ ಮಹಾಧಿವೇಶನದಲ್ಲಿ ಮತ್ತಷ್ಟು ಉತ್ಸಾಹದಿಂದ.
* ಅಲ್ಲಿಂದ ಮುಖ್ಯವಾಗಿ ಸಾಹಿತಿಗಳು ಬಿಎಂಶ್ರೀ ನೇತೃತ್ವದಲ್ಲಿ ಈ ಹೋರಾಟವನ್ನು ಬೆಳೆಸಿದರು. ಆದರ ಫಲವಾಗಿ ಭಾಷೆ ಅದರಲ್ಲೂ ಕನ್ನಡ ಭಾಷೆಯ ಬಗ್ಗೆ ಭಾವನಾತ್ಮಕ ಪ್ರಶ್ನೆಗಳೇ ಹೆಚ್ಚಾಗಿ ಮುಂಚೂಣಿಗೆ ಬಂದವು.
* ಸ್ವಾತಂತ್ರ್ಯದ ನಂತರ ಭಾಷಾವಾರು ರಾಜ್ಯಗಳನ್ನು ರಚಿಸಲು ಇಡೀ ದೇಶ ತಮ್ಮದೇ ಮಾರುಕಟ್ಟೆಯಾಗಬೇಕೆಂದು ಬಯಸಿದ ಟಾಟಾ, ಬಿರ್ಲಾ, ಕಿರ್ಲೋಸ್ಕರ್ ಮೊದಲಾದವರು ದೇಶದ ದೊಡ್ಡ ಕೈಗಾರಿಕೋದ್ಯಮಿಗಳು ವಿರೋಧ ವ್ಯಕ್ತಪಡಿಸಿದರು.
* ಅಂದಿನ ಪಾಳೆಯಗಾರಿ ವ್ಯವಸ್ಥೆಯ ರಾಜ ಮಹಾರಾಜರೂ ತಮ್ಮ ಅಧಿಕಾರ ಹೋಗುತ್ತದೆಂದು ವಿರೋಧವಾಗಿದ್ದರು.
* ಕಾಂಗ್ರೆಸ್ ಕೂಡ ಕೈಗಾರಿಕೋದ್ಯಮಿಗಳ ತಾಳಕ್ಕೆ ಕುಣಿದು ವಿರೋಧ–ಜೆವಿಪಿ ವರದಿ ಎಂದು ಹೆಸರಾಂತ ನೆಹರೂ–ಪಟೇಲ್–ಪಿ.ಸೀತಾರಾಮಯ್ಯ ಸಮಿತಿಯಿಂದ.
* ಆಗ 1947–1956ರ ನಡುವೆ ಕರ್ನಾಟಕ ಏಕೀಕರಣ, ಐಕ್ಯ ಕೇರಳ, ವಿಶಾಲಾಂಧ್ರ ತೀವ್ರಗೊಂಡವು. ನಂತರ ಬೇರೆ ಬೇರೆ ಸಮಯಗಳಲ್ಲಿ ಪಂಜಾಬಿ ಸೂಬಾ, ಸಂಯುಕ್ತ ಮಹಾರಾಷ್ಟ್ರ, ಮೊದಲಾದ ಚಳುವಳಿಗಳು ಬಹಳ ತೀವ್ರವಾದವು.
* ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷವೂ ಮುಖ್ಯ ಪಾತ್ರ ವಹಿಸಿದ ಕರ್ನಾಟಕ ಏಕೀಕರಣ ಪರಿಷತ್ ಚಳುವಳಿಯ ನೇತೃತ್ವ ವಹಿಸಿತು. ಬಿ.ವಿ.ಕಕ್ಕಿಲ್ಲಾಯರು ಅದರ ಸಂಚಾಲಕರಲ್ಲಿ ಒಬ್ಬರಾಗಿದ್ದರು. ಎನ್.ಎಲ್. ಉಪಾಧ್ಯಾಯರು ಮುಖ್ಯ ಪಾತ್ರ ವಹಿಸಿದರು. ಎನ್.ಕೆ.ಉಪಾಧ್ಯಾಯರು, ಮುಧೋಳರು ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿಣಿ ಸಭೆಗೇ ಸಾವಿರಾರು ಕಾರ್ಮಿಕರು, ಇತರ ಜನರೊಡನೆ ನುಗ್ಗಿ ಒತ್ತಾಯ ಮಾಡಿದರು.
* ಆಂಧ್ರದಲ್ಲಿ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸ ಮಾಡಿ ಸಾವು. ಚಳುವಳಿಗಳು ತಾರಕಕ್ಕೇರಿದವು.
* ನಂತರ 1953ರಲ್ಲಿ ಭಾಷಾವಾರು ಪ್ರಾಂತ್ಯ ಪುನರ್ರಚನೆ ಆಯೋಗ ರಚನೆ. ಫಜಲ್ ಆಲಿ ಅಧ್ಯಕ್ಷ. ಅದರ ವರದಿ 1956ರಲ್ಲಿ ನೀಡಿತು.
* ಕರ್ನಾಟಕ ಏಕೀಕರಣಕ್ಕೆ ರಾಜ್ಯದೊಳಗಡೆಯೂ ಕೊಡಗು, ಹಳೇ ಮೈಸೂರು ಸಂಸ್ಥಾನದ ಪ್ರದೇಶಗಳಲ್ಲಿ ಭೂಮಾಲಕರ ವಿರೋಧವಿತ್ತು.
* ಒಕ್ಕಲಿಗ ಭೂಮಾಲಕರ ವಿರೋಧದ ಕಾರಣ ಮುಖ್ಯ ಮಂತ್ರಿ ಸ್ಥಾನ ಕಳೆದುಕೊಳ್ಳುವ ಸಂಭವವನ್ನು ಲೆಕ್ಕಿಸದೆ ಕೆಂಗಲ್ ಹನುಮಂತಯ್ಯನವರು ಏಕೀಕರಣ ನಿರ್ಣಯವನ್ನು ಮೈಸೂರು ಸಂಸ್ಥಾನದ ವಿಧಾನ ಸಭೆ ಅಂಗೀಕರಿಸಲು ಕಾರಣರಾದರು. (ಅಂದಿನಿಂದ 13 ವರ್ಷಗಳ ಕಾಲ ಲಿಂಗಾಯತ ಭೂಮಾಲಕರ ನಾಯಕತ್ವ)
* ಆದರೆ ಮುಖ್ಯ ವಿಷಯವೆಂದರೆ ಇಡೀ ರಾಜ್ಯದ ಅಭಿವೃದ್ಧಿ, ರಾಜ್ಯಗಳ ಅಧಿಕಾರದ ಪ್ರಶ್ನೆಯಾಗಿ–ಆರ್ಥಿಕ, ರಾಜಕೀಯ, ಕಾನೂನು, ಸಾಂಸ್ಕೃತಿಕ ಸ್ವಾಯತ್ತತೆಯ ಬಹು ಮುಖ್ಯ ಆಯಾಮಗಳನ್ನು ಒಳಗೊಳ್ಳಲಿಲ್ಲ. ಕೇರಳದಲ್ಲಿ ಇ.ಎಂ.ಎಸ್. ನಂಬೂದರಿಪಾದ್‌ರವರು ಆರಂಭದಲ್ಲೇ ಈ ವಿಚಾರಗಳೆಲ್ಲದರ ಸಮಗ್ರ ರೂಪವಾಗಿ ಐಕ್ಯ ಕೇರಳದ ಸಿದ್ಧಾಂತವನ್ನು ರೂಪಿಸಿದರು. ಕೇರಳ ನಿರ್ಮಾಣವಾದ ಕೂಡಲೇ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿ ರಾಜ್ಯಗಳ ಸ್ವಾಯತ್ತತೆ, ಕೇಂದ್ರ ರಾಜ್ಯ ಸಂಬಂಧಗಳ ಪ್ರಶ್ನೆಯನ್ನು ಎತ್ತಿದರು. ಅಲ್ಲಿಯ ಕಮ್ಯುನಿಸ್ಟ್ ಪಕ್ಷ, ಸಿಪಿಎಂ, ಎಲ್‌ಡಿಎಫ್ ಈ ಪ್ರಶ್ನೆಗಳನ್ನು ನಿರಂತರವಾಗಿ ಲೋಕಸಭೆ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ಯೋಜನಾ ಆಯೋಗ ಇತ್ಯಾದಿಗಳ ಮುಂದೆ ಎತ್ತುತ್ತಿವೆ. ಹೋರಾಟ ಮಾಡುತ್ತಿವೆ.

ಕೇರಳಕ್ಕೂ ಇಂದು ರಾಜ್ಯೋತ್ಸವ. ಅದನ್ನು ಅವರು ಕೇರಳ ರಾಜ್ಯೋತ್ಸವ ಎಂದು ಆಚರಿಸುತ್ತಾರೆ. ಮಲಯಾಳಂ ರಾಜ್ಯೋತ್ಸವ ಎಂದಲ್ಲ. ಒಂದು ವಾರ ಕಾಲ ರಾಜಧಾನಿ ಹಾಗೂ ವಿವಿಧ ನಗರಗಳಲ್ಲಿ ರಾಜ್ಯದ ಅಭಿವೃದ್ಧಿ, ಅಧಿಕಾರದ ಪ್ರಶ್ನೆಗಳ ಬಗ್ಗೆ ವಿಚಾರ ಸಂಕಿರಣ ಹಾಗೂ ಚಿತ್ರೋತ್ಸವ, ಚಿತ್ರ ಕಲಾ, ರಂಗಭೂಮಿ ಉತ್ಸವ, ಸಂಗೀತ ಉತ್ಸವಗಳ ಜೊತೆಗೆ ಸಾಹಿತ್ಯದ ಉತ್ಸವವಾಗಿ ನಡೆಸಲಾಗುತ್ತದೆ.

ತಮಿಳುನಾಡಿನಲ್ಲಿಯೂ ಭಾಷೆಯ ಪ್ರಶ್ನೆ ಎಂದರೆ ಸಾಹಿತ್ಯದ ಪ್ರಕಟಣೆ, ಪ್ರಸಾರ, ಇಂಗ್ಲಿಷ್ ಮೊದಲಾದ ವಿಶ್ವ ಭಾಷೆಗಳಿಗೆ ಅನುವಾದ ಇವುಗಳ ಜೊತೆಗೆ ಅಧಿಕಾರ ವಿಕೇಂದ್ರೀಕರಣ ಪ್ರಶ್ನೆಯನ್ನು ಒಳಗೊಂಡಿದೆ.

ಆದರೆ ಕರ್ನಾಟಕದಲ್ಲಿ ಆರಂಭದಿಂದ ಇಲ್ಲಿಯವರೆಗೆ ಸಮಗ್ರ ಕರ್ನಾಟಕದ ಬೆಳವಣಿಗೆಯ ಪ್ರಶ್ನೆಯಾಗಿಲ್ಲ.

ಇದೆಲ್ಲದರ ಫಲ ಭಾಷೆಯ, ಸಾಹಿತ್ಯದ ಬೆಳವಣಿಗೆಯೂ ಆಗಿಲ್ಲ ಎಂಬುದನ್ನು ಗಮನಿಸಬೇಕು. ದೇಶದಲ್ಲೇ ಮಲಯಾಳಂ, ತಮಿಳು ಸಾಹಿತ್ಯ ಹಲವು ಹತ್ತು ಸಾವಿರ ಸಂಖ್ಯೆಯಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುತ್ತದೆ. ಕನ್ನಡದ ಚಿರಸ್ಮರಣೆ, ವಿಮೋಚನೆ, ಮೃತ್ಯಂಜಯ, ಕಾಡು, ಸಂಸ್ಕಾರ ಮೊದಲಾದ ಕಾದಂಬರಿಗಳು ಕೇರಳದಲ್ಲಿ ಹಲವು ಹತ್ತು ಸಾವಿರ ಸಂಖ್ಯೆಯಲ್ಲಿ ಮಾರಾಟವಾಗುತ್ತದೆ.

ಆದರೆ ಕರ್ನಾಟಕದಲ್ಲಿ ಇಂದಿಗೂ ಸಾಹಿತ್ಯ ಕೃತಿಗಳು ಕೇವಲ ಸಾವಿರ ಪ್ರತಿಗಳು ಮಾರಾಟವಾಗಬೇಕಾದರೆ ಹಲವು ವರ್ಷಗಳಾಗುತ್ತದೆ. ಕೆಲವೊಮ್ಮೆ ಕೇವಲ ಐನೂರು ಪ್ರತಿಗಳು ಮಾತ್ರ ಮುದ್ರಿತವಾಗುತ್ತವೆ. ಕೇವಲ ಭಾಷೆಯ ಬಗೆಗೆ ಭಾವೋದ್ರೇಕದ ಮೇಲೆ, ಅದರಲ್ಲೂ ಇತರ ಭಾಷೆಗಳನ್ನು ಮಾತನಾಡುವವರ ಮೇಲೆ ದರ್ಪ ತೋರಿಸುವದಕ್ಕೇ ಒತ್ತು ನೀಡುವುದರ ಮೇಲೆ ಒತ್ತು ನೀಡಿದ್ದರ ಫಲ ಇದು ಎಂದು ವಿಷಾದದಿಂದ ಹೇಳಬೇಕಾಗಿದೆ.

ಪುಟ 10 ಕ್ಕೆ

ರಾಜ್ಯೋತ್ಸವದ ವಿಶೇಷ

ಗಣರಾಜ್ಯ ವ್ಯವಸ್ಥೆ: ರಾಜ್ಯಗಳ ಹಕ್ಕುಗಳ ಶಿಥಿಲಾವಸ್ಥೆ

ಪ್ರೊ. ಎಂ.ಚಂದ್ರ ಪೂಜಾರಿ

ಭಾರತದ ಸಂವಿಧಾನದಲ್ಲಿ (ಒಕ್ಕೂಟ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸ್ಥಾನ, ಹಕ್ಕು, ಅವಕಾಶಗಳ ಬಗ್ಗೆ ಸ್ಪಷ್ಟ ನಿರ್ದೇಶನ, ಮಾರ್ಗ ಸೂಚಿಗಳಿವೆ. ಆದರೆ ವರ್ತಮಾನದಲ್ಲಿನ ರಾಜ್ಯಗಳ ಹಕ್ಕು, ಅಧಿಕಾರಗಳನ್ನು ಮೊಟಕುಗೊಳಸುವ ಪ್ರಯತ್ನಗಳು, ಅದರ ಅಪಾಯದ ಬಗ್ಗೆ ಲೇಖಕರು ಇಲ್ಲಿ ವಿವರಿಸಿದ್ದಾರೆ. ಫೆಡರಲಿಸಂ ಉಳಿದು ಬೆಳೆಯಬೇಕಾದ ಅವಶ್ಯಕತೆ ಬಗ್ಗೆ.



ನಮ್ಮ ಗಣರಾಜ್ಯ ವ್ಯವಸ್ಥೆಯನ್ನು ಅಲುಗಾಡಿಸುವ ಇತ್ತೀಚಿನ ಕೆಲವು ಬೆಳವಣಿಗೆಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ. ಮುಖ್ಯ ವಿಷಯಕ್ಕೆ ಬರುವ ಮುನ್ನ ನಾವು ಕಟ್ಟಿಕೊಂಡಿರುವ ಗಣರಾಜ್ಯ ವ್ಯವಸ್ಥೆಯ ಗರ್ಭದಲ್ಲೇ ಸೇರಿರುವ ಕೆಲವು ನ್ಯೂನತೆಗಳನ್ನು ನಿಮ್ಮ ಗಮನಕ್ಕೆ ತರಬೇಕಿದೆ. ನಮ್ಮದು ರಾಜ್ಯಗಳು ಸೇರಿ ದೇಶ ಆಗಿರುವುದಲ್ಲ; ದೇಶವನ್ನು ಮೊದಲು ಕಟ್ಟಿಕೊಂಡು ನಂತರ ರಾಜ್ಯಗಳನ್ನು ಕಟ್ಟಿಕೊಳ್ಳಲಾಗಿದೆ. ಹಾಗಾಗಿ ಯುನೈಟೆಡ್ ಸ್ಟೇಟ್ಸ್ ಆಫ್ ಆಮೇರಿಕಾ ಇದ್ದಂತೆ ನಮ್ಮದು ಯುನೈಟೆಡ್ ಸ್ಟೇಟ್ಸ್ ಆಫ್ ಇಂಡಿಯಾ ಅಲ್ಲ. ಕೆಲವೊಂದು ಚಾರಿತ್ರಿಕ ಕಾರಣಗಳಿಂದ ಇಂತಹ (ಬಲವಾದ ಕೇಂದ್ರ ಮತ್ತು ಬಲಹೀನ ರಾಜ್ಯಗಳು) ಗಣರಾಜ್ಯ ವ್ಯವಸ್ಥೆ ರೂಪುಗೊಂಡಿದೆ. ವಸಾಹತು ಸರಕಾರ ಇಲ್ಲಿಂದ ಹೊರಹೋಗಿ ನಾವು ಸ್ವತಂತ್ರವಾಗುವ ಸಂದರ್ಭದಲ್ಲಿ ರಾಜರುಗಳಿದ್ದರು, ಸಾಮಂತರಿದ್ದರು, ಪ್ರಸಿಡೆನ್ಸಿಗಳಿದ್ದವು. ಇವರನ್ನು ಗಣರಾಜ್ಯ ವ್ಯವಸ್ಥೆಯೊಳಗೆ ತರುವುದೇ ಕಷ್ಟದಾಯಕ ಸಂಗತಿಯಾಗಿದ್ದುದರಿಂದ ಬಲವಾದ ಕೇಂದ್ರದ ಕಲ್ಪನೆಗೆ ಸಂವಿಧಾನ ರಚನ ಸಮಿತಿ ಒತ್ತು ನೀಡಿದೆ. ಇದರೊಂದಿಗೆ ಇಂಡಿಯಾ ಪಾಕಿಸ್ತಾನದ ವಿಭಜನೆ ಮತ್ತು ಪ್ರತ್ಯೇಕತೆಯನ್ನು ಪ್ರತಿಪಾದಿಸುವ ಪ್ರದೇಶಗಳು ಇದ್ದುದರಿಂದ ಬಲವಾದ ಕೇಂದ್ರದ ಕಲ್ಪನೆಗೆ ಇನ್ನೂ ಹೆಚ್ಚಿನ ಬಲ ಬಂತು. ಇವೆಲ್ಲವೂ ನಮ್ಮ ಸಂವಿಧಾನದಲ್ಲಿ ಪ್ರತಿಫಲನಗೊಂಡಿವೆ.

ಸಂವಿಧಾನದಲ್ಲಿ ರಾಜ್ಯ ಮತ್ತು ಕೇಂದ್ರದ ಅಧಿಕಾರದ ವ್ಯಾಪ್ತಿ ಬಗ್ಗೆ ಸ್ಪಷ್ಟತೆ ಇದ್ದರೂ ಕೇಂದ್ರ ರಾಜ್ಯವನ್ನು ಲೆಕ್ಕಿಸದೆ ಕಾಯಿದೆ ಕಾನೂನುಗಳನ್ನು ಮಾಡಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯಗಳನ್ನು ವಿಂಗಡಿಸುವ ಮತ್ತು ರಾಜ್ಯ ಸರಕಾರಗಳನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸುವ ಅಧಿಕಾರ ಕೇಂದ್ರಕ್ಕಿದೆ. ಕೃಷಿ ರಾಜ್ಯದ ವ್ಯಾಪ್ತಿಗೆ ಬರುವ ವಿಷಯವಾದರೂ ಕೇಂದ್ರ ಮೂರು ಕಾಯಿದೆಗಳನ್ನು ಜಾರಿಗೆ ತಂದಿದೆ. ಸಂವಿಧಾನದ 42ನೇ ತಿದ್ದುಪಡಿ ರಾಜ್ಯವ್ಯಾಪ್ತಿಗೆ ಬರುವ ಶಿಕ್ಷಣ, ಅರಣ್ಯ ಮುಂತಾದವುಗಳನ್ನು ಕನ್‌ಕರಂಟ್ ಪಟ್ಟಿಗೆ (ರಾಜ್ಯ, ಕೇಂದ್ರ ಇಬ್ಬರಿಗೂ ಸೇರಿದ ಪಟ್ಟಿ) ವರ್ಗಾಯಿಸಿದೆ. ಅಭಿವೃದ್ಧಿ ಜವಾಬ್ದಾರಿ ರಾಜ್ಯಕ್ಕೆ ಹೆಚ್ಚಿದೆ ಆದರೆ ತೆರಿಗೆ ವಿಧಿಸಿ ಸಂಗ್ರಹಿಸುವ ಅಧಿಕಾರ ಕೇಂದ್ರಕ್ಕೆ ಹೆಚ್ಚಿದೆ. ಇವೆಲ್ಲವೂ ನಮ್ಮ ಗಣರಾಜ್ಯ ವ್ಯವಸ್ಥೆಯ ವ್ಯಾಪ್ತಿಯನ್ನು ಕುಗ್ಗಿಸಿವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಲೇಖನದ ವ್ಯಾಪ್ತಿಯನ್ನು ಫೆಡರಲಿಸಂ ಭಾರತದಲ್ಲಿ ಉಳಿದು ಬೆಳೆಯಬೇಕಾದರೆ ರಾಜ್ಯಗಳಿಗೆ– 1) ಭಾಷಾ ಸ್ವಾಯತ್ತತೆ, 2) ಶಾಸನತ್ಮಾಕ ಹಾಗು ಆಡಳಿತಾತ್ಮಕ ಸ್ವಾಯತ್ತತೆ ಹಾಗು 3) ಕೇಂದ್ರದ ಸಂಪನ್ಮೂಲ ಹಂಚುವ ಮಾನದಂಡಗಳ ತೀರ್ಮಾನದಲ್ಲಿ ರಾಜ್ಯಗಳ ಅಭಿಪ್ರಾಯಕ್ಕೂ ಮನ್ನಣೆ ಬೇಕೆಂದು ವಾದಿಸುವುದಕ್ಕೆ ಸೀಮಿತಗೊಳಿಸಿದ್ದೇನೆ. ಗಣರಾಜ್ಯ ವ್ಯವಸ್ಥೆಯ ಆರೋಗ್ಯಕ್ಕೆ ಅವಶ್ಯವಿರುವ ಮೇಲಿನ ಗುಣಗಳಿಂದ ಭಿನ್ನವಾದ ಬೆಳವಣಿಗೆಗಳು ಇತ್ತೀಚಿನ ದಿನಗಳಲ್ಲಿ ಮುಂಚೂಣಿಗೆ ಬರುತ್ತಿವೆ. ಅವುಗಳಲ್ಲಿ ಕೆಲವನ್ನು ಈ ಲೇಖನದಲ್ಲಿ ಚರ್ಚಿಸಿದ್ದೇನೆ.

ಹಿಂದಿ ಹೇರಿಕೆ

ಅಧಿಕೃತ ಭಾಷೆ ಮೇಲಿನ ಸಮಿತಿಯೊಂದು ಸಂವಿಧಾನ ಸೃಷ್ಟಿಸಿರುವ ಅಂಗ. ಇದು ಕಾಲಕಾಲಕ್ಕೆ ಅಧಿಕೃತ ಭಾಷೆಯ ಪ್ರಗತಿಯನ್ನು ಅಧ್ಯಯನ ಮಾಡಿ ಅಧ್ಯಕ್ಷರಿಗೆ ವರದಿ ಸಲ್ಲಿಸುವುದು ನಡೆಯುತ್ತಿದೆ. ಆದರೆ ಸೆಪ್ಟಂಬರ್ 2022ರಲ್ಲಿ ಕೇಂದ್ರದ ಗೃಹ ಇಲಾಖೆ ಅಧ್ಯಕ್ಷರಿಗೆ ಸಲ್ಲಿಸಿದ ಅಧಿಕೃತ ಭಾಷೆ ಮೇಲಿನ 11ನೇ ವರದಿ ರಾಜ್ಯಗಳ ಬಾಷಾ ಸ್ವಾಯತ್ತತೆಯನ್ನು ಪ್ರಶ್ನಿಸುವ ರೂಪದಲ್ಲಿದೆ. ಏಕೆಂದರೆ ಅದು ಹಿಂದಿಯೇತರ ಅಧಿಕೃತ ಭಾಷೆಯುಳ್ಳ ರಾಜ್ಯಗಳ ಅಧಿಕೃತ ಭಾಷೆಯ ಸ್ಥಾನಮಾನವನ್ನು ಅಲ್ಲಗಳೆಯುವ ರೂಪದಲ್ಲಿದೆ. ಭಾಷವಾರು ಪ್ರಾಂತಗಳ ರಚನೆಗೆ ಎರಡು ಉದ್ದೇಶಗಳಿವೆ. 1) ಜನ ಕಲ್ಯಾಣ ಸುಗಮಗೊಳಿಸಲು ಜನರ ಭಾಷೆಯಲ್ಲೇ ಆಡಳಿತ, ಶಿಕ್ಷಣಗಳನ್ನು ನಡೆಸುವುದು, 2) ಒಕ್ಕೂಟ ವ್ಯವಸ್ಥೆಯನ್ನು ಬಲಗೊಳಿಸಲು ವಿಕೇಂದ್ರೀಕೃತ ಆಡಳಿತಕ್ಕೆ ಮಹತ್ವ ನೀಡುವುದು. ಈ ಉದ್ದೇಶಗಳನ್ನು ನಿರಾಕರಿಸುವ ಎಲ್ಲ ಲಕ್ಷಣಗಳು ಸೆಪ್ಟಂಬರ್ 2022ರಲ್ಲಿ ಗೃಹ ಇಲಾಖೆ ಅಧ್ಯಕ್ಷರಿಗೆ ಸಲ್ಲಿಸಿದ ದೇಶದ ಅಧಿಕೃತ ಭಾಷೆ ಮೇಲಿನ ವರದಿಯಲ್ಲಿವೆ.

1) ಕೇಂದ್ರ ಸರಕಾರದ ಇಲಾಖೆಗಳಿಗೆ ಸಿಬ್ಬಂದಿಗಳ ನೇಮಕಾತಿಗೆ ನಡೆಸುವ ಲಿಖಿತ ಪರೀಕ್ಷೆಯನ್ನು ಹಿಂದಿಯಲ್ಲಿ ಮಾತ್ರ ನಡೆಸಬೇಕು, 2) ಕೇಂದ್ರೀಯ ವಿದ್ಯಾಲಯಗಳಲ್ಲಿ, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ, ನ್ಯಾಶನಲ್ ಇನ್‌ಸ್ಟಿಟ್ಯುಟ್ ಆಫ್ ಸಯನ್ಸ್, ನ್ಯಾಶನಲ್ ಇನ್‌ಸ್ಟಿಟ್ಯುಟ್ ಆಫ್ ಟೆಕ್ನಾಲಾಜಿ, ನ್ಯಾಶನಲ್ ಇನ್‌ಸ್ಟಿಟ್ಯುಟ್ ಆಫ್ ಮ್ಯಾನೇಜ್‌ಮೇಂಟ್‌ಗಳಲ್ಲಿ ಹಿಂದಿಯಲ್ಲೇ ಪಠ್ಯ ಪ್ರವಚನಗಳು ನಡೆಯಬೇಕು, 3) ಕೇಂದ್ರ ಸರಕಾರ ಮಾಧ್ಯಮಗಳಿಗೆ ನೀಡುವ ಜಾಹೀರಾತುಗಳಲ್ಲಿ ಶೇ. 50ನ್ನು ಹಿಂದಿ ಭಾಷೆಯಲ್ಲಿರುವ ಮಾಧ್ಯಮಗಳಿಗೆ ಮಾತ್ರ ನೀಡಬೇಕು ಮತ್ತು 4) ರಾಜ್ಯಗಳು ಹಿಂದಿ ಪ್ರಚಾರ ಮಾಡುವುದನ್ನು ಕಡ್ಡಾಯಗೊಳಿಸಬೇಕು ಇತ್ಯಾದಿ ಶಿಫಾರಸ್ಸುಗಳಿವೆ. ಸದ್ಯಕ್ಕೆ ಇವು ಶಿಫಾರಸ್ಸುಗಳು. ಒಂದು ವೇಳೆ ಇವು ಅನುಷ್ಠಾನಗೊಂಡರೆ ಹಿಂದಿಯೇತರ ರಾಜ್ಯಗಳ ಉದ್ಯೋಗಾರ್ಥಿಗಳ, ಶಿಕ್ಷಣಾರ್ಥಿಗಳ ಭವಿಷ್ಯದ ಮೇಲೆ ಗಾಢ ಪರಿಣಾಮ ಬೀರಬಹುದು.

ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಯಾವ ಮಾಧ್ಯಮದಲ್ಲಿ ಪಠ್ಯ ಪ್ರವಚನ ನಡೆಸಬೇಕು, ಕೇಂದ್ರ ಸರಕಾರದ ಇಲಾಖೆಗಳ ಪರೀಕ್ಷೆಯನ್ನು ಯಾವ ಭಾಷೆಯಲ್ಲಿ ನಡೆಸಬೇಕು ಇತ್ಯಾದಿಗಳೆಲ್ಲ ಈ ಸಮಿತಿ ವ್ಯಾಪ್ತಿಗೆ ಬರುವುದಿಲ್ಲ. ಹಿಂದಿ ಜೊತೆಗೆ ಇಂಗ್ಲೀಷ್ ಕೂಡ ದೇಶದ ಆಧಿಕೃತ ಭಾಷೆಯೆಂದು 60ರ ದಶಕದಲ್ಲೇ ತೀರ್ಮಾನವಾಗಿದೆ. ಇವನ್ನು ಬದಲಾಯಿಸಬೇಕಾದರೆ ಸಂವಿಧಾನ ತಿದ್ದುಪಡಿ ಆಗಬೇಕು. ಆದುದರಿಂದ ಅಧಿಕೃತ ಭಾಷೆ ಮೇಲಿನ ವರದಿಗೆ ಬೇರೆ ಉದ್ದೇಶಗಳಿವೆ ಎನ್ನುವ ಗುಮಾನಿ ಇದೆ. ಬೇರೆ ಉದ್ದೇಶಗಳು ಅರ್ಥವಾಗಬೇಕಾದರೆ ವರ್ತಮಾನದಲ್ಲಿ ನಡೆಯುತ್ತಿರುವ ಎಲ್ಲವನ್ನು ಕೇಂದ್ರೀಕರಿಸುವ ಪ್ರಕ್ರಿಯೆಯನ್ನು ಗಮನಿಸಬೇಕು. ಈ ಎಲ್ಲ ಬೆಳವಣಿಗೆಗಳಿಗೂ ಬಿಜೆಪಿಯ ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಮಾರುಕಟ್ಟೆ, ಒಂದು ತೆರಿಗೆ, ಒಂದು ಚುನಾವಣೆಗಳಿಗೂ ಸಂಬಂಧ ಇದೆ. ಈ ಸಾಲಿನಲ್ಲಿ ಪರಿಗಣಿಸಬಹುದಾದ ಕೆಲವು ಬೆಳವಣಿಗೆಗಳು ಇಂತಿವೆ. 1) ಸರಕು ಸೇವೆಗಳ ಮೇಲಿನ ತೆರಿಗೆ (ಜಿಎಸ್‌ಟಿ), 2) ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲ ವಿತರಣೆ ಮತ್ತು 3) ಮತಕ್ಷೇತ್ರಗಳ ಮರುವಿಂಗಡನೆ.

ಜಿಎಸ್‌ಟಿ

ವಿವಿಧ ಭಾಷೆಯ ನೆಲೆಯಲ್ಲಿ ರೂಪುಗೊಂಡ ರಾಜ್ಯಗಳ ಅಭಿವೃದ್ಧಿಗೆ ಅವಶ್ಯವಿರುವ ಸಂಪನ್ಮೂಲ ರೂಢಿಸಿಕೊಳ್ಳಲು ತೆರಿಗೆ ವಿಧಿಸುವ ಹಕ್ಕನ್ನು ರಾಜ್ಯಗಳಿಗೆ ಸಂವಿಧಾನ ನೀಡಿದೆ. ಆದರೆ ಒಂದು ದೇಶ, ಒಂದು ಮಾರುಕಟ್ಟೆ, ಒಂದು ತೆರಿಗೆ ಘೋಷಣೆಯಲ್ಲಿ ಹಲವು ರಾಜ್ಯಗಳು ಹಲವು ತೆರಿಗೆಗಳು ಮಹತ್ವ ಕಳೆದು ಕೊಂಡಿವೆ. ಹಲವು ತೆರಿಗೆಗಳು ಸರಕು ಮತ್ತು ಸೇವೆಗಳ ವೆಚ್ಚವನ್ನು ಅನಗತ್ಯವಾಗಿ ಹೆಚ್ಚಿಸುತ್ತಿವೆ. ಆದುದರಿಂದ ಅವು ಜನ ಉಪಯೋಗಿ ಅಲ್ಲ. ಅದರ ಬದಲು ದೇಶವ್ಯಾಪಿ ಒಂದೇ ತೆರಿಗೆ ಇದ್ದರೆ ಸರಕು ಮತ್ತು ಸೇವೆಗಳ ವೆಚ್ಚ ಕಡಿಮೆ ಆಗುತ್ತದೆ. ಗ್ರಾಹಕರು ಕಡಿಮೆ ಬೆಲೆಗೆ ಖರೀದಿಸಿ ಅನುಭವಿಸಬಹುದು ಎನ್ನುವ ವಾದ ಆಕರ್ಷಕವಾಗಿದೆ. ಇದೇ ಕಾರಣಕ್ಕಾಗಿ 2016ರಲ್ಲಿ ನಡೆದ ಸಂವಿಧಾನ ತಿದ್ದುಪಡಿ ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸುವ ರಾಜ್ಯಗಳ ಅಧಿಕಾರವನ್ನು ಜಿಎಸ್‌ಟಿ ಕೌನ್ಸಿಲ್‌ಗೆ ವರ್ಗಾಯಿಸಿದೆ. ಜಿಎಸ್‌ಟಿ ಕೌನ್ಸಿಲ್ ರಚನೆಯು ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರವನ್ನು ಮೊಟಕುಗೊಳಿಸಿದೆ. ಈ ತಿದ್ದುಪಡಿ ನಂತರ ಶೇ. 80ರಷ್ಟು ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸುವ ಮತ್ತು ಸಂಗ್ರಹಿಸುವ ರಾಜ್ಯಗಳ ಅಧಿಕಾರ ಜಿಎಸ್‌ಟಿ ಕೌನ್ಸಿಲ್‌ಗೆ ವರ್ಗಾವಣೆ ಆಗಿದೆ. ಇಂದು ರಾಜ್ಯಗಳು ತಮ್ಮ ಪ್ರತ್ಯೇಕ ಅಭಿವೃದ್ಧಿ ಸಮಸ್ಯೆ ಪರಿಹಾರಕ್ಕಾಗಿ ಪ್ರತ್ಯೇಕ ತೆರಿಗೆ ವಿಧಿಸಿ ಸಂಗ್ರಹಿಸುವ ಸ್ಥಿತಿಯಲ್ಲಿ ಇಲ್ಲ. ಸಂಪನ್ಮೂಲ ಇಲ್ಲವಾದರೆ ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಅಭಿವೃದ್ಧಿ ಬಗ್ಗೆ ಮಾತಾಡುವುದು ಒಣ ಚರ್ಚೆ ಆಗುತ್ತದೆ. ತೆರಿಗೆ ವಿಧಿಸಿ ಸಂಗ್ರಹಿಸುವ ಅಧಿಕಾರ ಮತ್ತು ಭಾಷಾವಾರು ಪ್ರಾಂತಗಳ ಸ್ವಾಯತ್ತತೆಯನ್ನು ತಮಿಳುನಾಡು ಅರ್ಥಮಾಡಿಕೊಂಡಷ್ಟು ದೇಶದ ಬೇರೆ ರಾಜ್ಯಗಳೂ ಅರ್ಥಮಾಡಿಕೊಂಡಿಲ್ಲ. ಇದೇ ಕಾರಣದಿಂದ ತಮಿಳುನಾಡು ಸಂವಿಧಾನ ತಿದ್ದುಪಡಿ ಸಭೆಯಲ್ಲಿ ಪಾಲುಗೊಂಡಿಲ್ಲ. ಆದರೆ ಕನ್ನಡ ಕನ್ನಡ ಎಂದು ಭಜನೆ ಮಾಡುವ ಕರ್ನಾಟಕ ಆರಂಭದ ದಿನಗಳಲ್ಲಿ ಜಿಎಸ್‌ಟಿ ವಿರುದ್ಧ ಎಲ್ಲೂ ಧ್ವನಿ ಎತ್ತಿಯೇ ಇಲ್ಲ. ಇವತ್ತು ಕೇಂದ್ರೀಕೃತ ತೆರಿಗೆ ಸಂಗ್ರಹದ ಆಪಾಯ ರಾಜ್ಯಕ್ಕೂ ಮನವರಿಕೆ ಆಗಿದೆ. ಆದುದರಿಂದ ಆಡಳಿತ ನಡೆಸುವ ಸರಕಾರ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಆದರೆ ಕೇಂದ್ರದ ಆಡಳಿತ ನಡೆಸುವ ಪಕ್ಷದ ರಾಜ್ಯ ಘಟಕ ಒಂದು ದಿನವೂ ಕೇಂದ್ರದ ನಡೆಯನ್ನು ವಿರೋಧಿಸಿಲ್ಲ. ಪಕ್ಷಗಳಿಗೆ ಅಧಿಕಾರ ಮುಖ್ಯವೇ ಹೊರತು ವಿಕೇಂದ್ರೀಕೃತ ಆಡಳಿತ ಮುಖ್ಯವಲ್ಲ.

ಹಣಕಾಸು ಸಮಿತಿ

ರಾಜ್ಯಗಳ ಅಭಿವೃದ್ಧಿಗೆ ಅಡ್ಡಿಯಾಗುವ ಎರಡನೇ ಅಂಶ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಪನ್ಮೂಲ ಹಂಚುವಿಕೆ. ಕೇಂದ್ರ ಸರಕಾರ ಸಂಗ್ರಹ ಮಾಡುವ ಆದಾಯ ತೆರಿಗೆ, ಉದ್ದಿಮೆಗಳ ಲಾಭದ ಮೇಲಿನ ತೆರಿಗೆ, ಕೇಂದ್ರದ ಅಬಕಾರಿ ತೆರಿಗೆ ಮತ್ತು ಕೇಂದ್ರ ಸರಕಾರ ಸಂಗ್ರಹ ಮಾಡುವ ಇತರ ಸಂಪನ್ಮೂಲಗಳಲ್ಲಿ ರಾಜ್ಯಗಳ ಪಾಲನ್ನು ಹಣಕಾಸು ಸಮಿತಿ ನಿರ್ಧರಿಸುತ್ತದೆ. 2015ರವರಗೆ ಕೇಂದ್ರ ಸಂಗ್ರಹಿಸುವ ಸಂಪನ್ಮೂಲದಲ್ಲಿ ಶೇ. 32ನ್ನು ರಾಜ್ಯಗಳಿಗೆ ಹಂಚಲಾಗುತ್ತಿತ್ತು. 14ನೇ ಹಣಕಾಸು ಸಮಿತಿ (2015–20) ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲನ್ನು ಶೇ. 32ರಿಂದ ಶೇ. 42ಕ್ಕೆ ಏರಿಸಿತು. ಆದರೆ ಶೇ. 10 ಏರಿಕೆಯನ್ನು ಕೇಂದ್ರದ ಬಿಜೆಪಿ ಸರಕಾರ ಇಷ್ಟಪಡಲಿಲ್ಲ. ಹಾಗೆಂದು ಹಣಕಾಸು ಸಮಿತಿ ತೀರ್ಮಾನವನ್ನು ಬದಲಾಯಿಸುವಂತಿಲ್ಲ. ಆದುದರಿಂದ ಶೇ. 42ನ್ನು ಶೇ. 32ರಲ್ಲೇ ಇರಿಸಿಕೊಳ್ಳಲು ಕೇಂದ್ರ ಸರಕಾರ ಬೇರೆ ದಾರಿ ಹುಡುಕಿತು. ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ಎರಡು ಪಾಲಿದೆ. ಒಂದು ಮೂಲ ತೆರಿಗೆ ಮತ್ತೊಂದು ಸೆಸ್ ಮತ್ತು ಸರ್‌ಚಾರ್ಜ್. ಮೂಲ ತೆರಿಗೆಯನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕು. ಆದರೆ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಅಗತ್ಯವಿಲ್ಲ. ರಾಜ್ಯಗಳೊಂದಿಗೆ ಹಂಚಿಕೊಳ್ಳದಿರುವ ಸೆಸ್ ಮತ್ತು ಸರ್‌ಚಾರ್ಜ್‌ನ್ನು ಕೇಂದ್ರ ಏರಿಸುತ್ತಾ ಹೋಯಿತು.

2017ರಲ್ಲಿ ಶೇ. 13.5ರಷ್ಟಿದ್ದ ಸೆಸ್ 2020ರಲ್ಲಿ ಶೇ. 20.2ಕ್ಕೆ ಏರಿತು. ಸೆಸ್ ಸಂಗ್ರಹ ಹೆಚ್ಚಾದುದರಿಂದ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲು ಶೇ. 32ರಿಂದ ಶೇ. 42ಕ್ಕೆ ಏರಿದರೂ ರಾಜ್ಯಗಳಿಗೆ ವರ್ಗಾವಣೆ ಆಗುವ ಮೊತ್ತ ಬದಲಾಗಲಿಲ್ಲ. ಏಕೆಂದರೆ ಹಂಚಿಕೊಳ್ಳುವ ಪಾಲು ಶೇ. 100 ಇದ್ದದ್ದು ಶೇ. 80ಕ್ಕೆ ಇಳಿಯಿತು. ಅಷ್ಟು ಮಾತ್ರವಲ್ಲ 2019ರಲ್ಲಿ ಆರ್ಟಿಕಲ್ 370 ರದ್ದುಗೊಂಡು ಮೂರು ಕೇಂದ್ರಾಡಳಿತ ಪ್ರದೇಶಗಳು ಸೃಷ್ಟಿಯಾದವು. ಅವುಗಳ ಅಭಿವೃದ್ಧಿಗಾಗಿ ಶೇ. 1ನ್ನು ತನ್ನಲ್ಲೇ ಕೇಂದ್ರ ಇರಿಸಿಕೊಂಡು ರಾಜ್ಯಗಳ ಪಾಲನ್ನು ಶೇ. 41ಕ್ಕೆ ಇಳಿಸಿದೆ. ಅಂದರೆ ರಾಜ್ಯಗಳಿಗೆ ವರ್ಗಾವಣೆ ಆಗುವ ಮೊತ್ತ ಶೇ. 32.8ಕ್ಕೆ ಇಳಿಯಿತು. ಇವೆಲ್ಲ ರಾಜ್ಯಗಳಿಗೆ ಅನುಕೂಲ ಮಾಡುವ 14ನೇ ಹಣಕಾಸಿನ ಶಿಫಾರಸ್ಸನ್ನು ನಿರುಪಯುಕ್ತಗೊಳಿಸಲು ಬಿಜೆಪಿ ಬಳಸಿದ ತಂತ್ರಗಳು.

15ನೇ ಹಣಕಾಸು ಸಮಿತಿ

15ನೇ ಹಣಕಾಸು ಸಮಿತಿಯನ್ನು 2017ರಲ್ಲಿ ಬಿಜೆಪಿ ಸರಕಾರ ನೇಮಿಸಿದೆ. ಸಂಪನ್ಮೂಲವನ್ನು ರಾಜ್ಯಗಳ ನಡುವೆ ಹಂಚಲು ಬಳಸುವ ಮಾನದಂಡದಲ್ಲಿ ಹಣಕಾಸು ಸಮಿತಿ ವಿಶೇಷ ಬದಲಾವಣೆ ಮಾಡಿಲ್ಲ. ರಾಜ್ಯದ ಜನಸಂಖ್ಯೆ, ವಿಸ್ತೀರ್ಣ, ಅರಣ್ಯ ಪ್ರದೇಶ, ಆದಾಯ ಅಂತರ, ತೆರಿಗೆ ಸಂಗ್ರಹ ಪ್ರಯತ್ನ ಮತ್ತು ಜನಸಂಖ್ಯೆ ನಿಯಂತ್ರಣ ಸಾಧನೆ ಇವೆಲ್ಲ ಹಿಂದಿನ ಹಣಕಾಸು ಸಮಿತಿಗಳು ಬಳಸಿದ ಮಾನದಂಡಗಳೇ. ಆದರೆ ಈ ಮಾನದಂಡಗಳನ್ನು ಪ್ರಯೋಗಿಸುವಾಗ ಹಿಂದಿನ ಸಮಿತಿಗಳು 1971ರ ಜನಸಂಖ್ಯೆಯನ್ನು

ಪುಟ 10 ಕ್ಕೆ

ಕರ್ನಾಟಕದ ಸಮಗ್ರ ಬೆಳವಣಿಗೆಯ ಉತ್ಸವ..... ಪುಟ 8 ರಿಂದ

ಕರ್ನಾಟಕದಲ್ಲಿ 1956ರಿಂದಲೂ ರಾಜ್ಯದ ಅಧಿಕಾರದ ಮೇಲೆ ಆಕ್ರಮಣವನ್ನು ವಿಧೇಯರಾಗಿ ಒಪ್ಪುವ ಪಕ್ಷಗಳ ಸರ್ಕಾರಗಳೇ ಅಧಿಕಾರಕ್ಕೆ ಬಂದಿವೆ. ಈಗಿನ ಬಿಜೆಪಿಯಂತೂ ಮೊದಲಿನಿಂದಲೂ ಭಾಷಾವಾರು ಪ್ರಾಂತಗಳ ರಚನೆ, ಸ್ವಾಯತ್ತತೆ ಮೊದಲಾದ ವಿಷಯಗಳಿಗೆ ಬದ್ಧ ವಿರೋಧಿ.

ನೈಜ ಸ್ವಾಯತ್ತತೆ ಪ್ರಶ್ನೆಗಳನ್ನು ಎತ್ತದ ಆಳುವ ವರ್ಗದ ಪಕ್ಷಗಳ ದೌರ್ಬಲ್ಯದ ಹಿನ್ನೆಲೆಯಲ್ಲಿ ರಾಜ್ಯದ ಆಳುವ ವರ್ಗದ ಸರ್ಕಾರಗಳು ನಿಜ ಜನ ಪ್ರಶ್ನೆಗಳನ್ನು ಮರೆಮಾಚಲು ಭಾವೋದ್ರೇಕ ಎಬ್ಬಿಸುವುದಕ್ಕೆ ತೊಡಗುತ್ತಾರೆ. ಹಿಂದೂ ಮುಸ್ಲಿಂ ಪ್ರಶ್ನೆಯಂತೂ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಜೊತೆಗೆ ಇತರ ಭಾಷಿಕರ ಮೇಲೆ, ಉತ್ತರ ಭಾರತ, ದಕ್ಷಿಣ ಭಾರತ, ಕಾವೇರಿ ನೀರು, ಬೆಳಗಾಂ ಮೊದಲಾದ ಪ್ರಶ್ನೆಗಳ ಮೇಲೆ ಭಾವೋದ್ರೇಕ ಉಂಟು ಮಾಡಲು ಕಾಲ್ಕೆರೆದು ನಿಂತಿರುತ್ತಾರೆ.

ಕಾರ್ಮಿಕ ವರ್ಗದ ದೃಷ್ಟಿಕೋನ ಯಾವಾಗಲೂ ರಾಷ್ಟ್ರೀಯತೆಯೊಂದಿಗೆ ಮಿಳಿತವಾದ ಅಂತರ ರಾಷ್ಟ್ರೀಯತೆ. ಇದು ಕೇವಲ ದೇಶಗಳ ನಡುವಣ ವಿಷಯದಲ್ಲಿ ಮಾತ್ರವಲ್ಲ, ಬೇರೆ ರಾಜ್ಯಗಳ ದುಡಿಯುವ ಜನರ ಬಗೆಗೂ ಕೂಡಾ ಬಹಳ ಸ್ಪಷ್ಟವಾಗಿ, ದೃಢವಾಗಿ ಅಂತರ ರಾಷ್ಟ್ರೀಯ ದುಡಿಯುವ ಜನರ ಐಕ್ಯತೆಯನ್ನು ಪ್ರತಿಪಾದಿಸಬೇಕು. ಇದು ರಾಜ್ಯದೊಳಗೆ ಬೇರೆ ಭಾಷಿಕ ಸಮುದಾಯಗಳು, ವಿವಿಧ ಪ್ರದೇಶಗಳ ಜನರ ಬಗೆಗೂ ಅನ್ವಯಿಸುತ್ತದೆ.

ಎಲ್ಲ ಭಾಷೆಗಳ ಜನರೂ, ಎಲ್ಲ ರಾಜ್ಯಗಳೂ ಈ ದಮನವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಇದು ಕೇಂದ್ರವು ಎಲ್ಲ ರಾಜ್ಯಗಳನ್ನೂ ಹಿಂಡುವ ಪ್ರಶ್ನೆಯೇ ಹೊರತು, ಆ ರಾಜ್ಯ ಈ ರಾಜ್ಯಗಳ ಪ್ರಶ್ನೆಯಲ್ಲ. ಹಾಗೆಯೇ ಇದು ಕೇಂದ್ರದಲ್ಲಿ ಆಳುವ ಪಕ್ಷಗಳು, ಅದರಲ್ಲೂ ಬಿಜೆಪಿಯ ಆಡಳಿತದಲ್ಲಿ ರಾಜಕೀಯ ದುರುದ್ದೇಶದಿಂದ ಕೆಲ ರಾಜ್ಯಗಳಿಗೆ ತೋರಿಸುವ ಪಕ್ಷಪಾತ, ಮತ್ತೆ ಕೆಲವು ರಾಜ್ಯಗಳಿಗೆ ತೋರಿಸುವ ಮಲತಾಯಿ ಧೋರಣೆಯೇ ಹೊರತು ಉತ್ತರ ಭಾರತ ದಕ್ಷಿಣ ಭಾರತದ ಪ್ರಶ್ನೆಯಲ್ಲ. ಹಿಂದುಳಿದಿರುವ ಅಲ್ಲಿಯ ದುಡಿಯುವ ಜನರೂ ನಮಗಿಂತ ಹೆಚ್ಚು ಸಂಕಟ ಅನುಭವಿಸುತ್ತಿರುವವರು ಎಂಬುದನ್ನು ಮರೆಯಬಾರದು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅರಾಜಕ ಅಭಿವೃದ್ಧಿಯ ಅಯೋಜಿತ ಅಭಿವೃದ್ಧಿಯ ಭಾಗವಾಗಿ ಒಂದೇ ರಾಜ್ಯದಲ್ಲಿಯೂ ಹಲವು ಹಿಂದುಳಿದ ಪ್ರದೇಶಗಳಿರುವಂತೆ ದೇಶದಲ್ಲಿಯೂ ತೀವ್ರ ಹಿಂದುಳಿಯುವಿಕೆ ಅನುಭವಿಸುತ್ತಿರುವ ಪ್ರದೇಶಗಳಿವೆ. ಅದಕ್ಕೆ ಭೂ ಸುಧಾರಣೆ, ಭೂಮಾಲಿಕರ ಪಾಳೆಯಗಾರಿ ದಬ್ಬಾಳಿಕೆಯೂ ಸೇರಿದಂತೆ ಹಲವು ಅಂಶಗಳಿವೆ.

ನವೆಂಬರ್ 1 ಕೇವಲ ಕನ್ನಡ ರಾಜ್ಯೋತ್ಸವವಾಗಿ ಮಾತ್ರ ಆಚರಿಸುವುದು, ಕಾಣುವುದು ಮೇಲೆ ಹೇಳಿದಂತೆ ಸಮಗ್ರ ರಾಜ್ಯದ ಬೆಳವಣಿಗೆಯ ಪ್ರಶ್ನೆಯನ್ನು ಮರೆ ಮಾಚುವ ಪ್ರಶ್ನೆ ಒಂದು ಕಡೆಯಾದರೆ, ಮತ್ತೊಂದು ಕಡೆ ತುಳು, ಕೊಡವ, ಕೊಂಕಣಿ ಮತ್ತು ಇತರ ಭಾಷೆಗಳ ಜನತೆ (ಆ ಭಾಷೆಗಳಿಗಾಗಿ ಒಂದೊಂದು ಅಕಾಡೆಮಿ ಸೃಷ್ಟಿ ಮಾಡಿ ಮೂಗಿಗೆ ತುಪ್ಪ ಒರೆಸಲು ಪ್ರಯತ್ನ ಮಾಡಿದ್ದರೂ) ಒಂದು ರೀತಿ ಪರಕೀಯತೆಯನ್ನು ಅನುಭವಿಸುವ ಸಂಭವ ಉಂಟಾಗಿದೆ.

ರಾಜ್ಯೋತ್ಸವವನ್ನು, ರಾಜ್ಯಗಳ ಸ್ವಾಯತ್ತತೆ, ಅಧಿಕಾರಗಳನ್ನು ಕೂಡಾ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ, ಬ್ರಿಟಿಷರ ವಸಾಹತುಶಾಹಿ ಕೇಂದ್ರೀಕರಣದ ವಿರುದ್ಧವಾಗಿ ಬೆಳೆದ ಜನಪರ ಆಶಯಗಳ ಭಾಗವಾಗಿಯೇ ಅರ್ಥ ಮಾಡಿಕೊಳ್ಳಬೇಕು. ಬ್ರಿಟಿಷರ ಧೋರಣೆಯಾಗಿ ಅಲ್ಲ ಎಂಬುದು ಮುಖ್ಯ.

ಆದ್ದರಿಂದ ರಾಜ್ಯೋತ್ಸವ ಕನ್ನಡ ರಾಜ್ಯೋತ್ಸವ ಮಾತ್ರವಾಗದೆ, ಕರ್ನಾಟಕ ರಾಜ್ಯೋತ್ಸವ, ರಾಜ್ಯದ ಆರ್ಥಿಕ, ರಾಜಕೀಯ ಅಧಿಕಾರ, ಸ್ವಾಯತ್ತತೆ, ಸಮಗ್ರ ಜನಪರ ಅಭಿವೃದ್ಧಿಯ ಪ್ರಶ್ನೆಯಾಗಿ ಆಚರಿಸಲ್ಪಡಬೇಕು. ಭೂ ಸುಧಾರಣೆ, ಕೈಗಾರಿಕಾ ಬೆಳವಣಿಗೆ, ಉದ್ಯೋಗ ನಿರ್ಮಾಣ, ಮಾತೃಭಾಷೆಯಲ್ಲಿ ಶಿಕ್ಷಣ, ಸಾಹಿತ್ಯ ಪ್ರಕಟಣೆಗಳೆಲ್ಲ ಮುಖ್ಯ ಪ್ರಶ್ನೆಗಳಾಗಬೇಕು.

ಇದೇ ಸಮಸ್ಯೆ, ಸಂಕಟ ಅನುಭವಿಸುತ್ತಿರುವ ಎಲ್ಲ ರಾಜ್ಯಗಳ ಜನತೆಯ ಐಕ್ಯ ಹೋರಾಟದ ವಿಷಯವಾಗಿ ಭಾವಿಸಬೇಕು.

ಗಣರಾಜ್ಯ ವ್ಯವಸ್ಥೆ ಮತ್ತು ಇತ್ತೀಚಿನ ಕೆಲವು ಬೆಳವಣಿಗೆಗಳು........ ಪುಟ 9 ರಿಂದ

ಬಳಸಿದರೆ 15ನೇ ಹಣಕಾಸು ಸಮಿತಿ ಕೇಂದ್ರದ ಸಲಹೆಯ ಮೇರೆಗೆ 2011ರ ಜನಸಂಖ್ಯೆಯನ್ನು ಬಳಸಿದೆ. ಕೇಂದ್ರ ಹಣಕಾಸು ಸಮಿತಿಯ ಈ ನಿರ್ಧಾರವನ್ನು ದಕ್ಷಿಣದ ರಾಜ್ಯಗಳು ಬಲವಾಗಿ ವಿರೋಧಿಸಿವೆ. ಏಕೆಂದರೆ 1971ರ ನಂತರ ಕೇಂದ್ರದ ಆದೇಶದನ್ವಯ ದಕ್ಷಿಣದ ರಾಜ್ಯಗಳು ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸಿದ್ದವು. ಆದುದರಿಂದ 1971ರಲ್ಲಿ ದಕ್ಷಿಣದ ಮೂರು ರಾಜ್ಯಗಳಲ್ಲಿ (ಕರ್ನಾಟಕ, ಕೇರಳ, ತಮಿಳುನಾಡು) ಶೇ. 17ರಷ್ಟಿದ್ದ ಜನಸಂಖ್ಯೆ 2011ರ ವೇಳೆಗೆ ಶೇ. 14ಕ್ಕೆ ಕುಸಿದಿದ್ದಿತು. ಆದರೆ ಉತ್ತರದ ರಾಜ್ಯಗಳು ಅದರಲ್ಲೂ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶದಂತಹ ದೊಡ್ಡ ರಾಜ್ಯಗಳು ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸದಿದ್ದುದರಿಂದ 1971ರಲ್ಲಿ ಶೇ. 28ರಷ್ಟಿದ್ದ ಜನಸಂಖ್ಯೆ 2011ರಲ್ಲಿ ಶೇ. 31ಕ್ಕೆ ಏರಿದೆ.

ಅಷ್ಟು ಮಾತ್ರವಲ್ಲ, ರಾಜ್ಯದ ಆದಾಯ ಅಂತರವನ್ನು ಮಾಪನ ಮಾಡಲು ರಾಜ್ಯದ ತಲಾ ಆದಾಯವನ್ನು ಬಳಸಲಾಗಿದೆ. ಆದಾಯವನ್ನು ರಾಜ್ಯದ ಜನಸಂಖ್ಯೆಯಿಂದ ಭಾಗಿಸಿ ತಲಾ ಆದಾಯ ನಿರ್ಧರಿಸುವುದು. ಅಂದರೆ ಇಲ್ಲೂ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆ ಹೆಚ್ಚಿರುವುದರಿಂದ ಅವರ ರಾಜ್ಯದ ಆದಾಯ ಹೆಚ್ಚಿದ್ದರೂ ತಲಾ ಆದಾಯ ಕಡಿಮೆ ಆಯಿತು. ಉದಾಹರಣೆಗೆ 2022ರಲ್ಲಿ ಉತ್ತರಪ್ರದೇಶದ ಜಿಡಿಪಿ (ರೂ. 21.64 ಲಕ್ಷ ಕೋಟಿ) ಕರ್ನಾಟಕದ ಜಿಡಿಪಿಗಿಂತ (ರೂ.18.85 ಲಕ್ಷ ಕೋಟಿ) ಹೆಚ್ಚಿತ್ತು. ಆದರೆ ಜನಸಂಖ್ಯೆ ಕಾರಣದಿಂದ ಕರ್ನಾಟಕದ ತಲಾ ಜಿಡಿಪಿ (ರೂ. 2,49,957) ಉತ್ತರಪ್ರದೇಶದ ತಲಾ ಜಿಡಿಪಿಗಿಂತ (ರೂ. 81,500) ಮೂರು ಪಟ್ಟು ಹೆಚ್ಚಾಯಿತು. ಇದೇ ರೀತಿ ಉತ್ತರದ 3 ರಾಜ್ಯಗಳ ಒಟ್ಟು ವಿಸ್ತೀರ್ಣ ದೇಶದ ವಿಸ್ತೀರ್ಣದ ಶೇ. 20 ಇದ್ದರೆ ದಕ್ಷಿಣದ 3 ರಾಜ್ಯಗಳ ವಿಸ್ತೀರ್ಣ ದೇಶದ ವಿಸ್ತೀರ್ಣದ ಶೇ. 11 ಇದೆ. ಹೀಗೆ ಹಣಕಾಸು ಸಮಿತಿ ರಾಜ್ಯಗಳ ನಡುವೆ ಸಂಪನ್ಮೂಲ ಹಂಚಲು ಬಳಸುವ ಬಹುತೇಕ ಮಾನದಂಡಗಳು ಜನಸಂಖ್ಯೆ, ವಿಸ್ತೀರ್ಣ ಹೆಚ್ಚಿರುವ ಮತ್ತು ಆರ್ಥಿಕವಾಗಿ ಹಿಂದುಳಿದ ರಾಜ್ಯಗಳ ಪರ ಇವೆ. ಇದೇ ಕಾರಣದಿಂದ ಕೇಂದ್ರದ ಪ್ರತಿ ರೂ. 100 ಸಂಪನ್ಮೂಲದಲ್ಲಿ ಬಿಹಾರ ರೂ. 10, ಮಧ್ಯಪ್ರದೇಶ ರೂ. 7.8, ಉತ್ತರ ಪ್ರದೇಶ ರೂ. 17.9 ಪಡೆದರೆ ಕರ್ನಾಟಕ ಕೇವಲ ರೂ. 3.6 ಪಡೆಯುತ್ತಿದೆ. ಕರ್ನಾಟಕ ಮಾತ್ರ ಅಲ್ಲ ಕೇರಳ ಮತ್ತು ತಮಿಳುನಾಡು ಒಟ್ಟಾಗಿ ರೂ. 9.6 ಪಡೆದರೆ ಉತ್ತರದ ಮೂರು ರಾಜ್ಯಗಳು (ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳು) ರೂ. 35.7ರಷ್ಟು ಪಾಲು ಪಡೆಯುತ್ತಿವೆ.

ಇದರಿಂದಾಗಿ 2023-24ನೇ ಕೇಂದ್ರದ ಬಜೆಟಲ್ಲಿ ಉತ್ತರದ ಮೂರು ರಾಜ್ಯಗಳು ಕೇಂದ್ರದಿಂದ ರೂ.2,31,207 ಕೋಟಿಯಷ್ಟು ನೇರ ತೆರಿಗೆಯ ಪಾಲು ಪಡೆದರೆ, ದಕ್ಷಿಣದ ಮೂರು ರಾಜ್ಯಗಳು ಕೇವಲ ರೂ.62,245 ಪಡೆದಿವೆ. ಆದರೆ ಇದೇ ಪ್ರಮಾಣದಲ್ಲಿ ಉತ್ತರದ ರಾಜ್ಯಗಳು ಕೇಂದ್ರದ ಬೊಕ್ಕಸಕ್ಕೆ ತೆರಿಗೆ ತುಂಬುವುದಿಲ್ಲ. 2021-22ರಲ್ಲಿ ದಕ್ಷಿಣದ ಮೂರು ರಾಜ್ಯಗಳು ಶೇ. 20ರಷ್ಟು ನೇರ ತೆರಿಗೆ ತುಂಬಿದರೆ, ಉತ್ತರದ ಮೂರು ರಾಜ್ಯಗಳು ಕೇವಲ ಶೇ.4ರಷ್ಟು ನೇರ ತೆರಿಗೆ ತುಂಬಿವೆ. 2021-22ರಲ್ಲಿ ಕರ್ನಾಟಕವೊಂದೇ 2.72 ಲಕ್ಷ ಕೋಟಿಯಷ್ಟು ತೆರಿಗೆ ತುಂಬಿದೆ. ಆದರೆ ಕರ್ನಾಟಕ ಕೇಂದ್ರದಿಂದ ಪಡೆದ ತೆರಿಗೆ ಪಾಲು ಕೇವಲ ರೂ. 50,257 ಕೋಟಿ. ಇದೇ ಅವಧಿಯಲ್ಲಿ ಉತ್ತರಪ್ರದೇಶ ಕೇವಲ ರೂ. 34,720 ಕೋಟಿ ತೆರಿಗೆ ತುಂಬಿ ಕೇಂದ್ರದಿಂದ ರೂ.1,15,705 ಕೋಟಿ ಹಿಂದಕ್ಕೆ ಪಡೆದಿದೆ. ಅಂದರೆ ರಾಜ್ಯದಿಂದ ಕೇಂದ್ರಕ್ಕೆ ಹೋಗುವ ಪ್ರತಿ 1 ರೂಪಾಯಿ ತೆರಿಗೆಗೆ ಉತ್ತರ ಪ್ರದೇಶ ರೂ.1.79 ಹಿಂದಕ್ಕೆ ಪಡೆದರೆ ಕರ್ನಾಟಕ ಕೇವಲ 47 ಪೈಸೆ ಹಿಂದಕ್ಕೆ ಪಡೆಯುತ್ತಿದೆ.

2017-18ರಲ್ಲಿ ಕೇಂದ್ರದ ಬಜೆಟ್ ಮೊತ್ತ ರೂ.24.42 ಲಕ್ಷಕೋಟಿ ಇದ್ದಾಗ ಕರ್ನಾಟಕ ರೂ. 51,977 ಕೋಟಿಯಷ್ಟು ಕೇಂದ್ರದ ತೆರಿಗೆ ಮತ್ತು ಗ್ರಾಂಟ್ಸ್‌ಗಳಲ್ಲಿ ಪಾಲು ಪಡೆದಿತ್ತು. 2023-24ರಲ್ಲಿ ಕೇಂದ್ರದ ಬಜೆಟ್ ಮೊತ್ತ ದ್ವಿಗುಣಗೊಂಡಿದೆ; ರೂ.45.03 ಲಕ್ಷಕೋಟಿಗೆ ಏರಿದೆ. ಕೇಂದ್ರದ ತೆರಿಗೆ ಮತ್ತು ಗ್ರಾಂಟ್ಸ್‌ಗಳಲ್ಲಿ ಕರ್ನಾಟಕದ ಪಾಲು ದ್ವಿಗುಣಗೊಳ್ಳಬೇಕಿತ್ತು. ಆದರೆ ದ್ವಿಗುಣಗೊಳ್ಳುವ ಬದಲು ಕರ್ನಾಟಕದ ಪಾಲು ರೂ.50,257 ಕೋಟಿಗಳಿಗೆ ಕುಸಿದಿದೆ (ದಿ ಹಿಂದೂ, ಫೆಬ್ರವರಿ 22, 2023). ಉತ್ತರದ ಹಿಂದುಳಿದ ರಾಜ್ಯಗಳ ಬಜೆಟ್ ಕೊರತೆಯನ್ನು ತುಂಬಲು ತಮ್ಮ ರಾಜ್ಯಗಳ ತೆರಿಗೆ ಬಳಕೆಯಾಗುವುದರಿಂದ ತಮ್ಮ ಬಜೆಟ್ ಕೊರತೆಯನ್ನು ಸಾಲ ಮಾಡಿ ತುಂಬಿಸಿಕೊಳ್ಳುವ ಸ್ಥಿತಿ ದಕ್ಷಿಣದ ರಾಜ್ಯಗಳಿಗೆ ಬಂದಿದೆ. ಕರ್ನಾಟಕದ್ದೇ ಉದಾಹರಣೆ ನೋಡುವುದಾದರೆ 2018ರಲ್ಲಿ ರೂ.2.18 ಲಕ್ಷ ಕೋಟಿ ಇದ್ದ ಸಾಲ 2023ರ ವೇಳೆಗೆ ರೂ.5.4 ಲಕ್ಷ ಕೋಟಿಗೆ ಏರಿದೆ.

ಮತಕ್ಷೇತ್ರಗಳ ಮರುವಿಂಗಡನೆ

ಮೇಲಿನವುಗಳೊಂದಿಗೆ ಮತಕ್ಷೇತ್ರಗಳ ಮರು ವಿಂಗಡನೆ ನಮ್ಮ ಒಕ್ಕೂಟ ವ್ಯವಸ್ಥೆಗೆ ಬಹುದೊಡ್ಡ ಚ್ಯಾಲೆಂಜ್ ಒಡ್ಡಬಹುದು. ಸಂವಿಧಾನ ಪ್ರಕಾರ ಜನಸಂಖ್ಯೆಯ ಆಧಾರದಲ್ಲಿ ವಿಧಾನಸಭೆ ಮತ್ತು ಲೋಕಸಭೆ ಸೀಟುಗಳ ಮರುವಿಂಗಡನೆ ನಡೆಸಬೇಕು. ಅದರಂತೆ 1951, 61 ಮತ್ತು 71ರಲ್ಲಿ ನಡೆದಿದೆ. 1976ರಲ್ಲಿ ಸಂವಿಧಾನ ತಿದ್ದುಪಡಿ ಮಾಡಿ ಕ್ಷೇತ್ರಗಳ ಮರುವಿಂಗಡನೆಯನ್ನು 2001ಕ್ಕೆ ಮುಂದೂಡಲಾಯಿತು. ಇದಕ್ಕೆ ಕಾರಣ ಕೇಂದ್ರದ ಜನಸಂಖ್ಯೆ ನಿಯಂತ್ರಣ ನೀತಿಯನ್ನು ದಕ್ಷಿಣದ ರಾಜ್ಯಗಳು ಜಾರಿಗೊಳಿಸಿದಷ್ಟು ಪರಿಣಾಮಕಾರಿಯಾಗಿ ಉತ್ತರದ ಹಿಂದಿ ರಾಜ್ಯಗಳು ಜಾರಿಗೊಳಿಸಲಿಲ್ಲ. ಇದರಿಂದ ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನಗಳಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಇದೇ ಕಾರಣವನ್ನು ಮುಂದಿಟ್ಟು 2002ರಲ್ಲಿ ಎನ್‌ಡಿಎ ಸರಕಾರ ಕೂಡ ಕ್ಷೇತ್ರಗಳ ಮರುವಿಂಗಡನೆಯನ್ನು 2026ಕ್ಕೆ ಮುಂದೂಡಿದೆ. ಈಗಾಗಲೇ ಕ್ಷೇತ್ರಗಳ ಮರುವಿಂಗಡನೆ ಆಗದೆ 50 ವರ್ಷಗಳಾಗಿವೆ. ಜನಸಂಖ್ಯೆಯ ನೆಲೆಯಲ್ಲಿ ಮತಕ್ಷೇತ್ರಗಳ ಮರುವಿಂಗಡನೆ ನಡೆಯದಿರುವುದರಿಂದ ಕೆಲವು ರಾಜ್ಯಗಳಲ್ಲಿ ಪ್ರತಿ ಎಂಎಲ್‌ಎ ಕ್ಷೇತ್ರ 8-10 ಲಕ್ಷ ಜನರನ್ನು ಮತ್ತು ಎಂಪಿ ಕ್ಷೇತ್ರ 15-25 ಲಕ್ಷ ಜನರನ್ನು ಪ್ರತಿನಿಧಿಸುವ ಸ್ಥಿತಿ ಇದೆ. ಇದೇ ಸ್ಥಿತಿ ಹೆಚ್ಚು ದಿನ ಮುಂದುವರಿಯುವುದು ಕಷ್ಟ. ಆದುದರಿಂದ 2026ರಲ್ಲಿ ಕ್ಷೇತ್ರಗಳ ಮರುವಿಂಗಡನೆ ಮಾಡುವ ಅನಿವಾರ್ಯತೆ ಇದೆ.

2021ರ ಜನಸಂಖ್ಯೆ 5 ವರ್ಷ ಹಿಂದಿರುವುದರಿಂದ 2026ರ ಕ್ಷೇತ್ರಗಳ ಮರುವಿಂಗಡನೆ 2031ಕ್ಕೆ ಹೋಗಬಹುದು. ಕೆಲವು ಅಧ್ಯಯನಗಳ ಪ್ರಕಾರ ಒಂದು ವೇಳೆ 2031ರ ಜನಸಂಖ್ಯೆ ಪ್ರಕಾರ ಮರುವಿಂಗಡನೆ ನಡೆದರೆ ಉತ್ತರ ಪ್ರದೇಶದಲ್ಲಿ ಈಗ ಇರುವ 80 ಎಂಪಿ ಸೀಟುಗಳು 143ಕ್ಕೆ, ಬಿಹಾರದಲ್ಲಿರುವ 40 ಸೀಟುಗಳು 79ಕ್ಕೆ, ಮಧ್ಯಪ್ರದೇಶದಲ್ಲಿರುವ 29 ಸೀಟುಗಳು 52ಕ್ಕೆ, ರಾಜಸ್ಥಾನದಲ್ಲಿರುವ 25 ಸೀಟುಗಳು 50ಕ್ಕೆ ಏರುವ ಸಾಧ್ಯತೆಗಳಿವೆ ಮತ್ತು ಈ 4 ರಾಜ್ಯಗಳಲ್ಲಿ ಒಟ್ಟು 324 ಸೀಟುಗಳಾಗಬಹುದು. ಇದೇ ಸಂದರ್ಭದಲ್ಲಿ ದಕ್ಷಿಣದ ರಾಜ್ಯಗಳಲ್ಲಿ ವಿಶೇಷ ಏರಿಕೆ ಆಗುವುದಿಲ್ಲ. ಆಂಧ್ರಪ್ರದೇಶ+ತೆಲಂಗಾಣಗಳಲ್ಲಿ ಈಗ ಇರುವ 42 ಸೀಟುಗಳು 54ಕ್ಕೆ, ತಮಿಳುನಾಡಿನಲ್ಲಿರುವ 39 ಸೀಟುಗಳು 49ಕ್ಕೆ, ಕೇರಳದಲ್ಲಿರುವ 20 ಸೀಟುಗಳು ಮುಂದುವರಿಯಲಿವೆ, ಒರಿಸ್ಸಾದಲ್ಲಿರುವ 21ಕ್ಕೆ ಸೀಟುಗಳು 26ಕ್ಕೆ ಏರುವ ಸಾಧ್ಯತೆಗಳಿವೆ ಮತ್ತು ಒಟ್ಟು ಈ ರಾಜ್ಯಗಳಲ್ಲಿ 149 ಸೀಟುಗಳಾಗಬಹುದು. ಹೀಗೆ ಉತ್ತರದ ಹಿಂದಿ ರಾಜ್ಯಗಳಲ್ಲಿ 150 ಸೀಟುಗಳ ಹೆಚ್ಚಾದಾಗ ದಕ್ಷಿಣದ ಹಿಂದಿಯೇತರ ರಾಜ್ಯಗಳಲ್ಲಿ ಕೇವಲ 27 ಸೀಟುಗಳು ಹೆಚ್ಚಾಗಬಹುದು. ಇಂತಹ ಒಂದು ರಾಜಕೀಯ ಸ್ಥಿತಿ ಬಿಜೆಪಿಗೆ ಹೆಚ್ಚು ಅನುಕೂಲಕರವಾಗಬಹುದು. ಏಕೆಂದರೆ ಬಿಜೆಪಿ ಮಾತ್ರ ಒಂದು ದೇಶ, ಒಂದು ಭಾಷೆ, ಒಂದು ಧರ್ಮ, ಒಂದು ಮಾರುಕಟ್ಟೆ ಹೀಗೆ ಹಲವು ಒಂದುಗಳ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು. ಹಿಂದಿಗೆ ಮಹತ್ವ ನೀಡುವುದರಿಂದ ಇಂದು ಅಲ್ಪಸಂಖ್ಯಾತರನ್ನು ಹೊರಗಿಟ್ಟು ಅಧಿಕಾರಕ್ಕೆ ಏರುವ ಬಿಜೆಪಿ ಮುಂದೊಂದು ದಿನ ಹಿಂದಿಯೇತರರನ್ನು ಹೊರಗಿಟ್ಟು ಕೂಡ ಅಧಿಕಾರಕ್ಕೆ ಏರಬಹುದು. ಆದರೆ ದೇಶದ ಅದರಲ್ಲೂ ಹಿಂದಿಯೇತರ ರಾಜ್ಯಗಳ ಭವಿಷ್ಯದ ದೃಷ್ಟಿಯಿಂದ ಇವೆಲ್ಲವೂ ಉತ್ತಮ ಬೆಳವಣಿಗೆಗಳಲ್ಲ.

ಸಮಾರೋಪ

ಚಾರಿತ್ರಿಕ ಕಾರಣಗಳಿಂದ-ಭಾರತ ಪಾಕಿಸ್ತಾನ ವಿಭಜನೆ, ಸಂಸ್ಥಾನಗಳ ವಿಲೀನದ ಸಮಸ್ಯೆ, ಪ್ರತ್ಯೇಕತೆಯ ಹೋರಾಟಗಳು-ನಮ್ಮ ಸಂವಿಧಾನವೇ ಬಲವಾದ ಕೇಂದ್ರದ ಪರ ಇದೆ. ರಾಜ್ಯಗಳನ್ನು ಕೇಂದ್ರಾಡಳಿತದ ವಶ ಒಪ್ಪಿಸುವ ಹಲವು ಅಸ್ತ್ರಗಳು ಕೇಂದ್ರದ ವಶ ಇವೆ. ರಾಜ್ಯದ ಪಟ್ಟಿಯಲ್ಲಿರುವ ವಿಷಯಗಳನ್ನು ಕೇಂದ್ರದ ಪಟ್ಟಿಗೆ ಸೇರಿಸುವ ಮತ್ತು ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಮೇಲೂ ಕೇಂದ್ರ ಕಾನೂನುಗಳನ್ನು ಮಾಡುವ ಪರಿಪಾಠವಿದೆ. ಮೂರನೇ ಒಂದರಷ್ಟು ಅಭಿವೃದ್ಧಿ ಜವಾಬ್ದಾರಿ ಇರುವ ಕೇಂದ್ರಕ್ಕೆ ಮೂರನೇ ಎರಡರಷ್ಟು ತೆರಿಗೆ ಸಂಗ್ರಹ ವಿಧಿಸಿ ಸಂಗ್ರಹ ಮಾಡುವ ಅಧಿಕಾರ ಸಂವಿಧಾನ ನೀಡಿದೆ. ಸಂವಿಧಾನವೇ ಬಲವಾದ ಕೇಂದ್ರದ ಪರ ಇರುವ ದೇಶದಲ್ಲಿ ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಮಾರುಕಟ್ಟೆ, ಒಂದು ತೆರಿಗೆಗಳನ್ನು ಪ್ರತಿಪಾದಿಸುವ ಪಕ್ಷ ಅಧಿಕಾರ ನಡೆಸಿದರೆ ಏನಾಗಬಹುದೆನ್ನುವುದರ ಒಂದು ಪಕ್ಷಿನೋಟವನ್ನು ಮೇಲಿನ ಬೆಳವಣಿಗೆಗಳಲ್ಲಿ ನೋಡಿದ್ದೇವೆ. ಇದೇ ಪಕ್ಷ ಇನ್ನು ಕೆಲವು ಅವಧಿ ಕೇಂದ್ರದಲ್ಲಿ ಅಧಿಕಾರ ನಡೆಸಿದರೆ ರಾಜ್ಯಗಳು ಅದರಲ್ಲೂ ಹಿಂದಿಯೇತರ ರಾಜ್ಯಗಳು ಗಂಭೀರ ಸಮಸ್ಯೆ ಎದುರಿಸಲಿವೆ.

ಹತ್ತು ವರ್ಷಗಳ ತಮ್ಮ ಆಡಳಿತದಲ್ಲಿ ದೇಶ ಹಾಗಾಗಿದೆ, ಹೀಗಾಗಿದೆ ಎಂದು ಪ್ರಧಾನಿ ಮೋದಿ, ಬಿಜೆಪಿ, ಮತ್ತವರ ಮಂದಿಮಾಗದರು ದೇಶ ವಿದೇಶಗಳಲ್ಲಿ ಕೊಚ್ಚಿಕೊಳ್ಳುತ್ತಿರುವ ಸಂದರ್ಭದಲ್ಲಿ, 2024ನೇ ವರ್ಷಕ್ಕೆ ಪ್ರಕಟಿಸಿದ ಜಾಗತಿಕ ಹಸಿವಿನ ಸೂಚ್ಯಂಕ (ಗ್ಲೋಬಲ್ ಹಂಗರ್ ಇಂಡೆಕ್ಸ್–ಜಿ.ಎಚ್.ಐ.) ವು ಅದೆಲ್ಲವೂ ಮಾತಿನ ಆಡಂಬರ ಎಂಬುದನ್ನು ತೋರಿಸಿದೆ. ಒಟ್ಟು 127 ದೇಶಗಳಲ್ಲಿ ಭಾರತ 105ನೇ ಸ್ಥಾನದಲ್ಲಿ ನಿಂತಿದೆ. ನೆರೆಯ ನೇಪಾಳ, ಶ್ರೀಲಂಕಾ, ಮ್ಯಾನ್ಮಾರ್, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಕ್ಕಿಂತ ಭಾರತ ಹಿಂದುಳಿದಿದೆ.

ಜಾಗತಿಕ ಹಸಿವಿನ ಸೂಚ್ಯಂಕ: 127 ದೇಶಗಳಲ್ಲಿ 105ನೇ ಸ್ಥಾನದಲ್ಲಿ ಭಾರತ

ಸಿ.ಸಿದ್ದಯ್ಯ

2024ನೇ ವರ್ಷಕ್ಕೆ ಜಾಗತಿಕ ಹಸಿವಿನ ಸೂಚ್ಯಂಕ (ಗ್ಲೋಬಲ್ ಹಂಗರ್ ಇಂಡೆಕ್ಸ್–GHI) ಪ್ರಕಟವಾಗಿದೆ. ಒಟ್ಟು 127 ದೇಶಗಳ ಪಟ್ಟಿಯಲ್ಲಿ ಭಾರತ 105ನೇ ಸ್ಥಾನದಲ್ಲಿ ನಿಂತಿದೆ. ಕನ್ಸರ್ನ್ ವರ್ಲ್ಡ್‌ವೈಡ್ ಮತ್ತು ವೆಲ್ತ್ ಹಂಗರ್ ಲೈಫ್ ಸಂಸ್ಥೆಗಳು ಜಂಟಿಯಾಗಿ ಜಿ.ಎಚ್.ಐ. ವಿವರಗಳನ್ನು ವಾರ್ಷಿಕವಾಗಿ ಪ್ರಕಟಿಸುತ್ತವೆ. ಪ್ರಸ್ತುತ ವರದಿಯಲ್ಲಿ ಭಾರತದ ಅಂಕ ಶೇ. 27.3 ರಷ್ಟಿದೆ. ಇದು 2016ರಲ್ಲಿ 29.3 ಪ್ರತಿಶತದಿಂದ ಸ್ವಲ್ಪ ಸುಧಾರಣೆಯಾಗಿದೆ ಎಂದು ಗಮನಿಸಬೇಕು. ಹಸಿವಿನ ವಿಶ್ಲೇಷಣೆಯ ವಿಷಯದಲ್ಲಿ ಭಾರತವನ್ನು "ಗಂಭೀರ" ಎಂದು ವರ್ಗೀಕರಿಸಲಾಗಿದೆ. ನೆರೆಯ ದೇಶಗಳಿಗಿಂತ ಹಿಂದುಳಿದಿದೆ. ವಿಶೇಷವಾಗಿ "ಮಧ್ಯಮ" ವರ್ಗಕ್ಕೆ ಸೇರುವ ಬಾಂಗ್ಲಾದೇಶ, ನೇಪಾಳ ಮತ್ತು ಶ್ರೀಲಂಕಾದಂತಹ ದಕ್ಷಿಣ ಏಷ್ಯಾದ ನೆರೆಹೊರೆಗಳಿಗೆ ಹೋಲಿಸಿದರೆ ಭಾರತ ಹಿಂದುಳಿದಿದೆ. ಮ್ಯಾನ್ಮಾರ್, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಕ್ಕಿಂತ ಭಾರತ ಹಿಂದುಳಿದಿದೆ. ಸ್ವಾತಂತ್ರ್ಯ ಬಂದು ಏಳೂವರೆ ದಶಕ ಕಳೆದರೂ ಜನರ ಹಸಿವಿನ ಕೂಗು ಇನ್ನೂ ಉರಿಯುತ್ತಿದೆ ಎಂಬುದನ್ನು ಇದು ತೋರಿಸುತ್ತದೆ.

ಸೂಚ್ಯಂಕ ನಾಲ್ಕು ವಿಶಾಲವಾದ ನಿಯತಾಂಕಗಳನ್ನು ಆಧರಿಸಿದೆ. ಅಂದರೆ, ಮಕ್ಕಳ ಕುಂಠಿತ (ಅವರ ವಯಸ್ಸಿಗೆ ಅನುಗುಣವಾಗಿ ಕಡಿಮೆ ಎತ್ತರವಿರುವ ಐದು ವರ್ಷದೊಳಗಿನ ಮಕ್ಕಳ ಪಾಲು ದೀರ್ಘಕಾಲದ ಅಪೌಷ್ಟಿಕತೆಯನ್ನು ಪ್ರತಿಬಿಂಬಿಸುತ್ತದೆ), ಅಪೌಷ್ಟಿಕತೆ (ಸಾಕಷ್ಟು ಕ್ಯಾಲೋರಿ ಸೇವನೆಯೊಂದಿಗೆ ಜನಸಂಖ್ಯೆಯ ಪಾಲು), ಮಕ್ಕಳ ಕ್ಷೀಣತೆ (ಎತ್ತರಕ್ಕೆ ಕಡಿಮೆ ತೂಕ) ಮತ್ತು ಮಕ್ಕಳ ಮರಣ (ಅವರ ಐದನೇ ಹುಟ್ಟುಹಬ್ಬದ ಮೊದಲು ಸಾಯುವ ಮಕ್ಕಳ ಪಾಲು). ವರದಿಯು ಜನಸಂಖ್ಯೆಯ ಶೇ. 13.7ರಷ್ಟು ಅಪೌಷ್ಟಿಕತೆಯನ್ನು ಹೊಂದಿದೆ, ಶೇ. 35.5ರಷ್ಟು ಮಕ್ಕಳು ಕುಂಠಿತರಾಗಿದ್ದಾರೆ, ಶೇ. 18.7 ಮಕ್ಕಳು ವ್ಯರ್ಥವಾಗಿದ್ದಾರೆ. ಒಂದು ದೇಶವು ಶೇ. 15ಕ್ಕಿಂತ ಹೆಚ್ಚು ಮಕ್ಕಳನ್ನು 'ವೇಸ್ಟ್' ಹೊಂದಿದ್ದರೆ, ಅದನ್ನು ವರದಿಯಲ್ಲಿ 'ಅತ್ಯಂತ ಉನ್ನತ' ಮಟ್ಟದ ಕಾಳಜಿ ಎಂದು ಗುರುತಿಸಲಾಗುತ್ತದೆ. ಮತ್ತು ಶೇ. 2.9 ಮಕ್ಕಳು ತಮ್ಮ ಐದನೇ ಹುಟ್ಟುಹಬ್ಬದ ಮೊದಲು ಸಾಯುತ್ತಿದ್ದಾರೆ. ಸಮೀಕ್ಷೆಯ ಪ್ರಕಾರ, ಭಾರತವು ಜಾಗತಿಕವಾಗಿ ಅತಿ ಹೆಚ್ಚು ಮಕ್ಕಳ ವ್ಯರ್ಥ ಪ್ರಮಾಣವನ್ನು ಹೊಂದಿದೆ.

ಭಾರತದಲ್ಲಿ ಅಪೌಷ್ಟಿಕತೆಗೆ ಬಾಧಿತರಾಗಿರುವ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಿದೆ ಎಂಬುದನ್ನು ಜಿ.ಎಚ್.ಐ. ವರದಿ ತೋರಿಸಿದೆ. ಎಲ್ಲಾ ರೋಗಗಳಿಗೂ ಅಪೌಷ್ಟಿಕತೆಯೇ ಕಾರಣ ಎಂದು ಆರೋಗ್ಯ ವಿಜ್ಞಾನಗಳು ಒತ್ತಿ ಹೇಳುತ್ತವೆ. ಐದು ವರ್ಷದೊಳಗಿನ ಶೇ. 2.9ರಷ್ಟು ಮಕ್ಕಳು ಸಾವನ್ನಪ್ಪುತ್ತಿರುವುದು ಆತಂಕದ ವಿಷಯವಾಗಿದೆ. ಶೇ. 13.7ರಷ್ಟು ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ನಮ್ಮ ದೇಶದಲ್ಲಿ ಎತ್ತರಕ್ಕೆ ಕಡಿಮೆ ತೂಕದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಮಕ್ಕಳಲ್ಲಿ ಶೇ. 35.5ರಷ್ಟು ಜನರು ಖಿನ್ನತೆಯಿಂದ ಬಳಲುತ್ತಿದ್ದಾರೆ. ಪರಿಸ್ಥಿತಿ ಹೀಗಾದರೆ ಇಂದಿನ ಮಕ್ಕಳು ಭಾರತದ ನಾಳಿನ ಪ್ರಜೆಗಳು ಹೇಗಾಗಬಹುದು?

ಆಹಾರ ಭದ್ರತಾ ಕಾಯಿದೆ

ಜಿ.ಎಚ್.ಐ. ನಲ್ಲಿರುವ ದೇಶಗಳ ಪಟ್ಟಿಯಲ್ಲಿ ಭಾರತ ಇಷ್ಟೊಂದು ಕೆಳಕ್ಕೆ ಬೀಳಲು ಸರ್ಕಾರಗಳ ವೈಫಲ್ಯವೇ ಕಾರಣ. ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬ ನಾಗರಿಕನಿಗೂ ಬದುಕುವ ಹಕ್ಕನ್ನು ನೀಡುತ್ತದೆ. ಆಹಾರ ನಾಗರಿಕರ ಮೂಲಭೂತ ಹಕ್ಕು. ಯೂನೈಟೆಡ್ ಪ್ರೋಗ್ರೆಸಿವ್ ಅಲಯನ್ಸ್–ಯುಪಿಎ (ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ 60 ಸಂಸದರ ಬಲವಿದ್ದ ಎಡಪಕ್ಷಗಳು, ಯುಪಿಎ–1ರ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಟ್ಟಿದ್ದವು) ಸರಕಾರ ಆಹಾರ ಭದ್ರತಾ ಕಾಯಿದೆ ತಂದಿತು. ಜನಸಂಖ್ಯೆಯ ಮೂರನೇ ಎರಡರಷ್ಟು ಜನರು ಆ ಕಾನೂನಿನ ಅಡಿಯಲ್ಲಿ ಬರುತ್ತಾರೆ. ಇದರಂತೆ ಪ್ರತಿ ವ್ಯಕ್ತಿಗೆ ಐದು ಕೆಜಿಯಂತೆ ಆಹಾರ ಧಾನ್ಯಗಳನ್ನು ಸಬ್ಸಿಡಿ ಮೇಲೆ ನೀಡಬೇಕು. ಈ ಕಾನೂನನ್ನು ರದ್ದುಗೊಳಿಸುವ ಪ್ರಯತ್ನವನ್ನು ಮೋದಿ ಸರಕಾರ ಮಾಡಿಲ್ಲವಾದರೂ, ಕೊರೊನಾ ಅವಧಿಯಲ್ಲಿ ಹೆಚ್ಚುವರಿಯಾಗಿ ನೀಡಲಾಗಿದ್ದ ಉಚಿತ ಅಕ್ಕಿ ಮತ್ತು ಗೋಧಿ, ಈ ಹಿಂದೆ ಇದ್ದ ಸಬ್ಸಿಡಿ ಆಹಾರ ಧಾನ್ಯಗಳನ್ನು ಬದಲಿಸಿದೆ. ರೈತರಿಂದ ಕನಿಷ್ಟ ಬೆಂಬಲ ಬೆಲೆ ಮೇಲೆ ಧಾನ್ಯಗಳ ಸಂಗ್ರಹವನ್ನು ಕಡಿಮೆ ಮಾಡಲಾಗಿದೆ. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ (FCI) ವನ್ನು ಕಿರುದುಗೊಳಿಸಲಾಗಿದೆ. ಕೇಂದ್ರೀಯ ಉಗ್ರಾಣವನ್ನು ನ್ಯಾಷನಲ್ ಮೊನಿಟೇಸನ್ ಪೈಪ್‌ಲೈನ್ (NMP)–ರಾಷ್ಟ್ರೀಯ ಹಣಗಳಿಕೆಯ ಕೊಳವೆ ಮಾರ್ಗ–ಯೋಜನೆಯಲ್ಲಿ ಇರಿಸಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಾಶದತ್ತ ಹೆಜ್ಜೆ

ಸಾರ್ವಜನಿಕ ವಿತರಣಾ ವ್ಯವಸ್ಥೆ ವಿಫಲವಾಗಿದೆ ಮಾತ್ರವಲ್ಲ, ಹಲವು ಕಠಿಣ ಷರತ್ತುಗಳನ್ನು ವಿಧಿಸುವ ಮೂಲಕ ಕೇಂದ್ರ ಸರ್ಕಾರವು ಅನೇಕ ಬಡ ಕುಟುಂಬಗಳನ್ನು ಪಡಿತರದಿಂದ ವಂಚಿತರನ್ನಾಗಿ ಮಾಡುತ್ತಿದೆ. ಬಡತನ ರೇಖೆಯನ್ನು (ಬಿಪಿಎಲ್) ಅವೈಜ್ಞಾನಿಕವಾಗಿ ನಿಗದಿಮಾಡುವ ಮೂಲಕವೂ ಬಡವರಿಂದ ಪಡಿತರ ಚೀಟಿ ಕಸಿದುಕೊಳ್ಳತೊಡಗಿದೆ. ಪಡಿತರ ಆಹಾರ ಧಾನ್ಯಗಳ ಬದಲಿಗೆ ನೇರ ನಗದು ಯೋಜನೆ ಸ್ಥಾಪಿಸಲು ಸರ್ಕಾರ ಮುಂದಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಹೆಸರಿನಲ್ಲಿ ಅಂಗನವಾಡಿ ಕೇಂದ್ರಗಳ ಖಾಸಗೀಕರಣ ಎತ್ತಿಹಿಡಿಯುವುದು, ಸಂವಿಧಾನ ನೀಡಿರುವ ಶಿಕ್ಷಣ ಹಕ್ಕು ಕಾಯಿದೆಯನ್ನು ಉಲ್ಲಂಘಿಸುವುದು, ಈ ರೀತಿ ಇನ್ನೂ ಅನೇಕ ಜನವಿರೋಧಿ ಸುಧಾರಣೆಗಳನ್ನು ಮಾಡಿದೆ. ಮತ್ತೊಂದಡೆ ಅಗತ್ಯ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿಕೆಯಾಗಿವೆ. ಇವೆಲ್ಲದರ ಪ್ರಭಾವವು ಹಸಿವಿನ ಸೂಚ್ಯಂಕದಲ್ಲಿ ಭಾರತವನ್ನು ಕೆಳಗಿನ ಸ್ಥಾನದಲ್ಲಿ ಭದ್ರಪಡಿಸಿದೆ.

ಹಸಿವು ನೀಗಿಸಲು ಭಾರತ ಸರ್ಕಾರ ಯೋಜಿಸಿರುವ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, ಪೋಶನ್ ಅಭಿಯಾನ (ರಾಷ್ಟ್ರೀಯ ಪೋಷಣೆ ಮಿಷನ್), ಪಿಎಂ ಗರೀಬ್ ಕಲ್ಯಾಣ್ ಯೋಜನೆ ಮತ್ತು ನೈಸರ್ಗಿಕ ಕೃಷಿಗಾಗಿ ರಾಷ್ಟ್ರೀಯ ಮಿಷನ್ ಈ ಎಲ್ಲಾ ಯೋಜನೆಗಳೂ ಕೇವಲ ಯೋಜನೆಗಳಾಗಷ್ಟೇ ಉಳಿದಿವೆ ವಿನಃ ಜನರ ಅಪೌಷ್ಠಕತೆಯನ್ನು ತೊಲಗಿಸಲು, ಜನರ ಹಸಿವನ್ನು ನೀಗಿಸಲು, ಜಾಗತಿಕ ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ಮೇಲೇರಲು ಸಹಕಾರಿಯಾಗುತ್ತಿಲ್ಲ ಎಂಬುದನ್ನು ಇಂದಿನ ಜಿ.ಎಚ್.ಐ. ಸೂಚಿಸುತ್ತದೆ.

2030ರ ವೇಳೆಗೆ ಜಗತ್ತನ್ನು ಹಸಿವು ಮುಕ್ತಗೊಳಿಸುವ ಗುರಿಯು ಸಾಕಾರಗೊಳ್ಳುವ ಲಕ್ಷಣಗಳನ್ನು ತೋರಿಸುತ್ತಿಲ್ಲ ಎಂದು GHI ವರದಿ ಸ್ಪಷ್ಟಪಡಿಸಿದೆ. ಆ ಅಭಿಪ್ರಾಯಕ್ಕೆ ಕಾರಣವೆಂದರೆ 127 ದೇಶಗಳಲ್ಲಿ 42 ದೇಶಗಳು ಇನ್ನೂ ತೀವ್ರ ಪರಿಣಾಮದ ವರ್ಗದಲ್ಲಿವೆ. ಹಸಿವು, ಹವಾಮಾನ ಬದಲಾವಣೆ, ಲಿಂಗ ಅಸಮಾನತೆ ಈ ಮೂರೂ ಒಂದಕ್ಕೊಂದು ತಳುಕು ಹಾಕಿಕೊಂಡಿದೆ ಎಂಬ ವರದಿಯ ಮೌಲ್ಯಮಾಪನ ಆಡಳಿತಗಾರರನ್ನು ಕಾಡುತ್ತಿದೆ. ತಾರತಮ್ಯದ ನಿಯಮಗಳು ನಮ್ಮ ದೇಶದಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಂದ ಆಹಾರ ಭದ್ರತೆಯನ್ನು ದೂರ ಮಾಡುತ್ತಿದೆ.



ನರೇಗಾ ಯೋಜನೆಗೆ ಕಡಿತವಾಗುತ್ತಿರುವ ಬಜೆಟ್ ಹಂಚಿಕೆ

ಗ್ರಾಮೀಣ ಜನರ ಹಸಿವು ನೀಗಿಸಲು ತಂದ ಮತ್ತೊಂದು ಯೋಜನೆ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'. ಈ ಯೋಜನೆ ಮೂಲಕ ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಕಾಯ್ದೆಯಡಿ ವರ್ಷಕ್ಕೆ 100 ದಿನಗಳ ಕೆಲಸ ಮತ್ತು ಕನಿಷ್ಠ ಕೂಲಿ ನೀಡಬೇಕು. ಈ ಕೆಲಸದ ದಿನಗಳು ಸಾಕಾಗದಿದ್ದರೂ ಇದು ಕೋಟ್ಯಂತರ ಜನರ ಜೀವನಾಡಿಯಾಗಿದೆ. ದೇಶದಲ್ಲಿ ಬೇರೆ ಯಾವುದೇ ಉದ್ಯೋಗವಿಲ್ಲದಿರುವಾಗ ಗಳಿಸಿದ ಅತ್ಯಲ್ಪ ವೇತನವು ಅವರಿಗೆ ಬಹಳ ಮೌಲ್ಯಯುತವಾಗಿದೆ. ಕೇಂದ್ರ ಸರ್ಕಾರದ ಬಜೆಟ್ ಹಂಚಿಕೆಯಲ್ಲಿ ತೀವ್ರ ಕಡಿತ ಮಾಡುತ್ತಿದೆ. ನರೇಗಾ ಯೋಜನೆಯನ್ನೂ ಕ್ರಮೇಣ ಇಲ್ಲವಾಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಸಾಲದ ಸುಳಿಯಲ್ಲಿ ಮಹಿಳೆಯರು

ಕ್ಷೀಣಿಸುತ್ತಿರುವ ಜೀವನೋಪಾಯ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚಗಳು ಹೆಚ್ಚಿನ ಬಡ್ಡಿದರದಲ್ಲಿ ಕಿರುಬಂಡವಾಳ ಸಂಸ್ಥೆಗಳಿಂದ ಸಾಲ ಪಡೆಯಲು ಮಹಿಳೆಯರನ್ನು ತಳ್ಳುತ್ತಿವೆ. ಕೇಂದ್ರ ಸರ್ಕಾರದ ಹಲವು ಯೋಜನೆಗಳಿಗೆ ಸ್ವಸಹಾಯ ಗುಂಪುಗಳ ರಚನೆಯ ಅಗತ್ಯವಿದೆ. ಆದರೆ, ಇವುಗಳಲ್ಲಿ ಖಾಸಗಿ ಹಣಕಾಸು ಸಂಸ್ಥೆಗಳು ಮತ್ತು ಕಿರುಬಂಡವಾಳ ಸಂಸ್ಥೆಗಳು ಸುಲಭವಾಗಿ ನುಸುಳುತ್ತವೆ. ಭಾರತೀಯ ರಿಸರ್ವ್ ಬ್ಯಾಂಕ್ ತಂದ ನೀತಿ ಬದಲಾವಣೆಗಳು ಇದಕ್ಕೆ ಅನುಕೂಲ ಮಾಡಿಕೊಟ್ಟಿವೆ. ಮಹಿಳೆಯರ ಮೇಲಿನ ಸಾಲಗಾರರ ಕಿರುಕುಳ ಹೆಚ್ಚಾಗಿದೆ. ಪಡೆದ ಸಾಲ ತೀರಿಸಲಾಗದೆ ಹಲವರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಇದನ್ನು ನಿವಾರಿಸುವುದು ಹೇಗೆ?

ಅನುಮಾನ ಸಹಜ. ಸರ್ಕಾರಗಳ ನಿರ್ಲಕ್ಷ್ಯ, ಅಸ್ಪಷ್ಟ ರಾಷ್ಟ್ರೀಯ ನೀತಿಗಳು, ಭ್ರಷ್ಟಾಚಾರ ಇವುಗಳಿಂದಾಗಿ ದೇಶದಲ್ಲಿ ಬಡತನ, ಅನಕ್ಷರತೆ ಮತ್ತು ಇತರ ಸಮಸ್ಯೆಗಳು ಹೆಚ್ಚಾಗಲು ಕಾರಣವಾಗುತ್ತಿದೆ. ಹೆಚ್ಚಿನ ಜನಸಂಖ್ಯೆಯು ಸಮರ್ಪಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸದ ಕಾರಣ ಈ ಸಮಸ್ಯೆ ಮತ್ತಷ್ಟು ಉದ್ಭವಿಸುತ್ತಿದೆ. ಬರಗಾಲ, ರೋಗ, ಪರಿಸರ ಮಾಲಿನ್ಯ, ಸಾಂಪ್ರದಾಯಿಕ ಕೃಷಿ ವಿಧಾನಗಳು, ವಿತರಣೆಯಲ್ಲಿನ ದೋಷಗಳು, ಮಾರುಕಟ್ಟೆಗಳ ಲಭ್ಯತೆ, ಸಾರಿಗೆ ಮತ್ತು ಸಾಮಾಜಿಕ ಸಮಸ್ಯೆಗಳಂತಹ ಸಮಸ್ಯೆಗಳು ಆಹಾರದ ಕೊರತೆಗೆ ಕಾರಣಗಳಾಗಿವೆ. ಸರ್ಕಾರದ ನವ ಉದಾರವಾದಿ ನೀತಿಗಳಿಂದಾಗಿ ಆಹಾರ ಭದ್ರತೆ ಉಳಿಯುತ್ತದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ, ಆಧುನಿಕ ಕೃಷಿ ಪದ್ಧತಿಗಳಿಗೆ ಬೆಂಬಲ, ಸಣ್ಣ, ಅತಿ ಸಣ್ಣ ರೈತರಿಗೆ ಕೃಷಿ ಬಂಡವಾಳವನ್ನು ಸಕಾಲದಲ್ಲಿ ಒದಗಿಸುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು ಆಹಾರದ ಕೊರತೆಯನ್ನು ಕಡಿಮೆ ಮಾಡುತ್ತದೆ.

ಹಸಿವಾದಾಗ ಹೊಟ್ಟೆ ತುಂಬಿಸಿಕೊಳ್ಳಲು ಆಹಾರ ಸೇವಿಸುವುದೊಂದೇ ಆರೋಗ್ಯಕ್ಕೆ ಪರಿಹಾರವಲ್ಲ, ನಾವು ಸೇವಿಸುವ ಆಹಾರವು ಸಮತೋಲಿತ ಪೋಷಕಾಂಶಗಳಿಂದ ಕೂಡಿರಬೇಕು ಎಂಬುದು ಅತ್ಯಂತ ಮುಖ್ಯವಾದ ವಿಷಯ ಎಂದು ಅರ್ಥಮಾಡಿಕೊಳ್ಳಬೇಕು. ಹಸಿವಿನಿಂದ ಕಂಗೆಡದ, ಸಮೃದ್ಧ ಭಾರತ ನಿರ್ಮಾಣದ ಗುರಿಯೊಂದಿಗೆ ಆಡಳಿತಗಾರರು ಮುನ್ನಡೆಯಬೇಕು. ಜನರನ್ನು ಅದರಲ್ಲಿ ಭಾಗಿಗಳನ್ನಾಗಿ ಮಾಡಬೇಕು.

50ನೇ ಸಿಜೆಐ–ದೈವಪ್ರೇರಣೆ, ಚರಿತ್ರೆಯಲ್ಲಿ ನೆನಪು ಇತ್ಯಾದಿ......

ದೇಶದ ಸರ್ವೋಚ್ಚ ನ್ಯಾಯಾಲಯದ 50ನೇ ಮುಖ್ಯ ನ್ಯಾಯಾಧೀಶರು (ಸಿಜೆಐ) ಇತ್ತೀಚೆಗೆ ಬಹಳ ಸುದ್ದಿಯಲ್ಲಿದ್ದಾರೆ. ಈ ವಾರ ಅವರು ನಿವೃತ್ತರಾಗುತ್ತಿದ್ದಾರೆ ಎಂಬ ಕಾರಣಕ್ಕೆ ಇರಬಹುದು ಎಂದು ಹಲವರ ಊಹೆ.

ಈ ಸುದ್ದಿಗಳಲ್ಲಿ ಬಹುಮುಖ್ಯವಾದದ್ದು ಅಕ್ಟೋಬರ್ 21ರಂದು ಪ್ರಕಟವಾದ ಸುದ್ದಿ. ಮಹಾರಾಷ್ಟ್ರದಲ್ಲಿನ ತಮ್ಮ ಹುಟೂರಿನಲ್ಲಿ ಮಾತಾಡುತ್ತ ಅವರು ಒಂದು ಮಹತ್ವಪೂರ್ಣ 'ರಹಸ್ಯ'ವನ್ನು ಬಯಲು ಮಾಡಿದರು!

ನಮಗೆಲ್ಲರಿಗೂ ತಿಳಿದಿರುವಂತೆ, 5 ವರ್ಷಗಳ ಹಿಂದೆ ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಪೀಠ ಬಾಬ್ರಿ ಮಸೀದಿ/ರಾಮಜನ್ಮಭೂಮಿ ಕುರಿತಂತೆ ದಶಕಗಳ ವ್ಯಾಜವನ್ನು ಅಂತ್ಯಗೊಳಿಸಿತು. ಈ ತೀರ್ಪಿನ ವಿಶೇಷವೆಂದರೆ ಇದು ಸರ್ವಾನುಮತದ ತೀರ್ಪು ಎಂದು ಹೇಳಲಾಗಿತ್ತು, ಆದರೆ ಆ ಐವರಲ್ಲಿ ಯಾರೂ ಇದಕ್ಕೆ ಸಹಿ ಮಾಡಿರಲಿಲ್ಲ. ಅಂದರೆ ಅದನ್ನು ಬರೆದವರು ಯಾರು ಎಂದು ಗೊತ್ತಾಗಿರಲಿಲ್ಲ. ಸುಪ್ರಿಂ ಕೋರ್ಟಿನ ಏಳು ದಶಕಗಳ ಇತ್ತಿಹಾಸದಲ್ಲೇ ಬಹುಶಃ ಇದು ಮೊದಲ ಬಾರಿಗೆ ಸಂಭವಿಸಿತ್ತು ಎಂದು ಆಗ ಮತ್ತು ನಂತರವೂ ವಿಶ್ಲೇಷಕರು ಹೇಳಿದ್ದಾರೆ, ಹೇಳುತ್ತಿದ್ದಾರೆ.

ಮೇಲೆ ಹೇಳಿದ ಅಕ್ಟೋಬರ್ 21ರ ಸುದ್ದಿಯ ಪ್ರಕಾರ ಆ ಐವರು ನ್ಯಾಯಾಧೀಶರಲ್ಲಿ ಒಬ್ಬರಾದ ಈಗಿನ ಸಿಜೆಐ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಈ ಬಗ್ಗೆ ಹೀಗೆ ಹೇಳಿದರು: "ಕೆಲವೊಮ್ಮೆ ನಮ್ಮೆದುರು ಕೆಲವು ಪ್ರಕರಣಗಳು ಬರುತ್ತವೆ, ಆ ಬಗ್ಗೆ ನಾವು ಒಂದು ಪರಿಹಾರಕ್ಕೆ ಬರುವುದಿಲ್ಲ. ಅಯೋಧ್ಯೆಯ ವಿಷಯದಲ್ಲಿ ಸುಮಾರಾಗಿ ಇಂತದ್ದೇ ನಡೆಯಿತು. ಅದು ಮೂರು ತಿಂಗಳಿಂದ ನನ್ನ ಮುಂದಿತ್ತು. ನಾನು ದೈವದ ಮುಂದೆ ಕೂತು, ಆತ ಒಂದು ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ ಎಂದು ಹೇಳಿದೆ" ಇದೇ ದಾಟಿಯಲ್ಲಿ ಮುಂದುವರೆಯುತ್ತ ಅವರು ತಾನು ನಿಯಮಿತವಾಗಿ ಪ್ರಾರ್ಥನೆ ಮಾಡುತ್ತೇನೆ ಎನ್ನುತ್ತ "ನನ್ನನ್ನು ನಂಬಿ, ನಿಮಗೆ ವಿಶ್ವಾಸವಿದ್ದರೆ, ದೇವರು ಸದಾ ಒಂದು ದಾರಿ ಹುಡುಕುತ್ತಾನೆ" ಎಂದು ಹೇಳಿದರಂತೆ.

'ಅಪೌರುಷೇಯ' ತೀರ್ಪಿನ ವೈರುಧ್ಯ

ಅಂದರೆ ಅಯೋಧ್ಯಾ ತೀರ್ಪು ನ್ಯಾಯಪೀಠದ ಐವರು ನ್ಯಾಯಾಧೀಶರುಗಳದ್ದಲ್ಲ, ಅದು 'ಅಪೌರುಷೇಯ', ಅದನ್ನು ಪ್ರಕಟಪಡಿಸಿದ್ದು ಈಗಿನ ಸಿಜೆಐ ನಿಯಮಿತವಾಗಿ ಪ್ರಾರ್ಥಿಸುವ ದೈವ, ಅಥವ ದೇವರು. ಅವರು ಸೇರಿದಂತೆ ಐವರು ನ್ಯಾಯಾಧೀಶರು ಕೇವಲ ಮಾಧ್ಯಮಗಳಾಗಿದ್ದರು!

ಅದೇನೇ ಇರಲಿ, ಈ ತೀರ್ಪಿನಲ್ಲಿ ಹಲವು ವೈರುಧ್ಯಗಳನ್ನು ಕಾನೂನು ಪಂಡಿತರು ಆಗಲೇ ಕಂಡಿದ್ದರು. ಮುಖ್ಯವಾಗಿ 1949ರಲ್ಲಿ 'ರಾಮಲಲ್ಲಾ' ಮೂರ್ತಿಯನ್ನು ಗಾಢ ಕತ್ತಲು ಕವಿದಿದ್ದಾಗ ಗುಪ್ತವಾಗಿ ಮಸೀದಿಯೊಳಗೆ ತಂದಿಟ್ಟದ್ದು ಈ ನ್ಯಾಯಾಧೀಶರುಗಳ ಪ್ರಕಾರವೂ ಒಂದು ಅಪರಾಧ. ಅದೇ ರೀತಿಯಲ್ಲಿ ಡಿಸೆಂಬರ್ 6, 1992ರಂದು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ್ದು ಕೂಡ ಒಂದು ಕ್ರಿಮಿನಲ್ ಕೃತ್ಯ ಎಂದೂ ತೀರ್ಪಿನಲ್ಲಿ ಹೇಳಲಾಗಿದೆ.

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ: ಒಂದು, ಈಗಿನ ಸಿಜೆಐ ಸೇರಿದಂತೆ ಈ ನ್ಯಾಯಪೀಠದ ಮುಂದಿದ್ದ ವ್ಯಾಜ್ಯ ಬಾಬ್ರಿ ಮಸೀದಿ/ರಾಮಜನ್ಮಭೂಮಿ ವಿವಾದದಲ್ಲಿದ್ದ ಭೂಮಿಯ ಒಡೆತನ ಯಾರದ್ದು ಎಂಬುದು. ಆ ಒಡೆತನವನ್ನು ಆ ನ್ಯಾಯಪೀಠದ ಪ್ರಕಾರವೇ ಎರಡು ಕ್ರಿಮಿನಲ್ ಕೃತ್ಯಗಳನ್ನು ಮಾಡಿರುವವರಿಗೇ ಕೊಡಬೇಕು ಎಂಬುದು ಆ ನ್ಯಾಯಪೀಠಕ್ಕೆ ಆದ ದೈವಪ್ರೇರಣೆಯೇ ಎಂದು ಹಲವರು ವಿಶ್ಲೇಷಕರು ಟಿಪ್ಪಣಿ ಮಾಡಿದ್ದಾರೆ.

ಎರಡನೆಯ ಪ್ರಶ್ನೆ–ಸಂವಿಧಾನದ ಅಡಿಯಲ್ಲಿ ಅಧಿಕಾರ ವಹಿಸಿಕೊಂಡ ನ್ಯಾಯಾಧೀಶರುಗಳು ತಮ್ಮ ಮುಂದಿರುವ ಪ್ರಶ್ನೆಗಳಿಗೆ ಸಂವಿಧಾನದ ಚೌಕಟ್ಟಿನಲ್ಲಿ ಪರಿಹಾರ ಸೂಚಿಸುವ ಬದಲು ಅದಕ್ಕೆ ಮೀರಿದ ಮೂಲದಿಂದ 'ಪ್ರೇರಣೆ' ಪಡೆಯಬಹುದೇ? ಇದು, ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ರವರ ಪತ್ರಿಕಾ ಕಾರ್ಯದರ್ಶಿ ಎಸ್.ಎನ್. ಸಾಹು (ಲೀಫ್ಲೆಟ್, ಅಕ್ಟೋಬರ್ 25) ಹೇಳಿರುವಂತೆ 'ಸಂವಿಧಾನಿಕ ನೈತಿಕತೆ' ಕೊರತೆಯನ್ನು ಬಿಂಬಿಸುವ ಒಂದು ಆತಂಕಕಾರಿ ಸಂಗತಿ.

'ದೈವಪ್ರೇರಣೆ'ಯ ನಿಜಹೂರಣ

ಇಷ್ಟೇ ಅಲ್ಲ, ಅದೇ ಅಯೋಧ್ಯೆ ಕುರಿತ ತೀರ್ಪಿನಲ್ಲಿ 1991ರಲ್ಲಿ ಸಂಸತ್ತು ಅಂಗೀಕರಿಸಿದ ಆರಾಧನೆಯ ಸ್ಥಳಗಳ (ಪ್ಲೇಸಸ್ ಆಫ್ ವರ್ಷಿಪ್) ಕಾಯ್ದೆ ಸಂವಿಧಾನದ ಮೂಲಭೂತ ಮೌಲ್ಯಗಳನ್ನು ರಕ್ಷಿಸುತ್ತದೆ ಮತ್ತು ಒದಗಿಸುತ್ತದೆ, ತಮ್ಮ ಆರಾಧನೆಯ ಸ್ಥಳಗಳನ್ನು ಉಳಿಸಿಕೊಳ್ಳಲಾಗುತ್ತದೆ, ಅವುಗಳ ಸ್ವರೂಪವನ್ನು ಬದಲಿಸಲಾಗುವುದಿಲ್ಲ ಎಂದು ಪ್ರತಿಯೊಂದು ಧಾರ್ಮಿಕ ಸಮುದಾಯಕ್ಕೆ ವಿಶ್ವಾಸವನ್ನು ನೀಡಿ, ಭೂತಕಾಲದ ಅನ್ಯಾಯಗಳನ್ನು ಶಮನಗೊಳಿಸಲು ಒಂದು ಸಂವಿಧಾನಿಕ ಆಧಾರವನ್ನು ಕೊಡುತ್ತದೆ ಎಂದು ಹೇಳಲಾಗಿತ್ತು. ಹಾಗಿದ್ದರೂ, ಈಗ ನ್ಯಾಯಮೂರ್ತಿ ಚಂದ್ರಚೂಡ್ ವಾರಣಾಸಿಯ ಜ್ಞಾನವಾಪಿ ಮಸೀದಿಯ ವಿವಾದವನ್ನು ಮತ್ತೆ ತೆರೆಯಲು ನೆರವಾಗುತ್ತಿರುವುದು ಏಕೆ ಎಂಬುದಕ್ಕೆ ಕೂಡ ಹಾಲೀ ಸಿಜೆಐನ ಈ "ದೈವಪ್ರೇರಣೆ'ಯ ಹೇಳಿಕೆಯಲ್ಲಿ ಉತ್ತರ ಸಿಗುತ್ತದೆ ಎನ್ನುತ್ತಾರೆ ಹಿರಿಯ ಪತ್ರಕರ್ತ ಸಿದ್ದಾರ್ಥ ವರದರಾಜನ್(ದಿ ವೈರ್, ಅಕ್ಟೋಬರ್22).

ಅವರು ಹೇಳಿರುವಂತೆ, ನಿಜಸಂಗತಿಯೆಂದರೆ, ಈಗಿನ ಸಿಜೆಐ ಕೂಡ ಇದ್ದ ಅಯೋಧ್ಯಾ ನ್ಯಾಯಪೀಠ ಖಂಡಿತವಾಗಿಯೂ ಆ ವಿವಾದಕ್ಕೆ ಒಂದು "ಪರಿಹಾರವನ್ನು ಕಂಡು ಹಿಡಿಯಲಿಲ್ಲ", ಬದಲಾಗಿ, ಅದು ನ್ಯಾಯಾಲಯವೇ ಹೇಳಿದಂತೆ ಮಸೀದಿ ಧ್ವಂಸದ ಕಾನೂನುಬಾಹಿರ ಕೃತ್ಯ ನಡೆಸಿದ ಬಲಿಷ್ಟ ಮಂದಿಯ ಪರವಾಗಿ ಕಂಡುಹಿಡಿದ ಪರಿಹಾರ, ತಾನು ಭಾಗಿಯಾದ ಈ ತೀರ್ಪು, ಕಾನೂನು ಪ್ರಕಾರ ನೆಟ್ಟಗಿಲ್ಲ ಎಂದು ಇವರಿಗೆ ಚೆನ್ನಾಗಿ ಗೊತ್ತಿರುವುದರಿಂದಲೇ 'ದೈವಪ್ರೇರಣೆ'ಯ ಸಮರ್ಥನೆಯನ್ನು ಆಶ್ರಯಿಸಿದ್ದಾರೆ ಎಂಬುದನ್ನು ಅಕ್ಟೋಬರ್21ರ ಹೇಳಿಕೆ ಸಾಬೀತು ಮಾಡುತ್ತದೆ.

'ನ್ಯಾಯದೇವತೆ'ಯ ಪರಿಷ್ಕೃತ ಮೂರ್ತಿ

ದೇಶದ ಈ 50ನೇ ಸಿಜೆಐ ಸುದ್ದಿ ಮಾಡಿದ ಇನ್ನೊಂದು ಸಂಗತಿಯೆಂದರೆ, ಅಕ್ಟೋಬರ್ 15ರಂದು 'ನ್ಯಾಯದೇವತೆ'ಯ ಪರಿಷ್ಕೃತ ಮೂರ್ತಿಯ ಅನಾವರಣ ಮಾಡಿದ್ದು. ಇದು ಇತ್ತೀಚೆಗಷ್ಟೇ 'ವಸಾಹತುಶಾಹೀ' ಕಾನೂನು ಸಂಹಿತೆಗಳನ್ನು ಬದಲಿಸುವ ಹೆಸರಿನಲ್ಲಿ ಕೈಬಿಡಬೇಕಾದ 'ವಸಾಹತುಶಾಹೀ' ಅಂಶಗಳು ಏನು ಎಂದು ಚರ್ಚಿಸದೆ ತರಾತುರಿಯಿಂದ ಜಾರಿಗೊಳಿಸಿದ್ದಕ್ಕೆ ಅನುಗುಣವಾಗಿಯೇ ಇರುವಂತಿದೆ(ವಸಾಹುಶಾಹೀ 'ರಾಜದ್ರೋಹ'ದ ಅಂಶವನ್ನು ತಥಾಕಥಿತ ವಸಾಹತುಶಾಹೀ ಸಂಹಿತೆಗಿಂತ ಹೆಚ್ಚು ಕರಾಳಗೊಳಿಸಿರುವುದು ಒಂದು ಉದಾಹರಣೆಯಷ್ಟೇ).

ಪಾರಂಪರಿಕ 'ನ್ಯಾಯದೇವತೆ'ಗೆ ಕಿರೀಟಯುಕ್ತ 'ಭಾರತೀಯ' ಉಡುಪು ತೊಡಿಸಿ ಕಣ್ಣಿಗೆ ಕಟ್ಟಿದ್ದ ಪಟ್ಟಿಯನ್ನು ತೆಗೆಯಲಾಗಿದೆ, ಕೈಯಲ್ಲಿ ಖಡ್ಗದ ಬದಲು ಸಂವಿಧಾನವನ್ನು ಕೊಡಲಾಗಿದೆ. ವಾಸ್ತವವಾಗಿ ಜಗತ್ತಿನಲ್ಲೆಲ್ಲ ಈಗ ಬಳಸುವ 'ನ್ಯಾಯದೇವತೆ' ವಸಾಹತುಶಾಹೀ ಹೇರಿಕೆಯೆಂಬುದು ಅತಿಶಯೋಕ್ತಿ, ವಾಸ್ತವವಾಗಿ ಅದು ನ್ಯಾಯದ ಬಗ್ಗೆ ಮಾನವಕುಲದ ಪರಿಕಲ್ಪನೆಯನ್ನು ಬಿಂಬಿಸುವ ಪ್ರಯತ್ನಿಸಿದ ಈಜಿಪ್ಟ್, ಗ್ರೀಸ್ ನಾಗರಿಕತೆಗಳ ಮೂಲಕ ಹಾದುಬಂದ ಪ್ರಯತ್ನ. ಅದರಲ್ಲಿ ಕಣ್ಣಿಗೆ ಕಟ್ಟಿದ ಬಟ್ಟೆ 'ನ್ಯಾಯ ಕುರುಡು' ಎಂಬುದನ್ನು ಬಿಂಬಿಸುವುದಿಲ್ಲ, ನ್ಯಾಯಾಧೀಶ ತನ್ನೆದುರು ನ್ಯಾಯ ಕೇಳಲು ನಿಂತ ಫಿರ್ಯಾದಿಗಳು ಯಾರು ಎಂಬ ತಾರತಮ್ಯವಿಲ್ಲದೆ ನ್ಯಾಯಾಧೀಶರು ತೀರ್ಪು ನೀಡಿತ್ತಾರೆ ಎನ್ನುವುದರ ಸಂಕೇತ ಎನ್ನುತ್ತಾರೆ ಒಬ್ಬ ಕಾನೂನು ವಿಶೇಷಜ್ಞ ಕನ್ವೀರ್ ಸಿಂಗ್ (ಸ್ಕ್ರಾಲ್, ಅಕ್ಟೋಬರ್ 24).

ಅದೇನೇ ಇರಲಿ, ಹಾಲೀ ಸಿಜೆಐ ಗಳ ಅಕ್ಟೋಬರ್ 21ರ ಹೇಳಿಕೆಯನ್ನು ನೋಡಿದ ಮೇಲೆ, ಕಣ್ಪಟ್ಟಿ ತೆಗೆದದ್ದು, ನ್ಯಾಯ ಕೇಳುತ್ತಿರುವವರು ಯಾರು ಎಂದು 'ಕಣ್ಣಾರೆ' ನೋಡಿ 'ಸೂಕ್ತ' ತೀರ್ಪು ಕೊಡಲಾಗುವುದು ಎಂಬುದರ ಸಂಕೇತವೇ ಎಂದೊಬ್ಬರು ಟೀಕಾಕಾರರು ವ್ಯಂಗ್ಯವಾಡಿದ್ದಾರೆ.

ಇನ್ನು ಕೈಯಲ್ಲಿ ಸಂವಿಧಾನವನ್ನು ಹಿಡಿಸಿರುವ ಬಗ್ಗೆ ಹೇಳುವುದಾದರೆ, ಕಳೆದ ಒಂದು ದಶಕದ ಬೆಳವಣಿಗೆಯ ಬಗ್ಗೆ ವಿಶ್ಲೇಷಿಸುತ್ತ, ವಿಶೇಷಜ್ಞ ಡಾ.ಮೋಹನ್ ಗೋಪಾಲ್ ಹೇಳಿರುವುದನ್ನು ಉಲ್ಲೇಖಿಸಬಹುದು. ಅವರು 'ಲೈವ್ ಲಾ' ಏರ್ಪಡಿಸಿದ್ದ ಒಂದು ಕಾರ್ಯಕ್ರಮದಲ್ಲಿ ಮಾತಾಡುತ್ತ, ಹಿಂದುತ್ವ ಶಕ್ತಿಗಳು ತಮ್ಮ ಹಿಂದೂರಾಷ್ಟ್ರ' ಸ್ಥಾಪನೆಯ ಗುರಿ ಸಾಧಿಸಲು ಈಗ ರೂಪಿಸಿರುವ ಕಾರ್ಯವ್ಯೂಹವೆಂದರೆ, ಭಾರತ ಗಣತಂತ್ರದ "ಸಂವಿಧಾನವನ್ನು ಕಿತ್ತೆಸೆಯುವುದಲ್ಲ, ಬದಲಿಗೆ ಸುಪ್ರಿಂ ಕೋರ್ಟ್ ಅದೊಂದು ಹಿಂದೂ ದಸ್ತಾವೇಜು ಎಂದು ವ್ಯಾಖ್ಯಾನ ಮಾಡುವ ಮೂಲಕ" ಎಂದು ಹೇಳಿರುವುದಾಗಿ ವರದಿಯಾಗಿದೆ: (ಸುಭಾಷ್ ಗಟಾಡೆ, ನ್ಯೂಸ್‌ಕ್ಲಿಕ್, ಅ.29).

ಇದನ್ನು ಎರಡು ಹೆಜ್ಜೆಗಳ ಪ್ರಕ್ರಿಯೆಯ ಮೂಲಕ ಸಾಧಿಸಲಾಗುವುದು ಎನ್ನುತ್ತಾರೆ ಅವರು: ಒಂದು, ಈಗಾಗಲೇ ಭಾರತ ಗಣತಂತ್ರದ ಸಂವಿಧಾನದ ಆಚೆ ನೋಡಲು ಸಿದ್ಧರಿರುವ ನ್ಯಾಯಾಧೀಶರುಗಳನ್ನು ನೇಮಿಸುವುದು, ಮತ್ತು ಎರಡು, ಕಾನೂನಿನ ಮೂಲವನ್ನು ಸಂವಿಧಾನದ ಬದಲು ಮತಗ್ರಂಥಗಳಲ್ಲಿ ಕಾಣುವ ಪುರೋಹಿತಶಾಹೀ ನ್ಯಾಯಾಧೀಶರ ಸಂಖ್ಯೆಯ ಹೆಚ್ಚಳದೊಂದಿಗೆ ಭಾರತ ಗಣತಂತ್ರದ ಸಂವಿಧಾನದ ಅಡಿಯಲ್ಲೇ ಭಾರತವನ್ನು ಹಿಂದೂರಾಷ್ಟ್ರ ಎಂದು ಘೋಷಿಸುವುದನ್ನು ಸುಲಭ ಗೊಳಿಸುವುದು.

ಇತಿಹಾಸದಲ್ಲಿ ನೆನಪು


ಮುಖ್ಯ ನ್ಯಾಯಮೂರ್ತಿಗಳಾಗಿ ನೇಮಕಗೊಂಡಾಗ ಬಹಳ ನಿರೀಕ್ಷೆಗಳನ್ನು ಉಂಟು ಮಾಡಿದ್ದ, ನಂತರ ತಮ್ಮ ಟಿಪ್ಪಣಿಗಳು, ಭಾಷಣಗಳ ಮೂಲಕ ಅದನ್ನು ದೃಢಪಡಿಸುತ್ತಿದ್ದ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ತನ್ನ ಎರಡು ವರ್ಷಗಳ ಅಧಿಕಾರಾವಧಿಯ ಕೊನೆಯಲ್ಲಿ ಹೀಗೆ ಮಾತಾಡುತ್ತಿರುವುದು ಏಕೆ ಎಂದು ಅವರ ಅಭಿಮಾನಿಗಳು ಕೂಡ ಆತಂಕ ಪಡುವಂತಾಗಿದೆ. ಈ ಸಂದರ್ಭದಲ್ಲಿ, ಕೆಲವರು ಅಯೋಧ್ಯಾ ತೀರ್ಪಿನ ನಂತರ ಆಗಿನ ಸಿಜೆಐ ಇತರ ನಾಲ್ವರು ನ್ಯಾಯಾಧೀಶರನ್ನು ಒಂದು ಪಂಚತಾರಾ ಹೋಟೇಲಿಗೆ ಕರೆದೊಯ್ದು ಪಾರ್ಟಿ ಕೊಡಿಸಿದರು ಎಂಬ ಸುದ್ದಿ ಮತ್ತು ಆಗಿನ ಸಿಜೆಐ ನಿವೃತ್ತಿಯ ಸ್ವಲ್ಪವೇ ಸಮಯದ ನಂತರ ರಾಜ್ಯಸಭಾ ಸ್ಥಾನ ಪಡೆದದ್ದು, ಇಬ್ಬರು ಮುಂದಿನ ಸಿಜೆಐಗಳಾದದ್ದು,

ಪುಟ 15 ಕ್ಕೆ

ಚರಿತ್ರೆ ನನ್ನನ್ನು ಹೇಗೆ ನೆನಪಿಸಿಕೊಳ್ಳುತ್ತದೆ?
ಹೇಗೆ? ಹೇಗೆ? ಹೇಗೆ? ???



ಚಾರಿತ್ರಿಕ!
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ಚರ್ಚಾಸ್ಪದ ಅಂಶವೆಂದರೆ, ಮಿಲೊರ್ಡ್ ನ್ಯಾಯಿಕ ವ್ಯಕ್ತಿಯಲ್ಲದ ದೇವರನ್ನು ಪ್ರಾರ್ಥಿಸಿದರೋ, ಅಥವ ಒಂದು ನ್ಯಾಯಿಕ ವ್ಯಕ್ತಿಯಾದ ಮತ್ತು ವಿವಾದದ ಭಾಗವಾಗಿರುವ ವ್ಯಕ್ತಿಗೆ ಪ್ರಾರ್ಥನೆ ಸಲ್ಲಿಸಿದರೋ?
ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಸಂಪತ್ತು ಮತ್ತು ಬಡತನದ ತತ್ವ ಜಿಜ್ಞಾಸೆ:
ಸಂಪತ್ತಿನ ಕ್ರೋಢೀಕರಣ ಮತ್ತು ಬಡತನದ ಬೆಳವಣಿಗೆ ಏಕಕಾಲದಲ್ಲಿ ಏಕೆ ಇರುತ್ತವೆ?



ಈ ಬಾರಿಯ ರಿಕ್ಸ್ ಬ್ಯಾಂಕ್ ಪ್ರಶಸ್ತಿಯನ್ನು ಅಂದರೆ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆದ ಅರ್ಥಶಾಸ್ತಜ್ಞರು ಮಾತ್ರವಲ್ಲ, ಅವರ ಟೀಕಾಕಾರರು ಕೂಡ ಬೆಳವಣಿಗೆಯ ಬಗ್ಗೆ ಮತ್ತು ಅಭಿವೃದ್ಧಿಯಾಗದಿರುವ ಬಗ್ಗೆ ಹೊಂದಿರುವ ಗ್ರಹಿಕೆಯಲ್ಲೇ ಒಂದು ಮೂಲಭೂತ ಕೊರತೆ ಇದೆ. ಇವರು ಬಡತನವನ್ನು ಬಂಡವಾಳದ ಅಭಿವೃದ್ಧಿಯ ಜೊತೆಯಲ್ಲೇ ಬರುವ ಅದರ ಒಂದು ದ್ವಂದ್ವ ಎಂದು ನೋಡುವುದರ ಬದಲು, ಅದು ಅಭಿವೃದ್ಧಿಯ ಕೊರತೆಯಿಂದ ಉದ್ಭವಿಸುತ್ತದೆ ಎಂದು ಭಾವಿಸಿದ್ದಾರೆ. ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆಯ ನಡುವೆ ಅಥವಾ ಬಡತನದ ಬೆಳವಣಿಗೆಯೊಂದಿಗೆ ಸಂಪತ್ತಿನ ಬೆಳವಣಿಗೆಯ ಮತ್ತು ಅದರ ಅಂತಾರಾಷ್ಟ್ರೀಯ ಪ್ರತಿರೂಪ, ಅಂದರೆ, ಕೆಲವು ದೇಶಗಳ ಅಭಿವೃದ್ಧಿಯ ಜೊತೆಯಲ್ಲಿ ಇತರ ದೇಶಗಳು ಅಭಿವೃದ್ಧಿಯಾಗದಿರುವ ದ್ವಂದ್ವವನ್ನು ಈ ರಿಕ್ಸ್‌ಬ್ಯಾಂಕ್ ಪ್ರಶಸ್ತಿ ಪುರಸ್ಕೃತರು ಗುರುತಿಸುವುದೇ ಇಲ್ಲ. ಸಂಪತ್ತಿನ ಕ್ರೋಢೀಕರಣ ಮತ್ತು ಬಡತನದ ಕ್ರೋಢೀಕರಣ ಇವು ದ್ವಂದ್ವಾತ್ಮಕ ಸಂಬಂಧ ಹೊಂದಿವೆ ಎಂಬ ಸತ್ಯವನ್ನು ಬೂರ್ಜ್ವಾ ಅರ್ಥಶಾಸ್ತ್ರವು ಯಾವ ಸಂದರ್ಭದಲ್ಲೂ ಒಪ್ಪಿಕೊಳ್ಳುವುದಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಈ ವರ್ಷದ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ದೇಶ ದೇಶಗಳ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಅಥವಾ ಅಡ್ಡಿಪಡಿಸುವ ಸಂಗತಿಗಳ ಬಗ್ಗೆ ನಡೆಸಿದ ಸಂಶೋಧನೆಗಾಗಿ ಅಮೆರಿಕದ ಮೂವರು ಅರ್ಥಶಾಸ್ತ್ರಜ್ಞರಿಗೆ ನೀಡಲಾಗಿದೆ. ಚುನಾವಣಾ ಪ್ರಜಾಪ್ರಭುತ್ವದಂತಹ ಕೆಲವು ಪಾಶ್ಚ್ಯಾತ್ಯ ಸಂಸ್ಥೆಗಳು ಆರ್ಥಿಕ ಬೆಳವಣಿಗೆಗೆ ಅನುಕೂಲಕರವಾಗಿವೆ ಮತ್ತು ಅವು ಆರ್ಥಿಕ ಬೆಳವಣಿಗೆಯಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಎಂದು ಅವರು ಹೇಳುತ್ತಾರೆ. ಅವರ ಪ್ರಕಾರ ವಸಾಹತುಶಾಹಿಯು ತಾನು ನೆಲಸಿದ ವಸಾಹುಗಳಲ್ಲಿ ಉತ್ತೇಜಿಸಿದ "ಒಳಗೊಳ್ಳುವ ಸಂಸ್ಥೆಗಳು" ಅಲ್ಲಿ ಬೆಳವಣಿಗೆಯು ಪ್ರವರ್ಧಮಾನಕ್ಕೆ ಬರಲು ಕಾರಣವಾದವು. ಆದರೆ, ವಸಾಹತುಶಾಹಿ ಸಾಮ್ರಾಜ್ಯದ ಬೇರೆಡೆಗಳಲ್ಲಿ ಸ್ಥಾಪಿಸಿದ "ಕಸಿಯುವ ಸಂಸ್ಥೆಗಳು" ಬೆಳವಣಿಗೆಗೆ ಹಾನಿಕಾರಕವಾದವು.

ಅವರ ಈ ಅಭಿಪ್ರಾಯ ಬಹಳ ಟೀಕೆಗಳಿಗೆ ಒಳಗಾಗಿದೆ. ಅವರ ಈ ವಾದದಲ್ಲಿ ಹುರುಳಿಲ್ಲ ಎಂದು ಕೆಲವರು ವಾದಿಸಿದ್ದಾರೆ: ಪಾಶ್ಚ್ಯಾತ್ಯ–ಶೈಲಿಯ ಪ್ರಜಾಪ್ರಭುತ್ವವನ್ನು ಹೊಂದಿರದ ಮತ್ತು ಕೆಲವು ಭ್ರಷ್ಟಾಚಾರ–ಮುಕ್ತ ಪೂರ್ವಏಷ್ಯಾದ ದೇಶಗಳಲ್ಲೂ ಆರ್ಥಿಕ ಬೆಳವಣಿಗೆಯು ಯಶಸ್ವಿಯಾಗಿದೆ. ಹಾಗೆ ನೋಡಿದರೆ ಪಾಶ್ಚ್ಯಾತ್ಯ ದೇಶಗಳು ಕಂಡ ಅಧಿಕ ಬೆಳವಣಿಗೆಯ ಕಾಲಾವಧಿಯು ಭ್ರಷ್ಟಾಚಾರದಿಂದ ಗುರುತಿಸಲ್ಪಟ್ಟಿದೆ. ಪಾಶ್ಚ್ಯಾತ್ಯರು ನೆಲೆ ನಿಂತ ವಸಾಹತುಗಳು ಮತ್ತು ಬೇರೆ ವಸಾಹತುಗಳ ನಡುವೆ ಕಂಡುಬರುವ ವ್ಯತ್ಯಾಸವು, ನೆಲೆ ನಿಂತ ವಸಾಹತುಗಳಲ್ಲಿ ಪಾಶ್ಚ್ಯಾತ್ಯರು ತಮ್ಮ "ಬಂಧು ಬಳಗ"ದವರನ್ನು ವಲಸಿಗರಾಗಿ ಸ್ವೀಕರಿಸಿದ ಕಾರಣದಿಂದ ಉಂಟಾಗಿದೆ ಎಂದು ಕೆಲವರು ವಾದಿಸಿದ್ದಾರೆ. ಇನ್ನೂ ಕೆಲವರು, ಈ ಅರ್ಥಶಾಸ್ತ್ರಜ್ಞರು ಪಾಶ್ಚ್ಯಾತ್ಯ ಸಂಸ್ಥೆಗಳನ್ನು ದೈವವೋ ಎಂಬಂತೆ ವೈಭವೀಕರಿಸಿ ನೋಡಿರುವ ಕ್ರಮವನ್ನು ಮತ್ತು ವಸಾಹತುಶಾಹಿಯು ನಡೆಸಿದ ಮಿತಿ ಮೀರಿದ ದಬ್ಬಾಳಿಕೆಯ ಬಗ್ಗೆ ವಹಿಸಿದ ಮೌನವನ್ನು ಕಟುವಾಗಿ ಟೀಕಿಸಿದ್ದಾರೆ.

ಈ ಅರ್ಥಶಾಸ್ತ್ರಜ್ಞರ ವಾದಗಳನ್ನು ಚರ್ಚಿಸುವುದು ಇಲ್ಲಿ ನಮ್ಮ ಉದ್ದೇಶವಲ್ಲ. ಆದರೆ, ಬೆಳವಣಿಗೆಯ ಬಗ್ಗೆ ಮತ್ತು ಅಭಿವೃದ್ಧಿಯಾಗದಿರುವ ಬಗ್ಗೆ ಅವರು ಹೊಂದಿರುವ ಗ್ರಹಿಕೆಯಲ್ಲೇ ಒಂದು ಮೂಲಭೂತ ಕೊರತೆ ಇದೆ ಎಂಬುದನ್ನು ಒತ್ತಿಹೇಳುವುದೇ ನಮ್ಮ ಉದ್ದೇಶ. ಈ ಕೊರತೆಯು ಈ ಅರ್ಥಶಾಸ್ತ್ರಜ್ಞರ ಟೀಕಾಕಾರರ ಗ್ರಹಿಕೆಯಲ್ಲೂ ಇದೆ, ಅವರ ಟೀಕೆಗಳು ಎಷ್ಟೇ ಸರಿ ಇದ್ದರೂ ಸಹ. ಈ ಕೊರತೆಯು ಬಡತನವನ್ನು ಅಭಿವೃದ್ಧಿ ಜೊತೆಯಲ್ಲೇ ಬರುವ ಅದರ ಒಂದು ದ್ವಂದ್ವ ಎಂದು ನೋಡುವುದರ ಬದಲು, ಅದು ಅಭಿವೃದ್ಧಿಯ ಕೊರತೆಯಿಂದ ಉದ್ಭವಿಸುತ್ತದೆ ಎಂದು ನೋಡುವ ಕ್ರಮಕ್ಕೆ ಸಂಬಂಧಿಸಿದೆ. ಉತ್ತಮ ("ಒಳಗೊಳ್ಳುವ") ಸಂಸ್ಥೆಗಳನ್ನು ಹೊಂದಿದ ಕೆಲವು ದೇಶಗಳು ಮುಂದೆ ಹೋದರೆ ಕೆಟ್ಟ ("ಕಸಿಯುವ") ಸಂಸ್ಥೆಗಳನ್ನು ಹೊಂದಿದ ದೇಶಗಳು ಹಿಂದೆ ಉಳಿದವು ಎಂಬುದನ್ನು ಒಂದು ಜನಾಂಗದ ಚಿತ್ರವಾಗಿ ಅವರು ಸೂಚ್ಯವಾಗಿ ಪರಿಭಾವಿಸುತ್ತಾರೆ. ಈ ಚಿತ್ರದಲ್ಲಿ ಕಾಣೆಯಾದ ಸಂಗತಿಯೆಂದರೆ, ಕೆಲವರು ಮುಂದೆ ಹೋದುದರಿಂದ ಇತರರು ಹಿಂದೆ ಉಳಿದರು ಎಂಬುದನ್ನು ಮತ್ತು ಬಂಡವಾಳಶಾಹಿ ಬೆಳವಣಿಗೆಯು ಬಡತನವನ್ನು ಉಂಟುಮಾಡುತ್ತದೆ ಎಂಬುದು. ಈ ವಿದ್ಯಮಾನವನ್ನು ವಿವರಿಸಲು ದಿವಂಗತ ಆಂಡ್ರೆಗುಂಡರ್ ಫ್ರಾಂಕ್‌ಎಂಬುವರು ಹಿಂದುಳಿಯುವ ಅಭಿವೃದ್ಧಿ/ಅಭಿವೃದ್ಧಿಯಾಗದ ಅಭಿವೃದ್ಧಿ ಎಂಬ ಒಂದು ಪದಗುಚ್ಛವನ್ನು ರಚಿಸಿದ್ದಾರೆ. ಅಭಿವೃದ್ಧಿಯಾಗದ ಅಭಿವೃದ್ಧಿ ಎಂದರೆ, ಅಲ್ಲಿ ಅಭಿವೃದ್ಧಿ ಇಲ್ಲವೇ ಇಲ್ಲ ಎಂದಲ್ಲ; ಆದರೆ, ನಾವು ಯಾವುದನ್ನು ಸಾಮಾನ್ಯವಾಗಿ "ಅಭಿವೃದ್ಧಿ" ಎಂದು ಗುರುತಿಸುತ್ತೇವೆಯೋ ಅದೇ ಅಭಿವೃದ್ಧಿಯ ಒಂದು ನಿರ್ದಿಷ್ಟರೂಪವೇ ಈ ಅಭಿವೃದ್ಧಿಯಾಗದ ಅಭಿವೃದ್ಧಿ. ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆಯ ನಡುವೆ ಅಥವಾ ಒಂದು ಧ್ರುವದಲ್ಲಿ ಸಂಪತ್ತಿನ ಬೆಳವಣಿಗೆ ಮತ್ತು ಇನ್ನೊಂದು ಧ್ರುವದಲ್ಲಿ ಬಡತನದ ಬೆಳವಣಿಗೆಯ ನಡುವಿನ ಈ ದ್ವಂದ್ವವನ್ನು ಈ ರಿಕ್ಸ್‌ಬ್ಯಾಂಕ್ ಪ್ರಶಸ್ತಿ ಪುರಸ್ಕೃತರು ಗುರುತಿಸುವುದೇ ಇಲ್ಲ.



ದ್ವಂದ್ವದ ಮೂಲ ಕಾರಣ

ಬಡತನದ ಬೆಳವಣಿಗೆಯೊಂದಿಗೆ ಸಂಪತ್ತಿನ ಬೆಳವಣಿಗೆಯ ಈ ದ್ವಂದ್ವದ ಮೂಲ ಕಾರಣ, ಮತ್ತು ಅದರ ಅಂತಾರಾಷ್ಟ್ರೀಯ ಪ್ರತಿರೂಪ, ಅಂದರೆ, ಕೆಲವು ದೇಶಗಳ ಅಭಿವೃದ್ಧಿಯ ಜೊತೆಯಲ್ಲಿ ಇತರ ದೇಶಗಳು ಅಭಿವೃದ್ಧಿಯಾಗದಿರುವ ಕಾರಣ ಹೀಗಿದೆ: ಬಂಡವಾಳಶಾಹಿ ಬೆಳವಣಿಗೆಯು ಬಂಡವಾಳದ ಆದಿಮ ಶೇಖರಣೆಯನ್ನು ಅನಿವಾರ್ಯವಾಗಿ ಒಳಗೊಂಡಿರುತ್ತದೆ. ಈ ಪ್ರಕ್ರಿಯೆಯಲ್ಲಿ, ಕಿರು–ಉತ್ಪಾದಕ ಸಮೂಹವನ್ನು ಬಡತನಕ್ಕೆ ಒಳಪಡಿಸಿ ಅವರ ಆಸ್ತಿ–ಪಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಹೀಗೆ ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ಬಡವರಾದವರ ಪೈಕಿ ಒಂದು ಸಣ್ಣ ಸಂಖ್ಯೆಯ ವ್ಯಕ್ತಿಗಳನ್ನು ಮಾತ್ರ ಬಂಡವಾಳಶಾಹಿ ವಲಯದಲ್ಲಿ ಕೆಲಸ ಮಾಡಲು ನೇಮಿಸಿಕೊಳ್ಳಲಾಗುತ್ತದೆ. ಬಂಡವಾಳ ಆದಿಮ ಶೇಖರಣೆಯ ಪ್ರಕ್ರಿಯೆಯ ಬಲಿಪಶುಗಳ ಒಟ್ಟು ಸಂಖ್ಯೆಯು ಬಂಡವಾಳದ ಶೇಖರಣೆಯು ಮುಂದುವರೆಯುತ್ತಾ ಹೋದಂತೆ ಹೆಚ್ಚುತ್ತಾ ಹೋಗುತ್ತದೆ. ಅಥವಾ, ಒಂದು ವೇಳೆ ಈ ಬಲಿಪಶುಗಳ ಒಟ್ಟು ಸಂಖ್ಯೆಯು ಹೆಚ್ಚದಿದ್ದರೆ, ಬದಲಿಗೆ ಇಳಿಕೆಯುತ್ತಿದ್ದರೆ, ಅಥವಾ ಸ್ಥಿರವಾಗಿ ಉಳಿದಿದ್ದರೆ, ನಂತರ ಅವರ ಬಡತನದ ಮಟ್ಟವು ಏರಿಕೆಯಾಗುತ್ತದೆ ಮತ್ತು ಅವರು "ವ್ಯವಸ್ಥೆಯ ಹೊರಗೆ" ಉಳಿಯುತ್ತಾರೆ. ಬಂಡವಾಳದ ಆದಿಮ ಶೇಖರಣೆಯು ಒಂದು ನಿರಂತರ ಪ್ರಕ್ರಿಯೆಯಾಗಿರುವ ಕಾರಣದಿಂದಾಗಿ ವ್ಯವಸ್ಥೆಯಿಂದ ಬಡತನಕ್ಕೆ ಒಳಗಾಗಿ ಅದರಿಂದ ಹೊರಗುಳಿದವರ ಸಂಖ್ಯೆಯೂ ಇಳಿಯುವುದಿಲ್ಲ ಮತ್ತು ಅಂತಹ ವ್ಯಕ್ತಿಗಳ ಬಡತನದ ಮಟ್ಟವೂ ಇಳಿಯುವುದಿಲ್ಲ.

ಈ ವಿದ್ಯಮಾನವು ಒಂದು ಧ್ರುವದಲ್ಲಿ ಸಂಪತ್ತಿನ ಕ್ರೋಢೀಕರಣ ಮತ್ತೊಂದು ಧ್ರುವದಲ್ಲಿ ಬಡತನದ ಬೆಳವಣಿಗೆ ಇವು ಏಕಕಾಲದಲ್ಲಿ ಏಕೆ ಇರುತ್ತವೆ ಎಂಬುದನ್ನು ವಿವರಿಸುತ್ತದೆ. ಈ ವಿದ್ಯಮಾನದ ಗ್ರಹಿಕೆಯು ಶೇಖರಣೆಯ ಒಟ್ಟಾರೆ ಪ್ರಕ್ರಿಯೆಯ ಬಗ್ಗೆ ಒಂದು ಸಮಗ್ರದೃಷ್ಟಿಯನ್ನು ಹೊಂದಿರದ ಕಾರಣದಿಂದಾಗಿ ಮಬ್ಬುಗೊಂಡಿರುತ್ತದೆ. ಗಮನವನ್ನು ಈ ಪ್ರಕ್ರಿಯೆಯ ಒಂದು ನಿರ್ದಿಷ್ಟ ಭಾಗದ ಮೇಲೆ ಮಾತ್ರ ಕೇಂದ್ರೀಕರಿಸುವುದರಿಂದಾಗಿ ಅದರಿಂದೊಂದು ತಪ್ಪಾದ ಭಾವನೆಯನ್ನು ಮೂಡಿಸುತ್ತದೆ.

ಬಂಡವಾಳಶಾಹಿಯ ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಿಂದ ಮೊದಲನೆಯ ಮಹಾಯುದ್ಧದ ವೇಳೆಗೆ ಒಂದು ಜಾಗತಿಕ ವ್ಯವಸ್ಥೆಯಾಗಿ ತನ್ನನ್ನು ತಾನು ಬಲಪಡಿಸಿಕೊಂಡ ತನ್ನ ಉತ್ಕರ್ಷದ ಸುದೀರ್ಘ ಅವಧಿಯಲ್ಲಿ, ಸಂಪತ್ತು ಮತ್ತು ಬಡತನದ ಈ ದ್ವಂದ್ವವು ಈ ರೀತಿಯಲ್ಲಿತ್ತು: ಬ್ರಿಟನ್‌ನಿಂದ ಹಿಡಿದು ಇಡೀ ಯುರೋಪ್‌ಖಂಡದಲ್ಲಿ ಮತ್ತು ಕೆನಡಾ, ಯುಎಸ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದಂತಹ ಯುರೋಪಿಯನ್ ವಸಾಹತುಗಳ ಸಮಶೀತೋಷ್ಣಪ್ರದೇಶಗಳಿಗೆ ಬಂಡವಾಳಶಾಹಿಯು ಹರಡಿತು. ವಸಾಹತುಶಾಹಿಯು ನೆಲೆ ನಿಂತ ಈ ಪ್ರದೇಶಗಳಿಗೆ ಉದ್ಯಮಗಳ ಪ್ರಸರಣ ಸಂಭವಿಸಿತು. ಉದ್ಯಮಗಳ ಪ್ರಸರಣಕ್ಕಾಗಿ ಬ್ರಿಟನ್ ತನ್ನ ಸ್ವಂತ ಮಾರುಕಟ್ಟೆಯನ್ನು ಈ ಪ್ರದೇಶಗಳ ಆಮದುಗಳಿಗೆ ಮುಕ್ತವಾಗಿರಿಸಿತ್ತು ಮಾತ್ರವಲ್ಲ, ಬ್ರಿಟನ್ನಿಂದ ಮತ್ತು ಯುರೋಪಿನ ಇತರ ಭಾಗಗಳಿಂದ ಈ ಪ್ರದೇಶಗಳಿಗೆ ಸಂಭವಿಸಿದ ಬೃಹತ್ ಪ್ರಮಾಣದ ವಲಸೆಯೊಂದಿಗೆ ಅಧಿಕವಾಗಿ ಬಂಡವಾಳವನ್ನೂ ಬ್ರಿಟನ್ ರಫ್ತು ಮಾಡಿತು.

ನೆಪೋಲಿಯನ್ (ಫ್ರಾನ್ಸಿನೊಂದಿಗೆ) ಯುದ್ಧದ ಅಂತ್ಯ ಮತ್ತು ಮೊದಲ ವಿಶ್ವಯುದ್ಧದ ನಡುವಿನ ಅವಧಿಯಲ್ಲಿ ಯುರೋಪಿನಿಂದ ಸಂಭವಿಸಿದ ವಲಸೆಯ ಪ್ರಮಾಣವು ಕನಿಷ್ಠ 5ಕೋಟಿ ಎಂದು ಅಂದಾಜಿಸಲಾಗಿದೆ. ವಲಸೆ ಬಂದವರು ಬಲ ಪ್ರಯೋಗದ ಮೂಲಕ ಭೂಮಿಯನ್ನು ಸ್ಥಳೀಯರಿಂದ ಕಸಿದುಕೊಂಡರು. ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ವಲಸಿಗರೊಂದಿಗೆ ಹೋರಾಡಿ ಬದುಕುಳಿದ ಸ್ಥಳೀಯರನ್ನು ಮತ್ತು ಹೊಸ ಹೊಸ ರೋಗಗಳಿಗೆ ಪುಟ 13 ಕ್ಕೆ


ಸ್ವೀಡನ್ನಿನ ರಿಕ್ಸ್ ಬ್ಯಾಂಕ್ ಅಲ್ಫ್ರೆಡ್ ನೋಬೆಲ್ ಸ್ಮರಣೆಯಲ್ಲಿ ಅರ್ಥಶಾಸ್ತ್ರಕ್ಕೆ ಕೊಡುವ ಪ್ರಶಸ್ತಿಯ ಈ ಬಾರಿಯ ವಿಜೇತರು: ಅಮೆರಿಕಾದ ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಡೆರೊನ್‌ಎಸ್ಮೊಗ್ಲು ಮತ್ತು ಸೈಮನ್ ಜಾನ್ಸನ್ ಹಾಗೂ ಚಿಕಾಗೊ ವಿವಿಯ ಜೇಮ್ಸ್ ರಾಬಿನ್‌ಸನ್

ಮಾಧ್ಯಮ ಪರಿಸ್ಥಿತಿ....

ಪುಟ 6 ರಿಂದ

ಭಾಗಶಃ ವಿಶೇಷ ವರದಿಗಳಿಗೆ ಚಂದಾ ಆಧಾರಿತವಾಗಿವೆ. ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು ಹೆಚ್ಚಿನವು ಈ ಅವಧಿಯಲ್ಲಿ ಚಂದಾ–ಆಧಾರಿತವಾಗಿ ಬದಲಾಗಿವೆ ಎಂದು ಗಮನಿಸಬಹುದು. ಇಂತಹ ವೆಬ್ ಪತ್ರಿಕೆಗಳು ಸೇರಿ ಈ ಅವಧಿಯಲ್ಲಿ 'ಡಿಜಿಪಬ್' ಎಂಬ ಜಾಲ ಕಟ್ಟಿಕೊಂಡಿದ್ದು ಸರಕಾರದ ಜತೆ ವ್ಯವಹಾರದಲ್ಲಿ ಕ್ರೋಢೀಕೃತವಾಗಿ ಕೆಲಸ ಮಾಡುತ್ತಿವೆ.

ಈ ವೆಬ್ ಪತ್ರಿಕೆಗಳ ಪ್ರಸಾರ ಸಣ್ಣದಿದ್ದರೂ ಅವುಗಳ ಪ್ರಭಾವ ಮುಖ್ಯವಾಹಿನಿ ಮಾಧ್ಯಮಗಳ ಮೇಲೂ ಜನತೆಯ ಮೇಲೂ ದೊಡ್ಡ ಪ್ರಮಾಣದಲ್ಲಿದೆ. ಅವು ರಾಷ್ಟ್ರೀಯ ಸಂವಾದ, ಸಂಕಥನಗಳ ಮೇಲೆ ದೊಡ್ಡ ಪರಿಣಾಮ ಬೀರುತ್ತಿವೆ. ಸರಕಾರಗಳಿಗೆ ಮುಜುಗರ ತರುತ್ತಿವೆ. ಇದು ನ್ಯೂಸ್ ಕ್ಲಿಕ್, ದಿ ವೈರ್ ಗಳ ಮೇಲೆ ಇ.ಡಿ. ದಾಳಿ ನಡೆಸಿ ಕೇಸು ಹಾಕಿದ್ದು, ಕೊನೆಗೆ ನ್ಯೂಸ್ ಕ್ಲಿಕ್ ಪ್ರಧಾನ ಸಂಪಾದಕರನ್ನು ಯುಎಪಿಎ ಅಡಿ ಬಂಧಿಸಿ ಪತ್ರಿಕೆಯ ಬ್ಯಾಂಕ್ ಖಾತೆ ಮತ್ತು ಕಚೇರಿ ಬಂದ್ ಮಾಡಿದ್ದು ಇದನ್ನು ತೋರಿಸುತ್ತವೆ. ಹಿಂದಿ ಮತ್ತು ಕನ್ನಡ ಸೇರಿದಂತೆ ಇತರ ಭಾರತೀಯ ಭಾಷೆಗಳಲ್ಲೂ ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು, ಸ್ವತಂತ್ರ ವೆಬ್ ಪತ್ರಿಕೆಗಳು ಆರಂಭವಾಗಿವೆ.

ಜಾಹೀರಾತುಗಳು ವೆಬ್ ಮಾಧ್ಯಮದತ್ತ

ಪತ್ರಿಕೆ, ಟಿವಿ, ರೇಡಿಯೋ ಮಾಧ್ಯಮಗಳು ಅದರ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿ ಜಾಹೀರಾತುಗಳ ಮೇಲೆ ಅವಲಂಬಿಸಿರುತ್ತವೆ. ಉದಾಹರಣೆಗೆ ದೈನಿಕ ಪತ್ರಿಕೆಗಳ ಉತ್ಪಾದನೆ ವೆಚ್ಚವೇ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿರುತ್ತದೆ. ದೈನಿಕ ಒಟ್ಟು ವಹಿವಾಟಿನ ಶೇ. 80 ಜಾಹೀರಾತಿನಿಂದ ಬಂದರೆ, ಶೇ. 20 ಮಾತ್ರ ಬಳಕೆದಾರರಿಂದ ಬರುತ್ತದೆ. ಆದ್ದರಿಂದ ನಿರ್ದಿಷ್ಟ ಪತ್ರಿಕೆಗಳ ಮತ್ತು ಇಡೀ ಮಾಧ್ಯಮದ (ಉದಾ: ಎಲ್ಲಾ ಪತ್ರಿಕೆಗಳ) ಭವಿಷ್ಯ ಜಾಹೀರಾತುದಾರರ ಮರ್ಜಿ ಮೇಲೆ ಅವಲಂಬಿಸಿರುತ್ತದೆ. ಜಾಹೀರಾತುದಾರರು ಅವರು ಮಾರಾಟ ಮಾಡಬೇಕಾದ ಸರಕು–ಸೇವೆಗಳ ಗ್ರಾಹಕರು ಎಲ್ಲಿದ್ದಾರೆ, ಅವರನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಖಾತರಿಯಾಗಿ ತಲುಪುವುದು ಹೇಗೆ ಎಂಬುದರ ಮೇಲೆ ಎಲ್ಲಿ ಜಾಹೀರಾತು ಕೊಡಬೇಕು ಎಂದು ನಿರ್ಧರಿಸುತ್ತಾರೆ. ಡಿಜಿಟಲ್ ಅಥವಾ ವೆಬ್ ಮಾಧ್ಯಮ ಜಾಹೀರಾತುದಾರರಿಗೆ (ಪತ್ರಿಕೆ, ಟಿವಿ, ರೇಡಿಯೋಗಳಿಗೆ ಹೋಲಿಸಿದರೆ) ಒಂದೇ ಕಡೆ ಬಹು–ಮಾಧ್ಯಮಗಳ ಜತೆಗೆ ಕೆಲವು (ನಿರ್ದಿಷ್ಟ ಜನವಿಭಾಗಕ್ಕೆ ಟಾರ್ಗೆಟ್ ಮಾಡುವ, ತಕ್ಷಣದ ಸ್ಪಂದನೆ ಮಾಡುವ, ಜನರ ಪತ್ರಿಕ್ರಿಯೆ ಅಳೆಯುವ ಇತ್ಯಾದಿ) ಅನುಕೂಲಗಳನ್ನು ಕೊಡುತ್ತದೆ. ಆದ್ದರಿಂದ ಅವರು ವೆಬ್ ಮಾಧ್ಯಮದತ್ತ ಹೊರಳುತ್ತಿದ್ದಾರೆ.

ಇವೈ–ಫಿಕ್ಕಿ (EY-FICCI) ವರದಿ 2024ರ ಪ್ರಕಾರ ಕಳೆದ 3 ವರ್ಷಗಳಲ್ಲಿ ಜಾಹೀರಾತುದಾರರು ವಿವಿಧ ಮಾಧ್ಯಮಗಳಲ್ಲಿ ಯಾವುದನ್ನು ಎಷ್ಟರ ಮಟ್ಟಿಗೆ ಆರಿಸಿಕೊಂಡರು ಎಂಬುದನ್ನು ನೋಡಿದರೆ ತಿಳಿಯುತ್ತದೆ. ಕೆಳಗಿನ ಕೋಷ್ಟಕದಲ್ಲಿ ಜಾಹೀರಾತುಗಳಲ್ಲಿ ಪಾಲು ಹಾಗೂ ಹೆಚ್ಚಳದ ದರ ಎರಡೂ ಗಮನಿಸಿದರೆ ಡಿಜಿಟಲ್‌ನತ್ತ ದೊಡ್ಡ ರೀತಿಯಲ್ಲಿ ಜಾಹೀರಾತುದಾರರು ಹೊರಳುತ್ತಿದ್ದಾರೆ ಎಂಬುದು ಸ್ಪಷ್ಟ. ಪತ್ರಿಕೆಗಳ ಜಾಹೀರಾತು ಸ್ಥಗಿತಗೊಂಡಿದ್ದರೆ, ಟಿವಿ ದೊಡ್ಡ ಪ್ರಮಾಣದಲ್ಲಿ ಜಾಹೀರಾತು ಕಳೆದುಕೊಳ್ಳುತ್ತಿದೆ.

ವರ್ಷ/ಒಟ್ಟು ಜಾಹೀರಾತಿನ ಪಾಲು	ಡಿಜಿಟಲ್	ಟಿವಿ	ಪತ್ರಿಕೆಗಳು	ರೇಡಿಯೊ +ಇತರ
2022	47%	30%	16%	7%
2023	51%	26%	16%	8%
2024 (ಅಂದಾಜು)	53%	25%	15%	8%

ಡಿಜಿಟಲ್ ಅತಿ ದೊಡ್ಡ, ವೇಗವಾಗಿ ಬೆಳೆಯುತ್ತಿರುವ ಮಾಧ್ಯಮ ಕ್ಷೇತ್ರ

ಇವೈ–ಫಿಕ್ಕಿ (EY-FICCI) 2020ರ ಮಾಧ್ಯಮ–ಮನೋರಂಜನಾ ಉದ್ಯಮ 2024ರ ವರದಿಯ ಅಂಕಿಅಂಶಗಳ ಪ್ರಕಾರ ಟಿವಿ, ಪತ್ರಿಕೆಗಳು, ರೇಡಿಯೋ, ಡಿಜಿಟಲ್ ಮಾಧ್ಯಮಗಳಲ್ಲದೆ ಜೊತೆಗೆ (ಫಿಲಂ, ಸಂಗೀತ, ಗೇಮಿಂಗ್, ಅನಿಮೇಶನ್ ಮತ್ತಿತರ ಸಂಬಂಧಿತ) ಮನೋರಂಜನಾ ಉದ್ಯಮಗಳ ಒಟ್ಟು ವಹಿವಾಟು 2023ರಲ್ಲಿ 2.32 ಲಕ್ಷ ಕೋಟಿ ರೂ.ಗಳಾಗಿತ್ತು. ಒಟ್ಟು ವಹಿವಾಟು 2024ರಲ್ಲಿ 2.56 ಲಕ್ಷ ಕೋಟಿ ರೂ.ಗಳಾಗಲಿದೆ.

ಬರಿಯ ಮಾಧ್ಯಮವನ್ನು (ಅಂದರೆ ಟಿವಿ, ಪ್ರಿಂಟ್, ಡಿಜಿಟಲ್, ರೇಡಿಯೊ ಮಾತ್ರ) ತೆಗೆದುಕೊಂಡರೆ ಅದು 2023ರಲ್ಲಿ 1.62 ಲಕ್ಷ ಕೋಟಿ ರೂ. ಇತ್ತು, 2024ರಲ್ಲಿ ರೂ. 1.76 ಲಕ್ಷ ಕೋಟಿ ರೂ. ಆಗಲಿದೆ. ಈಗ ಡಿಜಿಟಲ್ ಮಾಧ್ಯಮ ಕ್ಷೇತ್ರದ ಅತಿ ದೊಡ್ಡ ಭಾಗವಾಗಿದ್ದು 2023ರಲ್ಲಿ 75 ಸಾವಿರ ಕೋಟಿ ವಹಿವಾಟು ಹೊಂದಿದ್ದು, 2024ರಲ್ಲಿ 96 ಸಾವಿರ ಕೋಟಿಗೆ ಏರಲಿದೆ. ಎರಡನೆಯ ಅತಿ ದೊಡ್ಡ ಭಾಗವಾದ 2023ರಲ್ಲಿ ಟಿವಿ ಗೆ 72,000 ಕೋಟಿ, 2024ರಲ್ಲಿ 77,000 ಕೋಟಿ ವಹಿವಾಟು ಇರುತ್ತದೆ. ಪ್ರಿಂಟ್ ಗೆ 2023ರಲ್ಲಿ 27,000 ಕೋಟಿ, 2024ರಲ್ಲಿ 29,000 ಕೋಟಿ ವಹಿವಾಟು ಇರುತ್ತದೆ. ರೇಡಿಯೊಗೆ 2023ರಲ್ಲಿ 2300 ಕೋಟಿ, 2024ರಲ್ಲಿ 2400 ಕೋಟಿ ವಹಿವಾಟು ಇರುತ್ತದೆ. ಎಲ್ಲಾ ಅಂಶಗಳನ್ನು ಗಮನಿಸಿ ಮುಂದಿನ ಮೂರು ವರ್ಷಗಳಲ್ಲಿ ಅಂದರೆ 2026ರ ಹೊತ್ತಿಗೆ ಪ್ರತಿ ವಿಭಾಗದ ವಹಿವಾಟಿನಲ್ಲಿ ಬೆಳವಣಿಗೆಯ ಅಂದಾಜನ್ನು ವರದಿ ಮಾಡಿದ್ದು ಡಿಜಿಟಲ್ ಅತಿ ಹೆಚ್ಚು (13.5%) ಕೂಡು ಬೆಳವಣಿಗೆ ದರ (ಸಿಎಜಿಆರ್) ಸಾಧಿಸಲಿದೆ ಎಂದಿದೆ. ಪ್ರಿಂಟ್ 3.4%, ಟಿವಿ 3.2%, ರೇಡಿಯೊ 6.6% ಕೂಡು ಬೆಳವಣಿಗೆ ದರ (ಸಿಎಜಿಆರ್) ಸಾಧಿಸಲಿದೆ ಎಂದಿದೆ.

ವರ್ಷ/ವಹಿವಾಟು (ಸಾವಿರ ಕೋಟಿ ರೂ)	ಡಿಜಿಟಲ್	ಟಿವಿ	ಪತ್ರಿಕೆಗಳು	ರೇಡಿಯೊ
2022	57	71	25	2.1
2023	65	70	26	2.3
2024 (ಅಂದಾಜು)	75	72	27	2.4
2026 (ಅಂದಾಜು)	96	77	28	2.7
ಸಿಎಜಿಆರ್ 2023–26	13.5%	3.2%	3.4%	6.6%

ಸಂಪತ್ತು ಮತ್ತು ಬಡತನದ ತತ್ವ ಜಿಜ್ಞಾಸೆ.....

ಪುಟ 13 ರಿಂದ

ತೆರೆದುಕೊಂಡು ಸಾಯದೆ ಉಳಿದ ಸ್ಥಳೀಯರನ್ನು "ಮೀಸಲಿಟ್ಟ ಸ್ಥಳ" ಗಳಲ್ಲಿ ಕೂಡಿಹಾಕಲಾಯಿತು. ಬ್ರಿಟನ್ ಒಂದರಿಂದಲೇ ಈ "ಹೊಸ ಪ್ರಪಂಚ"ಕ್ಕೆ ಧಾವಿಸಿದ ಈ ವಲಸೆಯ ಗಾತ್ರವು ಅದೆಷ್ಟು ದೊಡ್ಡದಿತ್ತು ಎಂದರೆ, ಈ ಅವಧಿಯಲ್ಲಿ ಪ್ರತಿ ವರ್ಷವೂ ಬ್ರಿಟನ್‌ನಲ್ಲಿ ಜನಿಸಿದವರ ಅರ್ಧದಷ್ಟು ಎಂದು ಅಂದಾಜಿಸಲಾಗಿದೆ.

ಬ್ರಿಟಿಷ್ ಮಾರುಕಟ್ಟೆಯು ಹೊಸದಾಗಿ–ಕೈಗಾರಿಕೀಕರಣಗೊಳ್ಳುತ್ತಿದ್ದ ಈ ವಸಾಹತು ದೇಶಗಳಿಂದ ಪ್ರಾಥಮಿಕ ವಲಯದ ರಫ್ತುಗಳಿಗೆ ಮತ್ತು ಕೈಗಾರಿಕಾ ರಫ್ತುಗಳಿಗೆ ಈ ಎರಡಕ್ಕೂ ಮುಕ್ತವಾದುದರಿಂದ ಮತ್ತು ಬ್ರಿಟನ್ ಕೂಡ ಇದೇ ದೇಶಗಳಿಗೆ ಬಂಡವಾಳವನ್ನು ರಫ್ತು ಮಾಡಿದ್ದರಿಂದ, ಈ ವಸಾಹತು ದೇಶಗಳೊಂದಿಗೆ ಒಂದು ದೊಡ್ಡ ಮೊತ್ತದ ಪಾವತಿ ಶೇಷದ ಕೊರತೆಯನ್ನು ಬ್ರಿಟನ್ ಅನುಭವಿಸಿತು. ಜೊತೆಗೆ, ಈ ಪ್ರದೇಶಗಳಿಂದ ಬ್ರಿಟನ್ ಮಾಡಿಕೊಳ್ಳುತ್ತಿದ್ದ ಆಮದು ಆಧಿಕ್ಯವು ಬ್ರಿಟಿಷ್‌ಅರ್ಥವ್ಯವಸ್ಥೆಯಲ್ಲಿ ನಿರುದ್ಯೋಗವನ್ನು ಸಾಮಾನ್ಯವಾಗಿ ಸೃಷ್ಟಿಸುವ ಅಲ್ಪ ಮಟ್ಟದ ಅಪ–ಕೈಗಾರಿಕೀಕರಣವನ್ನು ಉಂಟುಮಾಡುತ್ತಿತ್ತು ಮತ್ತು ಆಮದು ಮಾಡಿಕೊಂಡ ಸರಕುಗಳ ವಿರುದ್ಧ ಬ್ರಿಟಿಷ್ ಮಾರುಕಟ್ಟೆಯನ್ನು ರಕ್ಷಿಸುವ ಒತ್ತಡವನ್ನು ಸೃಷ್ಟಿಸುತ್ತಿತ್ತು. ಈ ಅಪ–ಕೈಗಾರಿಕೀಕರಣವನ್ನು ಮತ್ತು ಮಾರುಕಟ್ಟೆಯನ್ನು ರಕ್ಷಿಸುವ ಒತ್ತಡವನ್ನು, ಕೈಗಾರಿಕಾ ಕ್ರಾಂತಿಯ ನೇತೃತ್ವ ವಹಿಸಿದ ಹತ್ತಿ ಜವಳಿಯನ್ನು ಒಳಗೊಂಡಂತೆ ಮತ್ತು ತನ್ನದೇ ದೇಶೀಯ ಮಾರುಕಟ್ಟೆಯ ಅಗತ್ಯಗಳಿಗಿಂತ ಅಧಿಕವಾಗಿ ಉತ್ಪಾದನೆಯಾಗುತ್ತಿದ್ದ ಬ್ರಿಟಿಷ್ ಸರಕುಗಳನ್ನು ಅದರ ಉಷ್ಣವಲಯದ ವಸಾಹತುಗಳಿಗೆ ರಫ್ತು ಮಾಡಿ ತಪ್ಪಿಸಲಾಯಿತು. ತನ್ನ ದೇಶದಲ್ಲಿ ಮಾರಲಾಗದ ಬ್ರಿಟನ್, ಉಷ್ಣವಲಯದ ವಸಾಹತುಗಳಲ್ಲಿ ಹೆಚ್ಚು ಮಾರಾಟ ಮಾಡಿದುದನ್ನು "ವಸಾಹತುಗಳಿಗೆ ಹಾರಾಟ" ಎಂದು ಎರಿಕ್ ಹಾಬ್ಸ್‌ಭೌಮ್ ಉಲ್ಲೇಖಿಸುತ್ತಾರೆ. ಇಂತಹ ರಫ್ತುಗಳು ವಸಾಹತುಗಳಲ್ಲಿ ಅಪ–ಕೈಗಾರಿಕೀಕರಣವನ್ನು ಉಂಟುಮಾಡಿದವು. ತಮ್ಮ ಉದ್ಯೋಗಗಳನ್ನು ಕಳೆದುಕೊಂಡ ಸಾಂಪ್ರದಾಯಿಕ ಕೈಕಸಬುಗಾರರು ಮತ್ತು ಕುಶಲಕರ್ಮಿಗಳು, ಎಲ್ಲಕ್ಕಿಂತ ಹೆಚ್ಚಾಗಿ ನೂಲುವವರು ಮತ್ತು ನೇಕಾರರು, ಭೂಮಿಯ ಆಸರೆಗೆ ಎಸೆಯಲ್ಪಟ್ಟರು. ಅದರಿಂದಾಗಿ ಗೇಣಿಗಳು ಏರಿದವು, ವೇತನಗಳು ಕುಸಿದವು ಮತ್ತು ಸಮೂಹ ಬಡತನವು ಏರಿತು.

ಮಿಗುತಾಯ ಗಳಿಕೆಯ ಕಬಳಿಕೆ

ಆ ಅವಧಿಯಲ್ಲಿ (1815–1915) "ಹೊಸದಾಗಿ ಕೈಗಾರಿಕೀಕರಣಗೊಳ್ಳುತ್ತಿದ್ದ ದೇಶಗಳೊಂದಿಗೆ" ಬ್ರಿಟನ್ ಹೊಂದಿದ್ದ ಪಾವತಿ ಶೇಷದ ಕೊರತೆಗಳನ್ನು ಉಷ್ಣವಲಯದ ವಸಾಹತುಗಳಿಂದ ಗಳಿಸಿದ ಎರಡು ಬಾಬತುಗಳ ಮೂಲಕ ಸರಿದೂಗಿಸಿಕೊಂಡಿತು: ಒಂದು, ಮೇಲೆ ಉಲ್ಲೇಖಿಸಲಾದ ಉಷ್ಣವಲಯದ ಈ ವಸಾಹತುಗಳಿಗೆ ಅಪ–ಕೈಗಾರಿಕೀಕರಣಗೊಳಿಸುವ ರಫ್ತುಗಳನ್ನು ಮಾಡುವುದು. ಇನ್ನೊಂದು ಸಂಪತ್ತಿನ ಹರಿವು, ಅಂದರೆ, ಈ ವಸಾಹತುಗಳಿಂದ ಬ್ರಿಟನ್‌ಗೆ ಹರಿದ ಸಂಪತ್ತಿನ ಏಕಮುಖ ವರ್ಗಾವಣೆ: ಭಾರತದಂತಹ ದೇಶಗಳ ಇಡೀ ವಾರ್ಷಿಕ ರಫ್ತುಗಳಿಂದ ಒದಗುವ ಮಿಗುತಾಯ ಗಳಿಕೆಯನ್ನು ಬ್ರಿಟನ್ ಯಾವ ಪ್ರತಿಫಲವನ್ನೂ ಕೊಡದೆ ಪುಕ್ಕಟೆಯಾಗಿ ಕಬಳಿಸಿತು ಮತ್ತು ಇದು ಬ್ರಿಟನ್ ವಸಾಹತುಗಳೊಂದಿಗೆ ಮತ್ತು ಇತರ "ಹೊಸ ಕೈಗಾರಿಕಾ ದೇಶಗಳೊಂದಿಗೆ" ಹೊಂದಿದ್ದ ತನ್ನ ಪಾವತಿ ಶೇಷದ ಕೊರತೆಗಳನ್ನು ಪಾವತಿಸಲು ಸಹಾಯ ಮಾಡಿತು.

ಈ ವ್ಯವಸ್ಥೆಯು ಫಲಕಾರಿಯಾಗಿತ್ತು ಏಕೆಂದರೆ ಉಷ್ಣವಲಯದ ಈ ವಸಾಹತುಗಳು ಯುರೋಪ್ ಖಂಡದೊಂದಿಗೆ, ಹೊಸ ಜಗತ್ತಿನೊಂದಿಗೆ ಮತ್ತು ಜಪಾನಿನೊಂದಿಗೆ ಹೋಲಿಸಿದರೆ, ಅಧಿಕ ರಫ್ತು ವಾಣಿಜ್ಯ ಸರಕುಗಳನ್ನು ಹೊಂದಿದ್ದವು. ಈ ದೇಶಗಳೊಂದಿಗೆ ಭಾರತದ ವಾಣಿಜ್ಯ ಸರಕುಗಳ ಬೃಹತ್ ರಫ್ತುಗಳು, ಇವು ಹಲವು ದಶಕಗಳ ಕಾಲ ವಿಶ್ವದ ಎರಡನೇ ಸ್ಥಾನದಲ್ಲಿದ್ದವು, ಹೊಸ ಜಗತ್ತಿನ ದೇಶಗಳ ಕೈಗಾರಿಕೀಕರಣಕ್ಕೆ ಅಗತ್ಯವಿರುವ ಪ್ರಾಥಮಿಕ ಸರಕುಗಳನ್ನು ಪೂರೈಸುವ ಸಾಮರ್ಥ್ಯದಿಂದ ಹುಟ್ಟಿಕೊಂಡವು. ಬ್ರಿಟನ್, ಹೊಸ ಜಗತ್ತಿನೊಂದಿಗೆ ಹೊಂದಿದ್ದ ತನ್ನ ಸ್ವಂತ ಪಾವತಿ ಶೇಷದ ಕೊರತೆಗಳನ್ನು ಪಾವತಿಸಲು ಈ ಬೃಹತ್ ರಫ್ತುಗಳ ಮಿಗುತಾಯದ ಗಳಿಕೆಗಳನ್ನು ಇಡಿಯಾಗಿ ಮತ್ತು ಪುಕ್ಕಟೆಯಾಗಿ ಸ್ವಾಧೀನಪಡಿಸಿಕೊಂಡಿತು. ಇದು ಪುಕ್ಕಟೆ ಏಕೆಂದರೆ ಬ್ರಿಟನ್ ರೈತರ ರಫ್ತು ಸರಕುಗಳಿಗೆ ಸ್ವತಃ ಅವರು ಕೊಟ್ಟ ತೆರಿಗೆಯ ಹಣದಿಂದಲೇ 'ಪಾವತಿ' ಮಾಡಿತು. ಬಹುಶಃ ಇದು ಉಷ್ಣವಲಯದ ವಸಾಹತುಗಳಲ್ಲಿ ಬಡತನವನ್ನು ಉಂಟುಮಾಡಿದ ಅತ್ಯಂತ ಪ್ರಮುಖ ಮೂಲವಾಗಿದೆ.

ಯಾವುದನ್ನು "ದೀರ್ಘ ಹತ್ತೊಂಬತ್ತನೇ ಶತಮಾನ"(ಮೊದಲನೆಯ ಮಹಾಯುದ್ಧದವರೆಗೆ) ಎಂದು ಹಾಬ್ಸ್‌ಭೌಮ್ ಕರೆದರೋ ಆ ಸಮಯದಲ್ಲಿ ವಸಾಹತುಗಾರರು ನೆಲೆ ನಿಂತ ವಸಾಹತುಗಳಲ್ಲಿ ಮತ್ತು ಇತರೆಡೆಗಳಲ್ಲಿ ಸಂಪತ್ತಿನ ಬೆಳವಣಿಗೆಯಾಗುತ್ತಿತ್ತು ಮತ್ತು ಅದರ ಪ್ರತಿರೂಪವಾಗಿ ಉಷ್ಣವಲಯದ ಗೆದ್ದುಕೊಂಡ ವಸಾಹತುಗಳಲ್ಲಿ (ನೆಲೆ ನಿಂತ ವಸಾಹತುಗಳಿಗಿಂತ ಭಿನ್ನವಾಗಿ), ಆಗಾಗ ತಲೆದೋರುತ್ತಿದ್ದ ಕ್ಷಾಮಗಳ ಕಾರಣವನ್ನೂ ಒಳಗೊಂಡು, ಬಡತನದ ಬೆಳವಣಿಗೆಯಾಗುತ್ತಿತ್ತು. ಸ್ವಾತಂತ್ರ್ಯ ಬಂದ ಸಮಯದಲ್ಲಿದ್ದ ಹಾಗೆ ಭಾರತದಂತಹ ದೇಶಗಳು ಸದಾ ಕಾಲವೂ ಬಡತನದಲ್ಲಿದ್ದವು ಎಂದು ಭಾವಿಸಲಾಗದು. ಆರ್ಥಿಕ ಇತಿಹಾಸಕಾರ್ತಿ ಶಿರೀನ್ ಮೂಸ್ವಿ ಅವರ ಅಂದಾಜನ್ನು ಇಲ್ಲಿ ಉಲ್ಲೇಖಿಸುವುದು ಯೋಗ್ಯವಾಗಿದೆ. ಅಬುಲ್ ಫಜಲ್‌ಎಂಬುವರು ನೀಡಿದ ಮೊಘಲ್ ಭಾರತದ 1575ರ ಆದಾಯದ ಅಂಕಿಅಂಶಗಳಿಂದ ಅವರುತಲಾಆದಾಯವನ್ನು ಅಂದಾಜಿಸಿದ್ದಾರೆ ಮತ್ತು ಅದನ್ನು ಎಸ್. ಸುಬ್ರಮಣಿಯನ್ ಒದಗಿಸಿದ 1910 ವರ್ಷದ ಇಡೀ ಭಾರತದ ತಲಾ ಆದಾಯದ ಅಂಕಿ ಅಂಶದೊಂದಿಗೆ ಹೋಲಿಕೆ ಮಾಡಿದ ನಂತರ ಅವರು ಕಂಡ ಫಲಿತಾಂಶವೆಂದರೆ, ಬ್ರಿಟಿಷ್ ಭಾರತದಲ್ಲಿ ತಲಾ ಆದಾಯವು ಮೊಘಲ್ ಭಾರತದಲ್ಲಿ ಇದ್ದುದಕ್ಕಿಂತಲೂ, ನಿಜ ಮೌಲ್ಯದ ಪರಿಭಾಷೆಯಲ್ಲಿ, ಕೆಳಗಿತ್ತು.

ಉಷ್ಣವಲಯದ ವಸಾಹತುಗಳಿಂದ ಮಿಗುತಾಯದ ಒಂದು ಭಾಗವನ್ನು ಹೀರುವ ಮೂಲಕ ಕೈಗಾರಿಕಾ ಬಂಡವಾಳಶಾಹಿಯು ದೀರ್ಘ ಹತ್ತೊಂಬತ್ತನೇ ಶತಮಾನದಲ್ಲಿ ವಿಸ್ತಾರವಾಗಿ ಹರಡುವುದು ಸಾಧ್ಯವಾಯಿತು. "ಹೊಸ ಕೈಗಾರಿಕಾ ದೇಶಗಳಿಗೆ" ಬ್ರಿಟನ್ ಮಾರುಕಟ್ಟೆ ಪ್ರವೇಶವನ್ನು ಒದಗಿಸಿದುದರ ಪ್ರತಿರೂಪವಾಗಿ ತನ್ನ ಉಷ್ಣವಲಯದ ವಸಾಹತುಗಳ ಮಾರುಕಟ್ಟೆಗಳನ್ನು ಅತಿಕ್ರಮಿಸಿಕೊಂಡಿತು. ಮಿಗುತಾಯವನ್ನು ಹೀರುವ ಮತ್ತು ಮಾರುಕಟ್ಟೆಗಳನ್ನು ಅತಿಕ್ರಮಿಸಿಕೊಳ್ಳುವ ಈ ಎರಡೂ ಕ್ರಮಗಳೂ ವಸಾಹತುಗಳಲ್ಲಿ ಆಧುನಿಕ ಸಮೂಹ ಬಡತನವನ್ನು ಉಂಟುಮಾಡಿದ ಬಂಡವಾಳದ ಆದಿಮ ಶೇಖರಣೆಯ ಪ್ರಕ್ರಿಯೆಯ ಭಾಗವಾಗಿದ್ದವು. ಆದರೆ, ಬಂಡವಾಳದ ಈ ಆದಿಮ ಕ್ರೋಢೀಕರಣದ ಫಲಾನುಭವಿಗಳು ಯುರೋಪಿಯನ್ನರು ನೆಲೆ ನಿಂತ ಸಮಶೀತೋಷ್ಣ ಪ್ರದೇಶಗಳ ವಸಾಹತುಗಳಾಗಿದ್ದವು. ಆದ್ದರಿಂದ, ಅವರ ಸಂಪತ್ತು ಅಗಾಧವಾಗಿ ವೃದ್ಧಿಸಿತು. ಸಂಪತ್ತಿನ ಕ್ರೋಢೀಕರಣ ಮತ್ತು ಬಡತನದ ಕ್ರೋಢೀಕರಣ ಇವು ದ್ವಂದ್ವಾತ್ಮಕ ಸಂಬಂಧ ಹೊಂದಿವೆ. ಆದರೆ, ಈ ಸತ್ಯವನ್ನು ಬೂರ್ಜ್ವಾ ಅರ್ಥಶಾಸ್ತ್ರವು ಯಾವ ಸಂದರ್ಭದಲ್ಲೂ ಒಪ್ಪಿಕೊಳ್ಳುವುದಿಲ್ಲ.

"ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ನ ಕಾಲ ಈಗ ಮುಗಿದಿದೆ..... ಪುಟ 7 ರಿಂದ

ಸಬ್ಸಿಡಿಗಳ ಕಡಿತ ಮತ್ತು ಅಥವಾ ನಿರ್ಮೂಲನೆ ಮುಂತಾದವನ್ನು ಒಳಗೊಂಡಿವೆ. ಜಾಗತಿಕ ದಕ್ಷಿಣದಾದ್ಯಂತ ಅಸ್ತಿತ್ವದಲ್ಲಿದ್ದ ಸಾರ್ವಜನಿಕ ವಲಯ ಗಣನೀಯವಾಗಿ ಕುಗ್ಗಿದೆ ಮಾತ್ರವಲ್ಲ, ದೃಢವಾದ ಸಾರ್ವಜನಿಕ ವಲಯಗಳನ್ನು ನಿರ್ಮಿಸುವ/ಮತ್ತೆ ಕಟ್ಟುವ ಸನ್ನಿವೇಶವನ್ನೇ ನಿರ್ಮೂಲಗೊಳಿಸಲಾಗಿದೆ.

ಗ್ರಾಮೀಣ ಮತ್ತು ನಗರ ಕಾರ್ಮಿಕ ವರ್ಗಗಳು, ಬಡ ಸಮುದಾಯಗಳು, ಮಹಿಳೆಯರು, ಸಣ್ಣ ಪ್ರಮಾಣದ ಆಹಾರ ಉತ್ಪಾದಕರು, ಮೂಲನಿವಾಸಿಗಳು ಮತ್ತು ಇತರ ಅಂಚಿನಲ್ಲಿರುವ ಗುಂಪುಗಳು ಈ ನೀತಿಗಳಿಂದ ಅತಿ ಹೆಚ್ಚು ಹಾನಿಗೊಳಗಾಗಿವೆ.

ಸಂರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳ ಮುಖ್ಯನೀತಿ ಷರತ್ತುಗಳು, ಮಿತವ್ಯಯದ ಕ್ರಮಗಳು ಮತ್ತು ತಥಾಕಥಿತ ಅಭಿವೃದ್ಧಿ ನೀತಿ ಮತ್ತು ಹಣಕಾಸಿನ ಸ್ಥಿರೀಕರಣ ಸಾಲಗಳು ಹಿಂದಿನ ವಸಾಹತುಶಾಹಿ ಶಕ್ತಿಗಳಾಗಿದ್ದ ಪಾಶ್ಚಿಮಾತ್ಯ ದೇಶಗಳ ಆರ್ಥಿಕ ಹಿತಾಸಕ್ತಿಗಳಿಗೆ ಅನುಗುಣವಾಗಿವೆ. ಈ ನೀತಿಗಳನ್ನು 'ವಾಷಿಂಗ್ಟನ್ ಒಮ್ಮತ' ಎಂದು ಕರೆಯಲಾಗುತ್ತದೆ, ಇದು ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯ ಶಕ್ತಿಯನ್ನು ಹೆಚ್ಚಿಸಿತು ಮತ್ತು ಜಾಗತಿಕ ದಕ್ಷಿಣದ ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಸಂಪನ್ಮೂಲಗಳ ಮೇಲೆ ಜನರ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ದುರ್ಬಲಗೊಳಿಸಿ ದುಷ್ಟ ಸಾಲದ ಬಲೆಗಳಲ್ಲಿ ಸಿಲುಕಿಸಿದ ಹಣಕಾಸು–ಆರ್ಥಿಕ ಆಡಳಿತದ ರೂಪಗಳನ್ನು ಸ್ಥಾಪಿಸಿತು ಎಂದು ನೆನಪಿಸಿರುವ ಈ ಹೇಳಿಕೆ "ಜಾಗತಿಕ ದಕ್ಷಿಣ ಮತ್ತು ಉತ್ತರದಲ್ಲಿ ಪ್ರಪಂಚದಾದ್ಯಂತ ಜನರು ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ವಿರುದ್ಧ ಬಂಡೆದ್ದಿದ್ದಾರೆ, ಇದು ಅವರ ನೀತಿಗಳು ಮತ್ತು ಷರತ್ತುಗಳನ್ನು ಪ್ರಶ್ನಿಸಿ ಬೃಹತ್ ಪ್ರತಿಭಟನೆಗಳಿಗೆ ಕಾರಣವಾಗಿದೆ" ಎನ್ನುತ್ತ, ಅವುಗಳ ಮೂಲಗಳು, ಇತಿಹಾಸ ಮತ್ತು ನಡೆದು ಬಂದ ದಾರಿಯನ್ನು ಗಮನಿಸಿದರೆ, ಅವನ್ನು ಸುಧಾರಿಸುವುದು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ ಎಂದಿದೆ.

ಅವುಗಳಲ್ಲಿ ಅರ್ಥಪೂರ್ಣ ಬದಲಾವಣೆಗೆ, ಆ ದುಷ್ಟ ಶಕ್ತಿಗಳು ಒಳ್ಳೆಯ ಶಕ್ತಿಗಳಾಗಿ ರೂಪಾಂತರಗೊಳ್ಳುವುದಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಈಗ ಆರ್ಥಿಕ, ಸಾಮಾಜಿಕ, ಪರಿಸರ, ಹವಾಮಾನ ಮತ್ತು ರಾಜಕೀಯ ನ್ಯಾಯದ ನಡುವಿನ ಅಂತರ–ಸಂಬಂಧಗಳನ್ನು ಗುರುತಿಸುವ ಹೊಸದೊಂದು ಹಣಕಾಸು ಮತ್ತು ಆರ್ಥಿಕ ಆಡಳಿತ ಚೌಕಟ್ಟನ್ನು ರೂಪಿಸಬೇಕಾಗಿದೆ. ಇದು ನಿಸರ್ಗದ ಹಣಕಾಸೀಕರಣವನ್ನು ಕೊನೆಗೊಳಿಸಬೇಕು, ಮೂಲನಿವಾಸಿ ಜನಗಳ, ಸ್ಥಳೀಯ ಸಮುದಾಯಗಳ, ಕಾರ್ಮಿಕರ, ಮಹಿಳೆಯರ ಮತ್ತು ಯುವಜನರ ಹಕ್ಕುಗಳನ್ನು ರಕ್ಷಿಸಬೇಕು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಆರ್ಥಿಕ ಶಕ್ತಿಯನ್ನು ಕಾನೂನಾತ್ಮಕವಾಗಿ ನಿಯಂತ್ರಿಸುವಂತಿರಬೇಕು.

ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ನ ಕಾಲ ಈಗ ಮುಗಿದಿದೆ. ಹಳಸಲಾಗಿರುವ ಈ ಸಂಸ್ಥೆಗಳ ಸ್ಥಾನದಲ್ಲಿ ಎಲ್ಲ ಸಮುದಾಯಗಳು ಮತ್ತು ದೇಶಗಳ ಅಗತ್ಯಗಳನ್ನು ಮತ್ತು ಆಕಾಂಕ್ಷೆಗಳನ್ನು ಬಿಂಬಿಸುವ ಸಂಸ್ಥೆಗಳನ್ನು ನಿರ್ಮಿಸಬೇಕು. ಹಾಗೆ ಮಾಡಿದರೆ ಮಾತ್ರವೇ ನಾವು ಒಂದು ಹೆಚ್ಚು ನ್ಯಾಯಯುತವಾದ, ಸಮತ್ವದ ಮತ್ತು ಸುಸ್ಥಿರ ಜಗತ್ತನ್ನು ಕಟ್ಟಲು ಸಾಧ್ಯ ಎಂದು ಈ ಹೇಳಿಕೆ ಅಭಿಪ್ರಾಯ ಪಟ್ಟಿದೆ. ❍

50ನೇ ಸಿಜೆಐ–ದೈವಪ್ರೇರಣೆ, ಚರಿತ್ರೆಯಲ್ಲಿ ನೆನಪು ಇತ್ಯಾದಿ...... ಪುಟ 12 ರಿಂದ

ಇನ್ನೊಬ್ಬರು ರಾಜ್ಯಪಾಲ ಹುದ್ದೆ ಪಡೆದದ್ದು, ಮತ್ತೊಬ್ಬರು ಒಂದು ಮಹತ್ವದ ರಾಷ್ಟ್ರಮಟ್ಟದ ಟ್ರಿಬ್ಯುನಲ್‌ನ ಅಧ್ಯಕ್ಷ ಪದವಿ ಪಡೆದದ್ದನ್ನು ನೆನಪಿಸಿದ್ದಾರೆ. ಪ್ರಸಕ್ತ ಸಿಜೆಐ ರವರ ತವರು ರಾಜ್ಯ ಮಹಾರಾಷ್ಟ್ರ ಒಂದು ಮಹತ್ವದ ಚುನಾವಣೆಗೆ ಸಿದ್ಧಗೊಳ್ಳುತ್ತಿದೆ ಎಂಬುದನ್ನು ಕೂಡ ಅವರು ನೆನಪಿಸುತ್ತಾರೆ.

ತನ್ನನ್ನು ಇತಿಹಾಸ ಹೇಗೆ ನೆನಪಿಸಿಕೊಳ್ಳುತ್ತದೆ ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಯೋಚಿಸುತ್ತಿದ್ದಾರೆ ಎಂದೂ ವರದಿಯಾಗಿದೆ. "ಭಾರತೀಯ ಸೆಕ್ಯುಲರಿಸಂನ ಭವ್ಯ ಕಟ್ಟಡವನು ಧ್ವಂಸ ಮಾಡುತ್ತಿದ್ದಾಗ, ಹಲವು ನ್ಯಾಯಾಧೀಶರು ಹೇಗೆ ಕಿತ್ತು ಹಾಕುವ ಕ್ರಿಯೆಯಲ್ಲಿ ಕೈ ಜೋಡಿಸಿದರು. ಅದರಲ್ಲಿ ನ್ಯಾಯಮೂರ್ತಿ ಚಂದ್ರಚೂಡ್ ಎಂಬ ಹೆಸರೂ ಇರುತ್ತದೆಯೇ? ಇದೇ ಅವರನ್ನು ಚಿಂತೆಗೀಡು ಮಾಡುತ್ತಿದೆಯೇ?" ಎಂದು ದಿಲ್ಲಿ ವಿಶ್ವವಿದ್ಯಾಲಯದ ಪ್ರಸಿದ್ಧ ಸಾರ್ವಜನಿಕ ಚಿಂತಕ ಪ್ರೊ. ಅಪೂರ್ವಾನಂದ ಕೇಳುತ್ತಾರೆ (ದಿ ವೈರ್, 24 ಅಕ್ಟೋಬರ್) ❍

'ಜನಶಕ್ತಿ' ಪತ್ರಿಕೆಯ ಸಂಪಾದಕರಾಗಿ 'ನಿರಂಜನ'.... ಪುಟ 16 ರಿಂದ

ಸಂತೋಷವನ್ನೂ ಅವರು ಅನುಭವಿಸಿದ್ದಾರೆ. ಕಲೆ ಸಾಹಿತ್ಯ, ಸಂಸ್ಕೃತಿಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಈ ಸುಸಂಸ್ಕೃತ ಚೇತನವನ್ನು ಕಂಡು ನಾನು ಬೆರಗಾಗಿದ್ದೇನೆ. ಕನ್ನಡ ನಾಡಿಗೆ, ನುಡಿಗೆ, ಮಾನವ ಜನಾಂಗಕ್ಕೆ ಇವರು ಸಲ್ಲಿಸಿರುವ ಅಪೂರ್ವ ಕೊಡುಗೆಗಳನ್ನು ಕಂಡು, ಅಭಿಮಾನದಿಂದ ಕಣ್ಣುಗಳನ್ನು ತುಂಬಿಕೊಳ್ಳುತ್ತೇನೆ. ಬದುಕನ್ನು ಪ್ರೀತಿಸುವ, ಅರ್ಥೈಸುವ, ಗೌರವಿಸುವ ನಿರಂಜನರು ಧೀರ ಹೋರಾಟಗಾರರು, ಬಹುಮುಖ ಸಾಧಕರು.

ಪಕ್ಷವನ್ನೂ ಅದರ ಧೋರಣೆಯನ್ನೂ ಜನಪ್ರಿಯಗೊಳಿಸಿದರು: ಹಿರಿಯ ಕವಿ ಸುರಂ ಎಕ್ಕುಂಡಿ

ಕನ್ನಡ ನಾಡಿನ ಹಿರಿಯ ಕವಿ ಸುರಂ ಎಕ್ಕುಂಡಿ (ಸುಬ್ಬಣ್ಣ ರಂಗನಾಥ ಎಕ್ಕುಂಡಿ) ಯವರು ನಿರಂಜನರು ಮತ್ತು ಜನಶಕ್ತಿ ಪತ್ರಿಕೆಯ ಕುರಿತು ಹೀಗೆ ಬರೆದಿದ್ದಾರೆ. "ನಲ್ವತ್ತು, ನಲ್ವತ್ತೆರಡು ವರ್ಷಗಳ ಹಿಂದೆ ನಡೆದ ವಿಷಯ ಇದು. ಆಗ ತಾನೆ ನಾನು ಕಾಲೇಜಿನ ಗ್ರಾಜುಯೆಟ್ ಪರೀಕ್ಷೆ ಮುಗಿಸಿಕೊಂಡು ಬಂದಿದ್ದೆ. ಕಾವ್ಯ, ಸಾಹಿತ್ಯಗಳಲ್ಲಿ ಹಲವು ಕನಸುಗಳನ್ನು ಕಾಣುತ್ತಿದ್ದ ನನಗೆ ನಿರಂಜನರ ಪರಿಚಯವಾದದ್ದು ಒಂದು ಭಾಗ್ಯವೆಂದು ಎಣಿಸಿದ್ದೇನೆ. ಅವರು ಆಗ ಹುಬ್ಬಳ್ಳಿಯಲ್ಲಿ 'ಕಮ್ಯೂನಿಸ್ಟ್ ಪಕ್ಷ'ದ ಸಕ್ರಿಯ ಕಾರ್ಯಕರ್ತರಾಗಿದ್ದು, ಪಕ್ಷದ ಕಛೇರಿಯ ಚೈತನ್ಯ ಕೇಂದ್ರವಾಗಿದ್ದರು. ದೇಶ ಸ್ವತಂತ್ರವಾಗುವ ಮೊದಲ ದಿನಗಳಲ್ಲಿ, ಕಮ್ಯೂನಿಸ್ಟ್ ಪಕ್ಷದ ಧೋರಣೆಯನ್ನು ನಮ್ಮ ಅಂದಿನ ರಾಜಕೀಯ ಸಂದರ್ಭದಲ್ಲಿ 'ವಿದ್ರೋಹ ಧೋರಣೆ' ಎಂದು ಪರಿಗಣಿಸಲಾಗುತ್ತಿತ್ತು. ಫಾಸಿಸ್ಟ್ ವಿರೋಧಿ ಸಮರವನ್ನು ಪಕ್ಷವು ಬೆಂಬಲಿಸಿದ್ದರಿಂದ, ಆಗಿನ ಧುರೀಣರಿಗೆ 'ಅಪಚಾರವೆಂದೇ ಕಂಡಿತ್ತು. ಹೀಗಾಗಿ ಕಮ್ಯೂನಿಸ್ಟರ 'ಬೇಟೆ'ಯೂ ಪ್ರಾರಂಭಗೊಂಡದ್ದರಿಂದ ಅನೇಕ ಕಾರ್ಯಕರ್ತರು ಭೂಗತರಾಗಿದ್ದರು. ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಉಪಾಧ್ಯಾಯರೂ 'ಅಜ್ಞಾತ' ವಾಸದಲ್ಲಿ ಇದ್ದು, ಆಗಾಗ ಪಕ್ಷದ ಕಚೇರಿಗೆ ನೆರಳಿನಂತೆ ಬಂದು ಇದ್ದು ಹೋಗುತ್ತಿದ್ದರು.

ಅಂಥ ದಿನಗಳಲ್ಲಿ ನಿರಂಜನರು ಪಕ್ಷವನ್ನೂ, ಅದರ ಧೋರಣೆಯನ್ನೂ ಜನಪ್ರಿಯಗೊಳಿಸಿದರು. ಅವರ ವ್ಯಕ್ತಿತ್ವವೇ ಅಷ್ಟೊಂದು ಆಕರ್ಷಕವಾಗಿತ್ತು. ಸ್ನೇಹಪರವಾದ ನಡೆನುಡಿಗಳಿಂದ, ತಾನು ನಂಬಿದ ಧೋರಣೆಗೆ ಸಂಪೂರ್ಣ ಸಮರ್ಪಿಸಿಕೊಂಡು, ಎಲ್ಲರೊಂದಿಗೆ ತನ್ನ ಕನಸನ್ನು ಹಂಚಿಕೊಳ್ಳಲು, ಅವಿರತವಾಗಿ ದುಡಿಯುತ್ತಿದ್ದ ಅವರ ಉತ್ಸಾಹವು ಎಲ್ಲರನ್ನೂ ಅವರತ್ತ ಕರೆದೊಯ್ಯುತ್ತಿತ್ತು. ಪಕ್ಷದ ರಾಜಕೀಯ ಚಟುವಟಿಕೆಗಳನ್ನು ದಕ್ಷತೆಯಿಂದ ತೂಗಿಸುತ್ತ, ಪಕ್ಷದ ಪರವಾಗಿ ಒಂದು ಪತ್ರಿಕೆಯನ್ನೂ ಅವರಾಗ ನಡೆಸುತ್ತಿದ್ದರು. ಕಾರ್ಖಾನೆಯ ಸಿಳ್ಳು ಊದಿದೊಡನೆಯೆ, ಪತ್ರಿಕೆಯನ್ನು ಕಾರ್ಮಿಕರ ಕೈಯಲ್ಲಿಡಲು ಅವರ ಸಂಗಾತಿಗಳು ಶ್ರಮಿಸುತ್ತಿದ್ದರು. ಕಾವ್ಯ, ಕಲೆ, ಸಾಹಿತ್ಯ ಪ್ರಪಂಚದಲ್ಲಿ ಕಾಲಿಡಲು ಹವಣಿಸುತ್ತಿದ್ದ ಅನೇಕರು ಪಕ್ಷದ ಕಚೇರಿಯಲ್ಲಿ ಕಾಲಿಡುತ್ತಿದ್ದರು. ಅವರ ಆಗಿನ ಸಂಗಾತಿಗಳು ಶಿವೇಶ್ವರ ದೊಡ್ಡಮನಿ, ಸದಾಶಿವ, ಹ.ವೆಂ.ನಾ. ಮುಂತಾದವರು ಮುಂದೆ ಕನ್ನಡದಲ್ಲಿ ಒಳ್ಳೆಯ ಹೆಸರು ಗಳಿಸಿದರು.

"ವ್ಯಕ್ತಿಯ ಇಲ್ಲವೆ ವ್ಯಕ್ತಿನಿಷ್ಠ ಅನುಭವದ ಸುತ್ತ ಬರೆಯುವುದಕ್ಕಿಂತ ಒಂದು ಧ್ಯೆಯ, ಒಂದು ಕನಸಿನ ಸುತ್ತ ಸಾಹಿತ್ಯ ರಚಿಸುವುದೆ ಆರೋಗ್ಯಕರ" ಎಂದು ಸದಾ ಹೇಳುತ್ತಿದ್ದ ನಿರಂಜನರು, ಯುವಮಿತ್ರರಿಗೆ ತಮ್ಮ ಬಳಿಯಲ್ಲಿದ್ದ ಅನೇಕ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದಲು ನೀಡಿ ನೆರವಾಗುತ್ತಿದ್ದರು. "ಸಾಹಿತ್ಯ, ಕಾವ್ಯ, ಕಲೆ ಹೆಚ್ಚು ಹೆಚ್ಚು ಜನಪರವಾಗಬೇಕು, ವಾಸ್ತವವಾಗಬೇಕು, ಬದುಕಲು ಹೋರಾಡುತ್ತಿರುವವರ ಬೆಂಬಲಕ್ಕಿರಬೇಕು" ಎಂದು ಹೇಳುತ್ತಿದ್ದರು. ಆ ದಿನಗಳಲ್ಲಿ ನನಗೆ ಜಾಕ್ ಲಂಡನ್, ಗಾರ್ಕಿ ಅವರ ಕಥೆ ಕಾದಂಬರಿಗಳನ್ನು ಪರಿಚಯಿಸಿದರು. ಮಾಯಕೊವಾಸ್ಕಿಯ ಕಾವ್ಯದ ಕ್ಷಿತಿಜ ತೆರೆದು ತೋರಿಸಿದರು. ಮದಾಮ್ ಪಾಸ್ತನೋರಾರ ಭಾವಪೂರ್ಣ ಉಪನ್ಯಾಸಗಳು, ಪಾಲ್ ರೋಬಸನ್ನನ ಕಲೆಯ ಮಹತ್ತ್ವ ನನಗೆ ತಿಳಿದಿದ್ದು ಆ ದಿನಗಳಲ್ಲಿ.

ನಿರಂಜನರ 'ಜನಶಕ್ತಿ'ಯು ಹೊಸ ಅಲೆಗಳನ್ನೆಬ್ಬಿಸಿ...

ಕಮ್ಯೂನಿಸಂ ಕ್ರಾಂತಿ, ವಿದ್ರೋಹಗಳ ಹಲ್ಲು, ಪಂಜುಗಳಿರುವ ಕ್ರೂರ ಮೃಗವೆಂದು ನಮ್ಮ ಧುರೀಣರು ಪದೇ ಪದೇ ಹೇಳುತ್ತಿದ್ದರು. ಆದರೆ ದುಡಿಯುವ ಜನರನ್ನು ವಂಚಿಸಿ, ಸುಲಿಯುತ್ತಿರುವ ಮೃಗಗಳಿಂದ ಅವರನ್ನು ವಿಮುಕ್ತಗೊಳಿಸಿ, ಸಂಪದ್ಭರಿತವಾದ, ಕ್ರಿಯಾಶೀಲವಾದ ಹೊಸ ಬದುಕನ್ನೂ, ಹೊಸ ಜಗತ್ತನ್ನೂ ಸೃಷ್ಟಿಸಲು ಹೆಣಗುವ ಒಂದು ಸಿದ್ಧಾಂತವೆಂಬುದನ್ನು ಮಾರ್ಕ್ಸ್ ಹಾಗೂ ಲೆನಿನ್ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದರು. ನಿರಂಜನರು ತನ್ನ ಕೃತಿಗಳಲ್ಲಿ, ಪತ್ರಿಕೆಯಲ್ಲಿ ಇದನ್ನೆ ಪ್ರತಿಪಾದಿಸುತ್ತಿದ್ದರು. ಹುಬ್ಬಳ್ಳಿಯ ಅಂದಿನ ಜಿಡ್ಡುಗಟ್ಟಿದ ರಾಜಕೀಯ ಹಾಗೂ ಪ್ರತಿಗಾಮಿ ಸಾಹಿತ್ಯಕ ಸಂದರ್ಭದಲ್ಲಿ, ನಿರಂಜನರ 'ಜನಶಕ್ತಿ'ಯು ಹೊಸ ಅಲೆಗಳನ್ನೆಬ್ಬಿಸಿ, ಹೊಸ ಕಣ್ಣುಗಳಿಂದ ನೋಡುವ ಅವಕಾಶ ಉಂಟುಮಾಡಿತು. ಯುವ ಲೇಖಕರಲ್ಲಿ ಪುರೋಗಾಮಿ ಚಿಂತನೆ ಹಾಗೂ ಬದುಕಿನ ವಾಸ್ತವಗಳ ಗಾಢ ಕಾಳಜಿಗಳನ್ನು ಮೂಡಿಸುವಂತೆ ಪ್ರೇರಣೆ ನೀಡಿತು. ಪುರೋಗಾಮಿ ಪ್ರಕಾಶನವನ್ನು ಆರಂಭಿಸಿ, ಆಮೇಲೆ ನಿರಂಜನ, ಅವರ ಮಿತ್ರ ವಾಸುದೇವ ಅವರೂ ಹಲವು ಕೃತಿಗಳನ್ನು ಪ್ರಕಟಿಸಿದರು. ಆ ದಿನಗಳಲ್ಲಿ ಹುಬ್ಬಳ್ಳಿಯಲ್ಲೊಂದು ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಜರುಗಿಸಿ ಜಿಲ್ಲೆಯ ಬರಹಗಾರರಲ್ಲಿ ಪುರೋಗಾಮಿ ವಿಚಾರಧಾರೆಗೆ ಒಂದು ಬುನಾದಿಯನ್ನು ಹಾಕಿದರು. ಏಕೀಕರಣದ ಚಳುವಳಿಗೆ ದುಡಿಯುವ ಜನರ, ರೈತರ ಬೆಂಬಲದ ವ್ಯಾಪಕ ತಳಹದಿಗೆ ನಿರಂಜನರ ಹಾಗೂ ಅವರ ಸಂಗಾತಿಗಳ ಶ್ರಮವು ಪರೋಕ್ಷವಾಗಿ ನೆರವಾಯಿತೆಂದೂ ಹೇಳಿದರೆ ತಪ್ಪಾಗದು.

ನಿರಂಜನರ ಪತ್ರಿಕೆಯೂ, ಪಕ್ಷವೂ ಆ ದಿನಗಳಲ್ಲಿ ಯುವಜನರಲ್ಲಿ ಉಂಟು ಮಾಡಿದ ಪುರೋಗಾಮಿ ಕಾಳಜಿಗಳೇ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಒಂದು ಹೊಸ ಅಲೆಯನ್ನೆಬ್ಬಿಸಿದವು. ಇವರಿಗಿಂತ ಮುಂಚೆ, ಅ.ನ.ಕೃ., ಬಸವರಾಜ ಕಟ್ಟೀಮನಿ, ತ.ರಾ.ಸು., ಚದುರಂಗ ಮುಂತಾದವರು ಇಂಥ ಒಂದು ತಿರುವನ್ನು ಕನ್ನಡಕ್ಕೆ ನೀಡಲು ತುಂಬ ಶ್ರಮಿಸಿದ್ದರು. ಆದರೆ ನಿರಂಜನರ ಪ್ರಯತ್ನದಿಂದಾಗಿ ಅದರ ಅಲೆಗಳು, ಹುಬ್ಬಳ್ಳಿ ಧಾರವಾಡಗಳತ್ತ ಬಂದು ತಲುಪಿ, ಬಡತನ ಹಸಿವುಗಳು ಕೂಡ ಸಾಹಿತ್ಯದ ವಿಷಯವಾಗಬಲ್ಲವೆಂದು ಮನಗಾಣಿಸಿದವು.

ಈ ಮುಂಚೆಯೂ ಅವರು ಕಾರವಾರಕ್ಕೆ ಬಂದಿದ್ದರೇನೊ ನಿಜ. ಹಲವಾರು ಬಾರಿ ಪಕ್ಷದ ಕಾರ್ಯಸಂಘಟನೆಗೆ ಸಂಗಾತಿಗಳನ್ನು ಕಾಣಲಿಕ್ಕೆ ಮತ್ತೆ ಕೆಲವು ಬಾರಿ ಸರಕಾರ ಅವರನ್ನು ಮೊಕದ್ದಮೆಗೆ ಗುರಿಮಾಡಿದಾಗ ನಿರಂಜನರು ಬರುತ್ತಿದ್ದರು. ತಲಚೇರಿ ರಂಗರಾಯರು ಅವರ ಪರವಾಗಿ ವಾದಿಸಿದ್ದರು. ನಂತರ ಮೊಕದ್ದಮೆಯಿಂದ ಅವರು ಲಘು ಶಿಕ್ಷೆಯೊಂದಿಗೆ ಮುಕ್ತರಾದರು. ಈ ನಡುವಣ ದಿನಗಳಲ್ಲಿ ಭೂಗತರಾಗಿ ಪಕ್ಷದ ಸಂಘಟನೆಗಾಗಿ ಅವರು ತುಂಬ ಶ್ರಮಿಸಿದರು. ಅದರಲ್ಲೂ, ಸಾಹಿತ್ಯ ಕ್ಷೇತ್ರದಲ್ಲಿಯ ಅವರ ದುಡಿಮೆಯಂತೂ ಅಚ್ಚರಿಯುಂಟುಮಾಡುವಂಥದಾಗಿದೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಸನ್ಮಾನ ಸಮಾರಂಭವೊಂದರಲ್ಲಿ ನಿರಂಜನ ಹೇಳಿದರು: "ನಾನು ಕನಸುಗಳನ್ನು ಹೊತ್ತುಕೊಂಡು ಹೊರಟವನು. ಹೀಗಾಗಿ ನನಗೆ ಬದುಕಿನಲ್ಲಿ ಕನಸುಗಳು ಮುಖ್ಯವೇ ಹೊರತು. ವಾಸ್ತವದ ಫಲಾಫಲಗಳಲ್ಲ." ತಮ್ಮ ಕನಸುಗಳನ್ನು ರಾಜಕೀಯದಲ್ಲಿ, ಸಾಹಿತ್ಯದಲ್ಲಿ ಅವರು ಧಾರಾಳವಾಗಿ ಹಂಚಿಕೊಂಡರು. ಬದುಕಿನಲ್ಲಿ ಇವನ್ನು ಎಲ್ಲರ ಹೃದಯಕ್ಕೆ ತಲುಪಿಸಲು ಹೋರಾಡಿದರು. ಈ ಹೋರಾಟದ ದಾರಿ ಅವರಿಗೆ ಬರಿ ಸುಖದೃಷ್ಟೇ ಆಗಿದ್ದಿಲ್ಲ. ಎಷ್ಟೋ ಕಷ್ಟಗಳನ್ನು ಅವರು ಎದುರಿಸಿ ಧೈರ್ಯವಾಗಿ ನಿಂತರು. ಈ ಧೈರ್ಯ, ಛಲ, ಅವಿಶ್ರಾಂತ ದುಡಿಮೆಗಳ ಫಲವಾಗಿ ಅಪಾರ ಸಾಹಿತ್ಯವನ್ನು ಸೃಷ್ಟಿಸಿದರು."

ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ 1947 ಮೇ 1 ರಂದು ಆರಂಭವಾದ 'ಜನಶಕ್ತಿ' ಪತ್ರಿಕೆಯು ಕೊರತೆಗಳ ನಡುವೆಯೂ ಹಲವು ಸ್ವರೂಪಗಳನ್ನು ಪಡೆದು ಇಂದಿಗೂ ರಾಜ್ಯದ ದುಡಿಯುವ ಜನರ ಪ್ರಾಣಮಿತ್ರವಾಗಿ ಪ್ರಕಟಗೊಳ್ಳುತ್ತಿದೆ. ನಿರಂಜನರು ಸಂಪಾದಕರಾಗಿ ಶುರುವಾದ 'ಜನಶಕ್ತಿ' ಪತ್ರಿಕೆಯನ್ನು ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ನಿರಂಜನರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ಬೆಳೆಸಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 4-10, 2024 Price: Rs. 10/- Date of Publication: 01 November 2024 RNI No. KARKAN /2006/17926 Posted on 05-11-2024
Posted at BG PSO, BG - 560026 **Posted at Periodical Rate -** Rs. 2

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮರೆಯಲಾಗದ ಹೆಸರು ಕುಳುಕುಂದ ಶಿವರಾಯ 'ನಿರಂಜನ'. ನಿರಂಜನರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರ ಕೃತಿಗಳನ್ನು ಮರು ಓದುವ ಮತ್ತು ಸಮಕಾಲೀನ ಸಂದರ್ಭದಲ್ಲಿ ಅವುಗಳನ್ನು ಓರೆಗಚ್ಚುವ ಮೂಲಕ ನಿರಂಜನರನ್ನು ಅವರ ಬರಹಗಳ ಮೂಲಕ ಮತ್ತೆ ಮತ್ತೆ ಸಂದಿಸುವ ಪ್ರಯತ್ನಗಳು ನಡೆಯುತ್ತಿವೆ. ಅಂತಹ ಪ್ರಯತ್ನದ ಭಾಗವಾಗಿ ಪತ್ರಕರ್ತರಾಗಿ ಕೆಲಸ ಆರಂಭಿಸಿದ ನಿರಂಜನರು, ಭಾರತ ಕಮ್ಯೂನಿಸ್ಟ್ ಪಕ್ಷದ ಮುಖವಾಣಿ "ಜನಶಕ್ತಿ" ಪತ್ರಿಕೆಯ ಸಂಪಾದಕರಾಗಿ ಮಾಡಿದ ಕೆಲಸಗಳ ಕುರಿತು ನಾಡಿನ ವಿವಿಧ ಗಣ್ಯರು 'ನಿರಂಜನ ಅಭಿನಂದನ' ಕೃತಿಯಲ್ಲಿ ಧಾಖಲಿಸಿರುವ ಲೇಖನಗಳಿಂದ ಹೆಕ್ಕಿದ ಅಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. – ಎಚ್.ಆರ್. ನವೀನ್ ಕುಮಾರ್, ಹಾಸನ

'ಜನಶಕ್ತಿ' ಪತ್ರಿಕೆಯ ಸಂಪಾದಕರಾಗಿ 'ನಿರಂಜನ'

ಪ್ರಗತಿಶೀಲ ಸಾಹಿತ್ಯದಲ್ಲಿ ಮೇರು ಸ್ಥಾನವನ್ನು ಪಡೆದಿದ್ದ ಕತೆಗಾರ, ಪತ್ರಕರ್ತ, ಕಾದಂಬರಿಕಾರ, ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿ 'ಚಿರಸ್ಮರಣೆ', 'ಮೃತ್ಯುಂಜಯ' ದಂತಹ ಅದ್ಭುತ ಕಾದಂಬರಿಗಳನ್ನು ಕೊಟ್ಟ "ವಿಶ್ವಕಥಾ ಕೋಶ" ಮತ್ತು 'ಜ್ಞಾನಗಂಗೋತ್ರಿ'ಯಂತಹ ಸಂಪುಟಗಳಿಗೆ ಸಂಪಾದಕರಾಗಿ ಚಿರಸ್ಥಾಯಿಯಾದ ಕೆಲಸ ಮಾಡಿದ ನಿರಂಜನರು ಹುಟ್ಟಿ 2024ಕ್ಕೆ ನೂರು ವರ್ಷಗಳು ಸಂದಿವೆ.

ದುಡಿಯುವ ಜನತೆಯನ್ನು ಸಂಘಟಿಸಿ, ಹಾಲಿ ಇರುವ ಶೋಷಕ ಭೂಮಾಲಕ ಬಂಡವಾಳಶಾಹಿ ಸಮಾಜವನ್ನು ಬದಲಾಯಿಸಿ, ಶ್ರಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಪಣತೊಟ್ಟಿರುವ ಕಮ್ಯೂನಿಸ್ಟ್ ಪಕ್ಷಗಳಿಗೆ ಪತ್ರಿಕೆ ಎಂಬುದು ತುಂಬಾ ಮಹತ್ವವಾದದ್ದು. ಮಾರ್ಕ್ಸ್‌ವಾದವನ್ನು ಪ್ರಾಯೋಗಿಕವಾಗಿ ರಷ್ಯಾದಲ್ಲಿ ಜಾರಿಗೊಳಿಸಲು ಕ್ರಾಂತಿಯ ನೇತೃತ್ವ ನೀಡಿದ ಸಂಗಾತಿ ವಿ.ಐ.ಲೆನಿನ್ ಅವರು ಕಮ್ಯೂನಿಸ್ಟ್ ಪಕ್ಷಗಳಿಗೆ ಪತ್ರಿಕೆಯ ಮಹತ್ವದ ಕುರಿತು ಹೀಗೆ ಹೇಳುತ್ತಾರೆ. "ಪಕ್ಷದ ಪತ್ರಿಕೆಯು ಸಾಮೂಹಿಕ ಪ್ರಚಾರಕ, ಸಾಮೂಹಿಕ ಚಳುವಳಿಕಾರ ಮಾತ್ರವಲ್ಲ, ಸಾಮೂಹಿಕ ಸಂಘಟಕ ಕೂಡಾ". ಹೀಗೆ ಪತ್ರಿಕೆಯ ಮಹತ್ವವನ್ನು ಅರಿತ ಕಮ್ಯೂನಿಸ್ಟ್ ಪಕ್ಷಗಳು ತಮ್ಮ ಕೆಲಸವನ್ನು ಪತ್ರಿಕೆಗಳ ಮೂಲಕ ಆರಂಭಿಸಿರುವ ಮತ್ತು ಜನರ ಪ್ರಜ್ಞಾಮಟ್ಟವನ್ನು ಎತ್ತರಿಸಲು ಪತ್ರಿಕೆಗಳನ್ನು ಪರಿಣಾಮಕಾರಿಯಾಗಿ ಬಳಸಿರುವ ಹಲವು ದಾಖಲೆಗಳು ಇತಿಹಾಸದಲ್ಲಿ ಲಭ್ಯವಾಗುತ್ತವೆ.

ಅವರ ಕೆಲಸದ ಶಿಸ್ತು ನನ್ನನ್ನು ದಂಗುಬಡಿಸುತ್ತಿತ್ತು: ಸಾಹಿತಿ ಚನ್ನವೀರ ಕಣವಿ

ಭಾರತ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಘಟಕವು ತನ್ನ ಪಕ್ಷದ ಮುಖವಾಣಿಯಾಗಿ 'ಜನಶಕ್ತಿ'ಯನ್ನು 1947 ಮೇ 1 ರಂದು ವಿಶ್ವಕಾರ್ಮಿಕ ದಿನದಂದು ಹುಬ್ಬಳ್ಳಿಯಿಂದ ಆರಂಭಿಸಿತು. ಈ ಕುರಿತು ಹಿರಿಯ ಸಾಹಿತಿ ಚನ್ನವೀರ ಕಣವಿಯವರು ಹೀಗೆ ಹೇಳುತ್ತಾರೆ: "ಕುಳುಕುಂದರ ಸಂಪಾದಕತ್ವದಲ್ಲಿ 1947 ಮೇ 1 ರಂದು 'ಜನಶಕ್ತಿ' ಪ್ರಾರಂಭವಾಯಿತು. ನಾನು ಆಗೊಮ್ಮೆ ಈಗೊಮ್ಮೆ 'ಜನಶಕ್ತಿ'ಯ ಕಾರ್ಯಾಲಯಕ್ಕೆ ಹೋಗುತ್ತಿದ್ದೆ. ನನ್ನನ್ನು ನೋಡಿ ನಸುನಕ್ಕು, ಒಂದೆರಡು ಮಾತಾಡಿ ಮರುಕ್ಷಣದಲ್ಲಿಯೇ ಕುಳುಕುಂದ ತಮ್ಮ ಕೆಲಸದಲ್ಲಿ ಮಗ್ನರಾಗಿ ಬಿಡುತ್ತಿದ್ದರು. ಜೊತೆಗೆ ಶಿವೇಶ್ವರ, ಕೆ.ಸದಾಶಿವ, ಕೆ.ಶ್ರೀಧರ್ ಎಲ್ಲರೂ ಮೇಜಿಗೆ ತಲೆಬಗ್ಗಿಸಿ ಪತ್ರಿಕೆಯ ಬರವಣಿಗೆಯಲ್ಲಿ ತೊಡಗಿದವರು ಕೆಲಸ ಪೂರೈಸಿದ ಮೇಲೆಯೇ ಮೇಲೇಳುತ್ತಿದ್ದರು. ಆಮೇಲೆ ಸಮೀಪದ ಹೋಟೆಲಿನಲ್ಲಿ ದೋಸೆ, ಚಹ ಇತ್ಯಾದಿ ಸೇವನೆ. ಅವರ ಕೆಲಸದ ಶಿಸ್ತು ಮಾತ್ರ ನನ್ನನ್ನು ದಂಗುಬಡಿಸುತ್ತಿತ್ತು."

ಸಾಹಿತಿ ಚನ್ನವೀರ ಕಣವಿಯವರು ಮುಂದುವರಿದು ಹೀಗೆ ಬರೆಯುತ್ತಾರೆ;



'ಜನಶಕ್ತಿ' ಶ್ರಮಜೀವಿ ವರ್ಗದ ರಾಜಕೀಯ ಸಾಪ್ತಾಹಿಕವೆನಿಸಿದ್ದರೂ, ಸಾಹಿತ್ಯಕವಾದ ವಿಚಾರಗಳು, ಏಕೀಕರಣ ಚಳುವಳಿಗೆ ಸಂಬಂಧಪಟ್ಟ ಲೇಖನಗಳು ಅದರಲ್ಲಿ ಬರುತ್ತಿದ್ದವಲ್ಲದೆ, ಸಣ್ಣ ಕತೆ, ಕವಿತೆಗಳೂ ಕಾಣಿಸಿಕೊಳ್ಳುತ್ತಿದ್ದವು. ಪಕ್ಷದ ವಿಚಾರವೇನೇ ಇರಲಿ, ಕುಳುಕುಂದರ ಜಾದೂಗಾರಿಕೆಯಿಂದ ಪತ್ರಿಕೆಯು ಸಾಹಿತಿಗಳಿಗೆ ಅಪ್ರಿಯವೆನಿಸಿರಲಿಲ್ಲ. ಆಗ ನನ್ನಿಂದಲೂ ಒಂದು ಕಥೆ ಬರೆಯಿಸಿದ ಶ್ರೇಯಸ್ಸು ಕುಳುಕುಂದರಿಗೆ ಸಲ್ಲುತ್ತದೆ. ಹಳ್ಳಿಯ ಜೀವನದ ನನ್ನ ಅನುಭವದಿಂದ ರೈತನೊಬ್ಬನ ಸಂಸಾರದ ಕಷ್ಟವನ್ನು ಚಿತ್ರಿಸಿದ ಆ ಕಥೆಯ ಹೆಸರು 'ಮಣ್ಣಿನ ಮಕ್ಕಳು' 1947 ಜುಲೈ 13ರ 'ಜನಶಕ್ತಿ'ಯಲ್ಲಿ ಪ್ರಕಟವಾಯಿತು.

ಕರ್ನಾಟಕ ಏಕೀಕರಣವಾದ ಮೇಲೆ 1957 ಮೇ ತಿಂಗಳು ಧಾರವಾಡದಲ್ಲಿ, ಕುವೆಂಪು ಅಧ್ಯಕ್ಷತೆಯಲ್ಲಿ ಪ್ರಥಮ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನದ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ನನಗೆ ಒದಗಿದ್ದಿತು. ಕಾರ್ಯಕ್ರಮಗಳ ಸಂಯೋಜನೆಯಲ್ಲಿ ಪ್ರಥಮ ಬಾರಿಗೆ ಹೊಸ ಹಾದಿ ಹಾಕಿಕೊಟ್ಟ ಸಮ್ಮೇಳನ ಅದಾಗಿದ್ದಿತು. ಗೋಕಾಕರು ಅಧ್ಯಕ್ಷರಾಗಿದ್ದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಲು ನಿರಂಜನರನ್ನು ಆಮಂತ್ರಿಸಲಾಗಿತ್ತು. 'ಸಾಹಿತಿಯು ತನ್ನ ತತ್ವ ಹಾಗೂ ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸಲು ಸಾಧ್ಯವೆ?' ಎಂಬುದು ಅದರ ವಿಷಯ. "ಯಾವುದೇ ತತ್ವದ ಪ್ರಚಾರಕ ಇಲ್ಲವೆ ಆರಾಧಕ ಆ ತತ್ವದ ಪ್ರತಿಪಾದನೆಗೆಂದೇ ಸಿದ್ಧಗೊಳಿಸುವ ಬರವಣಿಗೆ ಎಂದಿಗೂ ಸಾಹಿತ್ಯವೆನಿಸದು. ಬರೆಯುವವನು ಮುಖ್ಯತಃ, ಮೂಲತಃ ಪ್ರಾಮಾಣಿಕ ಕಲಾವಿದನಾಗಿದ್ದರೆ ಆತನ ತತ್ವನಿಷ್ಠೆಯಿಂದ, ನಂಬುಗೆಗಳಿಂದ ಕಲೆಗೆ ಹಾನಿಯೊದಗದು. ಅಷ್ಟೇ ಅಲ್ಲ, ಆ ಸಾಹಿತಿ ತನ್ನ ತತ್ವ ನಂಬುಗೆಗಳನ್ನು ಕಲೆಗೆ ವ್ಯತಿರಿಕ್ತವಾಗದ ಹಾಗೆ ಅಭಿವ್ಯಕ್ತಿಗೊಳಿಸುವುದು ದುಸ್ಸಾಧ್ಯವಾಗದು' ಎಂದು ನಿರಂಜನ ಪ್ರತಿಪಾದಿಸಿದರು. ಅವರು ಕಮ್ಯೂನಿಸ್ಟ್ ಪಕ್ಷದಿಂದ ಬಿಡುಗಡೆ ಪಡೆದು ಆಗಲೇ ಆರು ವರುಷವಾಗಿತ್ತು.

ಉಳಿದ ಎಷ್ಟೋ ವಿಷಯಗಳಲ್ಲಿ ವ್ಯತ್ಯಾಸವಿದ್ದರೂ ನಿರಂತರ ಬರವಣಿಗೆ, ದಣಿವರಿಯದ ದುಡಿಮೆ ಮುಂತಾದ ಸಂಗತಿಗಳಲ್ಲಿ ಕಾರಂತರ ತರುವಾಯ ನನ್ನ ಕಣ್ಣೆದುರು ನಿಲ್ಲುವ ಚಿತ್ರ ನಿರಂಜನರದು. (ಇಬ್ಬರೂ ದಕ್ಷಿಣ ಕನ್ನಡ ಜಿಲ್ಲೆಯವರೆ, ಆದರೆ ಇಬ್ಬರಿಗೂ ಇಪ್ಪತ್ತು ವರ್ಷಗಳ ಅಂತರ.) ಎಂದು ಕಣವಿಯವರು ಹೇಳುತ್ತಾರೆ.

ತಲೆಮರೆಸಿ ಕುಳಿತು 'ಮ್ಯಾಟರ್' ಬರೆಯುತಿದ್ದರು; ಗೀತಾ ಕುಲಕರ್ಣಿ

ಶ್ರೀಮತಿ ಗೀತಾ ಕುಲಕರ್ಣಿಯವರು ತಮ್ಮ ಬರಹದಲ್ಲಿ "ಶಿವರಾಯರು, ಸದಾಶಿವ, ಶಿವೇಶ್ವರ ದೊಡ್ಡಮನಿ, ಶ್ರೀಧರ್, ಹುಬ್ಬಳ್ಳಿಯಲ್ಲಿ 'ಜನಶಕ್ತಿ' ವಾರಪತ್ರಿಕೆ ಪ್ರಾರಂಭಿಸಿದರು. ಅದರ ತುಂಬ 'ಕ್ರಾಂತಿಕಾರಕ' ಬರವಣಿಗೆ, ಮುಂದಿನ ವರ್ಷ ಶಿವರಾಯರು ಭೂಗತರಾದರು. ಪತ್ರಿಕೆಗಾಗಿ ಬೇರೆ ಮುದ್ರಣಾಲಯ ಹುಡುಕಬೇಕಾಯಿತು. ಧಾರವಾಡದಲ್ಲಿದ್ದ ನಮ್ಮ 'ಸಾಧನಾ ಪ್ರೆಸ್'ಗೆ ಸದಾಶಿವ ಬಂದು ನನ್ನ ಪತಿ ಶೇ.ಗೋ.ಕುಲಕರ್ಣಿಯವರ ಜತೆ ಮಾತನಾಡಿ ಹೊಸ ಏರ್ಪಾಡು ಮಾಡಿಕೊಂಡ. ನಮ್ಮಲ್ಲಿ ಮುದ್ರಣವಾಗುತ್ತಿದ್ದ ಪತ್ರಿಕೆಗೆ ಎಲ್ಲೋ ತಲೆಮರೆಸಿ ಕುಳಿತು ಕುಳುಕುಂದ ಶಿವರಾಯರು 'ಮ್ಯಾಟರ್' ಬರೆಯುತಿದ್ದರು. ಮುಂದೆ ಆ ಪತ್ರಿಕೆ ನಿಷೇಧಿಸಲ್ಪಟ್ಟಿತು. ಸದಾಶಿವನನ್ನು ಬಂಧಿಸಿದರು."

> ಸನ್ಮಾನ ಸಮಾರಂಭವೊಂದರಲ್ಲಿ ನಿರಂಜನ ಹೇಳಿದರು: "ನಾನು ಕನಸುಗಳನ್ನು ಹೊತ್ತುಕೊಂಡು ಹೊರಟವನು. ಹೀಗಾಗಿ ನನಗೆ ಬದುಕಿನಲ್ಲಿ ಕನಸುಗಳು ಮುಖ್ಯವೇ ಹೊರತು, ವಾಸ್ತವದ ಫಲಾಫಲಗಳಲ್ಲ." ತಮ್ಮ ಕನಸುಗಳನ್ನು ರಾಜಕೀಯದಲ್ಲಿ, ಸಾಹಿತ್ಯದಲ್ಲಿ ಅವರು ಧಾರಾಳವಾಗಿ ಹಂಚಿಕೊಂಡರು. ಬದುಕಿನಲ್ಲಿ ಇವನ್ನು ಎಲ್ಲರ ಹೃದಯಕ್ಕೆ ತಲುಪಿಸಲು ಹೋರಾಡಿದರು. ಈ ಹೋರಾಟದ ದಾರಿ ಅವರಿಗೆ ಬರಿ ಸುಖದ್ದಷ್ಟೇ ಆಗಿದ್ದಿಲ್ಲ. ಎಷ್ಟೋ ಕಷ್ಟಗಳನ್ನು ಅವರು ಎದುರಿಸಿ ಧೈರ್ಯವಾಗಿ ನಿಂತರು. ಈ ಧೈರ್ಯ, ಛಲ, ಅವಿಶ್ರಾಂತ ದುಡಿಮೆಗಳ ಫಲವಾಗಿ ಅಪಾರ ಸಾಹಿತ್ಯವನ್ನು ಸೃಷ್ಟಿಸಿದರು."
>
> *–ಹಿರಿಯ ಕವಿ ಸುರಂ ಎಕ್ಕುಂಡಿ*

ನಡೆ, ನುಡಿ, ಬರಹಗಳಿಗೆ ಮನಸೋತ ಎಷ್ಟೋ ಮಂದಿ...

ಆಗಿನ ಕಾಲದಲ್ಲಿ ನಿರಂಜನರ ನಡೆ, ನುಡಿ, ಬರಹಗಳಿಗೆ ಮನಸೋತ ಎಷ್ಟೋ ಮಂದಿ ಪಕ್ಷದ ಹಿತೈಷಿಗಳೂ, ಸದಸ್ಯರೂ ಆದರು ಎಂದಿರುವ ನಿರಂಜನರ ಸ್ನೇಹಿತರಾಗಿದ್ದ ವಾಸುದೇವ ಅವರು 'ಜನಶಕ್ತಿ' ಪತ್ರಿಕೆಯ ಕುರಿತು ಹೀಗೆ ಬರೆಯುತ್ತಾರೆ. "ನಿರಂಜನರು ಕುಳುಕುಂದ ಶಿವರಾಯರಾಗಿದ್ದಾಗಿನಿಂದಲೂ ಅವರ ಆದರಾಭಿಮಾನಗಳನ್ನು ಪಡೆದ ಆತ್ಮೀಯರಲ್ಲೊಬ್ಬ ನಾನು. ಅವರು 'ಜನಶಕ್ತಿ' ಪತ್ರಿಕೆಯ ಸಂಪಾದಕರಾಗುವ ವೇಳೆಗೆ ಸ್ವತಃ ಹೆಸರಾಂತ ಕತೆಗಾರರಾಗಿಯೂ, ವಿಚಾರಶೀಲ ಲೇಖಕರಾಗಿಯೂ ಕನ್ನಡಿಗರಿಗೆ ಪರಿಚಿತರಾಗಿದ್ದರು. ಅನೇಕ ಪತ್ರಿಕೆಗಳಲ್ಲಿ ದುಡಿದು ಪಳಗಿದ್ದ ಅವರ ಲೇಖನಗಳು ತುಂಬ ಜನಪ್ರಿಯವಾಗಿದ್ದುವು. ಅವರ ಕತೆಗಳಲ್ಲಿ ಬಡಜನರ ಬಗೆಗೆ ಅನುಕಂಪ, ಶೋಷಕರು ಮತ್ತು ಅಧಿಕಾರ ವರ್ಗದವರ ಬಗೆಗೆ ವಿರೋಧ ವ್ಯಕ್ತವಾಗುತ್ತಿತ್ತು. ಬರಿಯ ಮನೋರಂಜನೆಯ ಧೋರಣೆ ಅವುಗಳಲ್ಲಿರಲಿಲ್ಲ.

'ಜನಶಕ್ತಿ'ಯಲ್ಲಿ ಅವರು 'ಸಂಗಾತಿ ಸಂಚಯ' ಎಂಬ ಅಂಕಣವೊಂದನ್ನು ಪ್ರತಿವಾರವೂ ಬರೆಯುತ್ತಿದ್ದರು. ಈ ಅಂಕಣದಲ್ಲಿ ಆಕರ್ಷಕವಾಗಿ, ಚುಟುಕಾದ, ತೀಕ್ಷ್ಣ, ಮನಸ್ಸಿಗೆ ನಾಟುವಂಥ ಮಾತುಗಳಿರುತ್ತಿದ್ದುವು. ಕಮ್ಯೂನಿಸ್ಟ್ ಪಕ್ಷದ ಬಗೆಗೆ ಯಾರಲ್ಲಾದರೂ ಅದು ಕುತೂಹಲವನ್ನು ಮೂಡಿಸುತ್ತಿತ್ತು. ಸಹಾನುಭೂತಿಯನ್ನು ಹುಟ್ಟಿಸುತ್ತಿತ್ತು. ಇವರ ಟೀಕೆಯಿಂದ ಮೊರಾರ್ಜಿ ಸರಕಾರದ ಕೋಪಕ್ಕೆ ಅವರು ತುತ್ತಾಗಬೇಕಾಯಿತು.

ವಸ್ತುಶಃ ನಾನೂ ಅವರ ಬರಹಗಳಿಂದಲೇ ಆಕರ್ಷಿತನಾದವನು. ಮುಂಬಯಿಯಲ್ಲಿ ಸೋವಿಯತ್ ಮಿತ್ರ ಸಂಘ, ಜನತಾ ರಂಗಭೂಮಿ, ಪ್ರಗತಿಶೀಲ ಲೇಖಕರ ಸಂಘ ಇತ್ಯಾದಿಗಳಲ್ಲಿ ನಾನು ಕೆಲಸ ಮಾಡತೊಡಗಿದ್ದೆ. ಕುಳುಕುಂದರು ಮುಂಬಯಿಗೆ ಬಂದಾಗ ನನ್ನ ಮನೆಯಲ್ಲೇ ತಂಗುತ್ತಿದ್ದರು. ಭೂಗತರಾಗಿದ್ದಾಗಲೂ ಸಹ. ನಾನು ಆಗ 'ಜನಶಕ್ತಿ' ಹಾಗೂ 'ಅರುಣ' ಪತ್ರಿಕೆಗಳನ್ನು ತರಿಸಿಕೊಂಡು ಕನ್ನಡಿಗ ಸಂಗಾತಿಗಳಿಗೆ ಹಂಚುತ್ತಿದ್ದೆ. ಕನ್ನಡ ವಾರ್ತಾಪತ್ರಿಕೆಗಳು ಅನಿವಾರ್ಯವಾಗಿ ನಿಂತಾಗ ಸಂಗಾತಿ ತೋನ್ಸೆ ಸಂಜೀವ ಹೆಗ್ಗಡೆಯವರು, ಕೆ.ವಿ. ಶೆಟ್ಟರು ಇನ್ನಿತರ ಸಂಗಾತಿಗಳ ಸಹಕಾರದಿಂದ 'ಸಮದರ್ಶಿ' ಎಂಬ ಮಾಸ ಪತ್ರಿಕೆಯನ್ನು ಸ್ವಲ್ಪ ಸಮಯ ನಡೆಸಲು ಪ್ರಯತ್ನ ಮಾಡಿದಾಗ, ಕುಳುಕುಂದ ಶಿವರಾಯರು ನಮಗೆ ಸಂಪೂರ್ಣ ಸಹಕಾರ ನೀಡಿದರು.

ನಿರಂಜನರು ಕನ್ನಡದ ಉತ್ತಮ ವರದಿಗಾರರಾಗಿದ್ದರು. ಧೀರ ರಾಜಕೀಯ ಹೋರಾಟಗಾರರಾಗಿದ್ದರು. ನಾಟಕಗಳನ್ನು ರಚಿಸಿದ್ದಾರೆ. ನಾಟಕಗಳಲ್ಲಿ ಅಭಿನಯಿಸಿದ್ದಾರೆ.
ಸ್ಂಗೀತಾಸ್ವಾದ್ನ್ಂುು

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**